ಪ್ರವಾದಿ ಮುಹಮ್ಮದ್ ಹೇಳಿದರು:

“ನಿನ್ನ ಸಹೋದರ ಮರ್ದಿತನಿರಲಿ
ಅಥವಾ ದೌರ್ಜನ್ಯ ಎಸಗುವವನಾಗಿರಲಿ,
ಅವನಿಗೆ ನೀನು ಸಹಾಯ ಮಾಡು.”
“ಜನರು ಕೇಳಿದರು,
ಆತ ಮರ್ದಿತನಾಗಿದ್ದರೆ ಸಹಾಯ ಮಾಡಬಹುದು,
ಆದರೆ ಮರ್ದನ ಎಸಗುವವನಾಗಿದ್ದರೆ
ಆತನಿಗೆ ಸಹಾಯ ಮಾಡುವುದು ಹೇಗೆ?”
ಪ್ರವಾದಿವರ್ಯರು ಉತ್ತರಿಸಿದರು,
“ಆತ ಇತರರನ್ನು ಮರ್ದಿಸುವುದರಿಂದ
ತಡೆಯುವುದರ ಮೂಲಕ”

“ಅನ್ಯಾಯ ಎಲ್ಲೇ ನಡೆಯಲಿ,
ಅದು ಸಾರ್ವತ್ರಿಕವಾಗಿ
ನ್ಯಾಯಕ್ಕೆ ದೊಡ್ಡ ಬೆದರಿಕೆಯಾಗಿದೆ.”
ಮಾರ್ಟಿನ್ ಲೂಥರ್ ಕಿಂಗ್

“ಯುದ್ಧವೇ ಒಂದು
ಭಯೋತ್ಪಾದನೆಯಾಗಿರುವಾಗ,
ಭಯೋತ್ಪಾದನೆಯ ವಿರುದ್ಧ
ಯುದ್ಧ ಮಾಡುವುದಾದರೂ ಹೇಗೆ?”
ಹಾವರ್ಡ್ ಝಿನ್

**ಉಗ್ರವಾದದ ವಿರುದ್ಧ ಒಂದಾಗೋಣ –**

United Against Extremism

ಮುದ್ರಣ ಹಕ್ಕು 2016 – ಸಯ್ಯದ್ ಹಾಮಿದ್ ಮುಹ್ಸಿನ್

ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಲೇಖಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗದ ಛಾಯಾ ಪ್ರತಿ, ಮರು ಮುದ್ರಣ, ವಿಷಯ ಸಂಗ್ರಹಿಸುವುದು ಸೇರಿದಂತೆ ಯಾವುದೇ ರೀತಿಯ ತಾಂತ್ರಿಕ ಮತ್ತು ವಿದ್ಯುನ್ಮಾನ ಪ್ರಸಾರ ಮಾಡುವಂತಿಲ್ಲ.

ಆದರೆ ಈ ಪುಸ್ತಕವನ್ನು ಯಾವುದೇ ಬದಲಾವಣೆ ಇಲ್ಲದೆ ಪುನರ್ ಮುದ್ರಿಸಲು ಉಚಿತ ಅನುಮತಿ ನೀಡಲಾಗುವುದು. ಉತ್ತಮ ಗುಣಮಟ್ಟದ ಮರು ಮುದ್ರಣಕ್ಕಾಗಿ ಆಸಕ್ತರು ಲೇಖಕರನ್ನು ಅಥವಾ ಸಲಾಮ್ ಸೆಂಟರನ್ನು ಸಂಪರ್ಕಿಸಿ ಉಚಿತ ತಂತ್ರಾಂಶ ಅಥವಾ ಮುದ್ರಣ ಫೈಲನ್ನು ಪಡೆಯಬಹುದಾಗಿದೆ.

ಈ ಪುಸ್ತಕವು ನಮ್ಮ ಈ ಕೆಳಗಿನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

(www.misconceptions.in - www.salamcentre.in)

**ಉಚಿತ ವಿತರಣೆಗಾಗಿ ಮುದ್ರಿಸಲಾಗಿದೆ.**

ಮೊದಲ ಮುದ್ರಣ: 5,000 ಮಾರ್ಚ್ 2016

ಮುದ್ರಣ ಮತ್ತು ಪ್ರಕಾಶಕರು:

**ಸಲಾಮ್ ಸೆಂಟರ್**

ನಂ. 65, 1ನೇ ಮುಖ್ಯ ರಸ್ತೆ, ಎಸ್.ಆರ್.ಕೆ. ಗಾರ್ಡನ್,

ಜಯನಗರ, ಬೆಂಗಳೂರು –560041

ದೂರವಾಣಿ: +91 9901129956 / +91 99451 77477/ 080–26639007

# ಈ ಪುಸ್ತಕ ಯಾಕೆ?

ಭಾರತೀಯ ಯುವಕರ ಮೇಲೆ ತೀವ್ರವಾದಿ ಸಿದ್ಧಾಂತ ಯಾವ ರೀತಿ, ಯಾಕೆ, ಹೇಗೆ ಮತ್ತು ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ಅವಲೋಕಿಸುವ ಅಗತ್ಯವನ್ನು ಬೆಂಗಳೂರಿನ ಸಲಾಮ್ ಸೆಂಟರ್ ಮನಗಂಡಿದೆ. ಈ ರೀತಿಯ ಚಿಂತನೆಗಳು ಮುಖ್ಯವಾಗಿ ಎರಡು ಮಾರ್ಗಗಳಿಂದ ಅವರನ್ನು ತಲುಪುತ್ತಿವೆ. ಒಂದು ಇಂಟರ್‌ನೆಟ್‌ನ ಮೂಲಕ ದೊರೆಯುವ ಮುಸ್ಲಿಮ್ ತೀವ್ರವಾದಿಗಳ ಪ್ರಕಟಣೆಗಳಿಂದ, ಎರಡನೆಯದು, ಇಸ್ಲಾಮಿನ ಬಗೆಗಿನ ಪೂರ್ವಗ್ರಹಗಳಿಂದಾಗಿ ಒಂದು ಅವ್ಯಕ್ತ ಭಯ ಬೆಳೆಸಿಕೊಂಡವರಿಂದ. ಇವರನ್ನು ಇಸ್ಲಾಮೋಫೋಬ್‌ಗಳೆಂದೂ ಕರೆಯುತ್ತಾರೆ. ಮುಸ್ಲಿಮ್ ಉಗ್ರವಾದಿಗಳು ಹಿಂಸೆ ಮತ್ತು ಭಯೋತ್ಪಾದನೆಯ ತಮ್ಮ ದ್ವೇಷಪೂರಿತ ವಿಚಾರಗಳನ್ನು ಸಮರ್ಥಿಸಲು ಮತ್ತು ಅದಕ್ಕೆ ಬೆಂಬಲ ಕ್ರೋಢೀಕರಿಸಲು ಕುರ್‌ಆನ್‌ನ ಸೂಕ್ತಗಳನ್ನು ಮತ್ತು ಪ್ರವಾದಿ ಚರ್ಯೆಯನ್ನು ತಿರುಚುವ ಅಥವಾ ದುರ್ವ್ಯಾಖ್ಯಾನಿಸುವ ಕೆಲಸಕ್ಕೆ ಇಳಿಯುತ್ತಾರೆ. ಇಸ್ಲಾಮೋಫೋಬ್‌ಗಳು ಕೂಡಾ ಮುಸ್ಲಿಮರ ಬಗ್ಗೆ ದ್ವೇಷ ಕೆರಳಿಸಲು ಹಾಗೂ ಇಸ್ಲಾಮ್ ಧರ್ಮಕ್ಕೆ ಮಸಿಬಳಿಯಲು ಇದೇ ರೀತಿ ಕುರ್‌ಆನ್ ವಚನಗಳನ್ನು ತಪ್ಪಾಗಿ ಉದ್ಧರಿಸಿ, ಇಸ್ಲಾಮ್ ಭಯೋತ್ಪಾದನೆಯನ್ನು ಸಮರ್ಥಿಸುತ್ತದೆ ಎಂದು ವಾದಿಸುತ್ತಾರೆ.

ಮುಸ್ಲಿಮ್ ಮತ್ತು ಮುಸ್ಲಿಮೇತರ ಎಂಬ ಭೇದವಿಲ್ಲದೆ ಭಾರತದ ಬಹುಸಂಖ್ಯಾತ ಜನವರ್ಗವು ಈ ಎರಡು ಅತಿರೇಕದ ನಿಲುವುಗಳನ್ನು ಒಪ್ಪುವುದಿಲ್ಲ. ಆದರೆ ಅವರ ವಿವೇಕದ, ಸಹಾನುಭೂತಿಯ, ಸಮಭಾವ ಮತ್ತು ಬಹುಸಂಸ್ಕೃತಿಯ ಮಾತುಗಳು ದ್ವೇಷಕೋರರ ಆರ್ಭಟ ಹಾಗೂ ಮಾಧ್ಯಮಗಳ ಅತಿರಂಜಿತ ಶೀರ್ಷಿಕೆಗಳ ಮಧ್ಯೆ ಕಳೆದು ಹೋಗುತ್ತಿವೆ. ಇವರು ನಿರ್ಮಿಸುತ್ತಿರುವ ದ್ವೇಷದ ಕಂದರಗಳನ್ನು ಅಳಿಸುವ ರಚನಾತ್ಮಕ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕಾಗಿದೆ.

ಕಾನೂನು ಅನುಷ್ಠಾನ ಮತ್ತು ಬೇಹುಗಾರಿಕೆಗೆ ಸಂಬಂಧಿಸಿದ ಪ್ರಶ್ನೆಗಳಿಗೂ ಇಲ್ಲಿ ಉತ್ತರ ನೀಡಲು ಪ್ರಯತ್ನಿಸಲಾಗಿದೆ. ಯಾವುದೇ ಯುವಕ ಅಥವಾ ಯುವತಿ ಹಿಂಸಾತ್ಮಕವಾದ ತೀವ್ರವಾದದತ್ತ ಒಲವು ಬೆಳೆಸುತ್ತಿರುವ ಬಗ್ಗೆ ನಿಮಗೆ ಸಂದೇಹ ಉಂಟಾದರೆ ನೀವು ಏನು ಮಾಡಬೇಕು, ಆನ್‌ಲೈನ್ ಬೆದರಿಕೆಗಳಿಂದ ನಿಮ್ಮನ್ನು ಮತ್ತು ಕುಟುಂಬಿಕರನ್ನು ಹೇಗೆ ರಕ್ಷಿಸಬೇಕೆಂಬ ಬಗ್ಗೆ ಮಾಹಿತಿ ನೀಡುವ ಅಂತರ್ಜಾಲದ ವಿಳಾಸಗಳ ಪಟ್ಟಿಯನ್ನು ನೀಡುತ್ತದೆ. ಈ ಪುಸ್ತಕವು ನಮ್ಮ ದೇಶವನ್ನು ಮತ್ತು ಪ್ರಜೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ನಾಗರಿಕರೆಂಬ ನೆಲೆಯಲ್ಲಿ ನಮ್ಮ ಕರ್ತವ್ಯಗಳೇನು

ಎಂಬುದನ್ನು ವಿವರಿಸುತ್ತದೆ. ಜತೆಗೆ ನಾಗರಿಕ ಹಕ್ಕುಗಳಿಗೆ ಚ್ಯುತಿಯುಂಟಾದಾಗ ಏನು ಮಾಡಬೇಕು ಎಂಬುದನ್ನೂ ತಿಳಿಸುತ್ತದೆ.

ಆಧುನಿಕ ಜಗತ್ತಿನಲ್ಲಿ ನಿಜವಾಗಿ ಸಂಘರ್ಷ ನಡೆಯುತ್ತಿರುವುದು ಮುಸಲ್ಮಾನರು ಮತ್ತು ಮುಸ್ಲಿಮೇತರರ ಮಧ್ಯೆಯಲ್ಲ; ಮೃದು ನೀತಿಯನ್ನನುಸರಿಸುವವರು ಮತ್ತು ಅತಿರೇಕವೆಸಗುವವರ ನಡುವೆ. ಅದು ಇಸ್ಲಾಮ್‌ನಲ್ಲಾಗಲೀ, ಹಿಂದೂಗಳಲ್ಲಾಗಲಿ, ಕ್ರೈಸ್ತ ಧರ್ಮದಲ್ಲಾಗಲೀ, ಯಹೂದಿ ಧರ್ಮದಲ್ಲಾಗಲೀ, ಅಥವಾ ಬೌದ್ಧ ಧರ್ಮದಲ್ಲೇ ಇರಲಿ. ನಾವು ಉಗ್ರವಾದಕ್ಕೆ ಬದಲಾಗಿ ಮೃದುತ್ವವನ್ನು ಆಯ್ದುಕೊಳ್ಳಬೇಕು. ಪರಸ್ಪರ ಸಂಘರ್ಷದ ಬದಲಿಗೆ ಸಂವಾದಕ್ಕೆ ಮುಂದಾಗಬೇಕು. ಪರಸ್ಪರ ಕಾಲೆಳೆಯುವುದಕ್ಕಿಂತ ಕೈಜೋಡಿಸಿ ಕೆಲಸ ಮಾಡಬೇಕು.

ಮುಸ್ಲಿಮರು ಎಲ್ಲ ಸಂದರ್ಭಗಳಲ್ಲೂ ನ್ಯಾಯವನ್ನೇ ಪಾಲಿಸಬೇಕೆಂದು ಕುರ್‌ಆನ್ ಆದೇಶಿಸುತ್ತದೆ.
ಅಲ್ಲಾಹನು ಕುರ್‌ಆನಿನಲ್ಲಿ ಹೇಳುತ್ತಾನೆ.

> “ಸತ್ಯವಿಶ್ವಾಸಿಗಳೇ, ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೇ. ಕಕ್ಷಿಯು ಧನಿಕನಿರಲಿ ಅಥವಾ ಬಡವನಿರಲಿ ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿರುತ್ತಾನೆ. ಆದುದರಿಂದ ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯ ಪರಿಪಾಲನೆಯಿಂದ ಸರಿಯಬೇಡಿರಿ. ನೀವು ಗೂಢಾರ್ಥದ ಮಾತುಗಳನ್ನಾಡಿದರೆ ಅಥವಾ ಸತ್ಯದಿಂದ ನುಣುಚಿಕೊಂಡರೆ, ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಕರ್ಮಗಳ ಅರಿವು ಅಲ್ಲಾಹನಿಗಿದೆಯೆಂಬುದು ಚೆನ್ನಾಗಿ ತಿಳಿದಿರಲಿ.
> (ಪವಿತ್ರ ಕುರ್‌ಆನ್ 4:135)

ಸಮಾಜದ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿ ಏನು ಎಂಬುದನ್ನು ಇಸ್ಲಾಮ್ ಸ್ಪಷ್ಟವಾಗಿ ಪ್ರತಿಪಾದಿಸಿದೆ ಮತ್ತು ಹಿಂಸೆಯನ್ನು ಖಂಡಿಸಿದೆ.

ಮಾರ್ಚ್ 20, 2016

ಸಯ್ಯದ್ ಹಾಮಿದ್ ಮುಹ್ಸಿನ್
ಅಧ್ಯಕ್ಷರು, ಸಲಾಮ್ ಸೆಂಟರ್, ಬೆಂಗಳೂರು

# ಮುಸ್ಲಿಮರು ಐಸಿಸ್‌ನ್ನು ಖಂಡಿಸುತ್ತಾರೆ

ಕಲಹಪೀಡಿತ ಸಿರಿಯಾ ಮತ್ತು ಇರಾಕ್‌ನ ಆಕ್ರಮಿತ ಪ್ರದೇಶಗಳಲ್ಲಿ ಐಸಿಸ್ (ಅರೆಬಿಕ್‌ನಲ್ಲಿ ದಾಯಿಷ್) ನಡೆಸುತ್ತಿರುವ ಹತ್ಯಾಕಾಂಡ ಜನಜನಿತ. ಈ ರಾಕ್ಷಸೀಯ ಸಂಘಟನೆಯು ಒತ್ತೆಯಾಳುಗಳನ್ನು ಹಿಂಸಿಸುವ, ಮಹಿಳೆಯರನ್ನು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದರಿಂದ ತಡೆಯುವ, ತನ್ನ ಅಧೀನದಲ್ಲಿರುವ ಖೈದಿಗಳನ್ನು ಕೊಲ್ಲುವ, ಯಝಿದೀ ಹಾಗೂ ಇತರ ಅಲ್ಪಸಂಖ್ಯಾತ ಸಮುದಾಯದ ಜನರನ್ನು ಗಡೀಪಾರು ಮಾಡುವ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಆತ್ಮಾಹುತಿ ದಾಳಿಗಳನ್ನು ನಡೆಸುವ ಮೂಲಕ ಜಗತ್ತಿನ ಗಮನವನ್ನು ಸೆಳೆದಿದೆ. ಭಯೋತ್ಪಾದಕ ಗುಂಪೊಂದು ಒಂದು ದೊಡ್ಡ ಭೂಭಾಗವನ್ನು ಆಕ್ರಮಿಸಿಕೊಂಡು ಅದನ್ನು ಒಂದು ಸಾರ್ವಭೌಮರಾಷ್ಟ್ರವೆಂದು ಘೋಷಿಸಿರುವುದು ಇತಿಹಾಸದಲ್ಲಿ ಇದೇ ಮೊತ್ತ ಮೊದಲು.

ಪಾಶ್ಚಾತ್ಯ ಮಾಧ್ಯಮಗಳು ಐಸಿಸ್‌ನ್ನು ಇಸ್ಲಾಮಿನೊಂದಿಗೆ ಜೋಡಿಸಿ ಅದರ ಎಲ್ಲ ಕ್ರೂರ ಕೃತ್ಯಗಳನ್ನೂ ಇಸ್ಲಾಮಿನ ತಲೆಗೆ ಕಟ್ಟುತ್ತಿವೆ. ಇದಕ್ಕೆ ಅವರ ಬಳಿಯಿರುವ ಏಕೈಕ ಸಮರ್ಥನೆ ಎಂದರೆ ಐಸಿಸ್ ತಾನು ಇಸ್ಲಾಮಿನ ಪ್ರತಿನಿಧಿ ಎಂದು ಸ್ವಯಂ ಘೋಷಿಸಿಕೊಂಡಿರುವುದು. ಈ ದುರುದ್ದೇಶದ ಚಳವಳಿಯಿಂದ ಇಸ್ಲಾಮಿನ ವರ್ಚಸ್ಸಿಗೆ ಆಗಿರುವ ಧಕ್ಕೆ ಅಷ್ಟಿಷ್ಟಲ್ಲ.

ಅಫ್ಘಾನಿಸ್ತಾನದ ಮೇಲೆ ಆಕ್ರಮಣ ಮಾಡಿದ್ದ ಸೋವಿಯತ್ ರಷ್ಯಾದ ದಾಳಿಕೋರರನ್ನು ಹಿಮ್ಮೆಟ್ಟಿಸಲು ಅಮೇರಿಕ ಮತ್ತು ಇತರ ಪಾಶ್ಚಾತ್ಯ ಶಕ್ತಿಗಳು ಅಫ್ಘಾನ್ ಯೋಧರಿಗೆ ನೀಡಿದ್ದ ನೆರವು ಎಲ್ಲರಿಗೂ ಗೊತ್ತಿರುವಂತದ್ದೇ. ಅಫ್ಘಾನಿಸ್ತಾನದ ಮದ್ರಸಗಳಿಗೆ ಅಮೇರಿಕ ನೀಡಿದ ಅನುದಾನವೇ ಆ ಮದರಸಗಳಲ್ಲಿ ತೀವ್ರವಾದಿಗಳ ಎರಡು ತಲೆಮಾರುಗಳ ಹುಟ್ಟಿಗೆ ಕಾರಣವೆಂಬುದು ಸರ್ವವಿಧಿತ.. ಮುಜಾಹಿದೀನ್ ಮತ್ತು ತಾಲಿಬಾನಿಗಳಿಗೆ ಸೋವಿಯತ್ ಯೂನಿಯನ್‌ನ ವಿರುದ್ಧ ಹೋರಾಡಲು ಹಣ ಮತ್ತು ಯುದ್ಧ ಸಾಮಗ್ರಿಗಳನ್ನು ಒದಗಿಸಿದ್ದು ಕೂಡಾ ಪಾಶ್ಚಾತ್ಯ ರಾಷ್ಟ್ರಗಳೇ. ಅಮೇರಿಕವು ಅವರನ್ನು ಭಯೋತ್ಪಾಕರೆಂದು ಘೋಷಿಸಿದ್ದು 9/11ರ ವರ್ಲ್ಡ್ ಟ್ರೇಡ್ ಸೆಂಟರ್‌ನ ಮೇಲಿನ ಭಯೋತ್ಪಾದಕ ದಾಳಿಯ ನಂತರವೇ.

ಮಧ್ಯಪೂರ್ವದ ಹಲವು ಮುಸ್ಲಿಮ್ ರಾಷ್ಟ್ರಗಳ ಯುವಕರಲ್ಲಿ ತೀವ್ರವಾದಿ

ಚಿಂತನೆಗಳನ್ನು ಬೆಳೆಸಿ ತನ್ಮೂಲಕ ಇಸ್ಲಾಮಿನ ಬಗ್ಗೆ ಭೀತಿಯನ್ನು ಜಗತ್ತಿನಾದ್ಯಂತ ಹಬ್ಬಿಸುವ ಮಹಾನ್ ಯೋಜನೆಯನ್ನು ಅಮೇರಿಕ ರೂಪಿಸಿದೆ ಎಂಬ ಗುಮಾನಿ ಇತ್ತೀಚೆಗೆ ಹೆಚ್ಚು ಹೆಚ್ಚು ಪ್ರಬಲವಾಗುತ್ತಿದೆ. ತೈಲಸಂಪತ್ತಿನಿಂದ ನಳನಳಿಸುತ್ತಿರುವ ಮಧ್ಯಪೂರ್ವದ ದೇಶಗಳನ್ನು ಪರಸ್ಪರ ಹೊಡೆದಾಡುವಂತೆ ಮಾಡಿ ಇಸ್ರೇಲ್‌ನ ಅಸ್ತಿತ್ವಕ್ಕೆ ಇರುವ ಬೆದರಿಕೆಯನ್ನು ದೂರ ಮಾಡುವುದು ಅಮೇರಿಕದ ತಂತ್ರವೆಂದು ಹೇಳಲಾಗುತ್ತದೆ. ಅಲ್ ಖಾಯಿದಾ ಮತ್ತು ಐಸಿಸ್‌ನ ಸೃಷ್ಟಿಯೂ ಈ ಕಾರ್ಯತಂತ್ರದ ಭಾಗ ಎನ್ನಲಾಗುತ್ತದೆ. ಆಯುಧಗಳನ್ನು ಉತ್ಪಾದಿಸುವ ಅಮೇರಿಕದ ಲಾಬಿಯೂ ಯುದ್ಧವನ್ನು ಜಗತ್ತಿನಾದ್ಯಂತ ವ್ಯಾಪಿಸಲು ನಿರಂತರ ಒತ್ತಡ ಹೇರುತ್ತಿದ್ದು ಆ ಮೂಲಕ ತನ್ನ ತಿಜೋರಿಯನ್ನು ತುಂಬುವ ಕೆಲಸದಲ್ಲಿ ತೊಡಗಿದೆ.

ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ಇಸ್ಲಾಮಿನ ಹೆಸರಿನಲ್ಲಿ ಯಾರು ಬೇಕಾದರೂ ಏನು ಬೇಕಾದರೂ ಮಾಡಿದರೂ ಅದಕ್ಕೆ ಇಸ್ಲಾಮನ್ನು ಆರೋಪಿಯಾಗಿಸಬೇಕೇ ಎಂಬುದು. ಅದೇ ರೀತಿ, ಐಸಿಸ್‌ನ ದುಷ್ಟ ಕೃತ್ಯಗಳಿಗಾಗಿ ಇಸ್ಲಾಮ್ ಮತ್ತು ಮುಸ್ಲಿಮರನ್ನು ದೂಷಿಸುವುದು ಎಷ್ಟರ ಮಟ್ಟಿಗೆ ಸರಿ?

ಇಸ್ಲಾಮ್ ಯಾವ ವಿಧದಲ್ಲೂ ಹಿಂಸೆಯನ್ನು ಅನುಮೋದಿಸುವುದಿಲ್ಲ. ಆದರೆ ಕೆಲವು ಮುಸ್ಲಿಮರು ತಮ್ಮ ಭೂಭಾಗ ಆಕ್ರಮಣಕ್ಕೊಳಗಾದಾಗ, ಯುದ್ಧದಿಂದಾಗಿ ಅತಂತ್ರ ಸ್ಥಿತಿ ಎದುರಿಸಬೇಕಾಗಿ ಬಂದಾಗ ಅಥವಾ ತಮ್ಮ ಸಂಪನ್ಮೂಲಗಳನ್ನು ಇತರರು ದೋಚುತ್ತಿದ್ದಾರೆಂದು ಭಾವಿಸತೊಡಗಿದಾಗ ಸಹಜವಾಗಿಯೇ ಪ್ರತೀಕಾರಕ್ಕೆ ಇಳಿಯುತ್ತಾರೆ ಮತ್ತು ಅಂತಹ ಸಂದರ್ಭದಲ್ಲಿ ಇಸ್ಲಾಮಿನ ಪಾರಿಭಾಷಿಕಗಳನ್ನು ಮತ್ತು ಸಂಕೇತಗಳನ್ನು ಬಳಸುವ ಸಾಧ್ಯತೆಯೂ ಇರುತ್ತದೆ. ಯಾವುದೇ ಜನತೆ ಈ ರೀತಿ ಹಿಂಸೆಯಲ್ಲಿ ತೊಡಗಿಕೊಳ್ಳುವುದಕ್ಕೆ ಹತ್ತು ಹಲವು ಬಗೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕಾರಣಗಳು ಇರುತ್ತವೆ.

ಆಕ್ರಮಣಕ್ಕೊಳಗಾದವರು ಮುಸ್ಲಿಮರಾದ್ದರಿಂದ ಅವರ ಪಾರಿಭಾಷಿಕಗಳು ನಿರ್ದಿಷ್ಟ ಧಾರ್ಮಿಕ ಸ್ವರೂಪನ್ನು ಪಡೆದುಕೊಳ್ಳುವ ಸಾಧ್ಯತೆಗಳು ಬಹಳಷ್ಟಿವೆ. ಅಮೇರಿಕದಲ್ಲಿ ಕು ಕ್ಲಕ್ಸ್ ಕ್ಲಾನ್ (ಕೆ.ಕೆ.ಕೆ.) ಎಂಬ ಗುಂಪು ಕ್ಯಾಥೋಲಿಕರ ಮತ್ತು ವಲಸಿಗರ ವಿರುದ್ಧ ಹಿಂಸೆಯನ್ನು ಪ್ರಚುರ ಪಡಿಸಲು ಬೈಬಲ್‌ನ ವ್ಯಾಖ್ಯೆಗಳ ಉದ್ಧರಣೆ ಮಾಡಿದ್ದೂ ಎಲ್ಲರಿಗೂ ತಿಳಿದಿರುವ ವಿಚಾರ. ಅದೇ ರೀತಿ ಐಆರ್‌ಎ ಎಂಬ ಸಂಘಟನೆಯ ವಿಚಾರವೂ ಹಳೆಯದೇನಲ್ಲ. ಅದರ ಭಾಷೆ, ನುಡಿಗಟ್ಟು ಮತ್ತು ಸ್ವರೂಪದಲ್ಲಿ ಕ್ಯಾಥೋಲಿಕ್ ಧರ್ಮದ ಛಾಯೆ ಇತ್ತು.. ಆದರೆ ಕೆಕೆಕೆಯಾಗಲೀ ಐಆರ್‌ಎ ಆಗಲೀ ಕ್ರೈಸ್ತಧರ್ಮವನ್ನು ಪ್ರತಿನಿಧಿಸುತ್ತವೆ ಎಂದು ಯಾರೂ ಹೇಳಲಾರರು. ಐಸಿಸ್ ಎಂಬ ದುಷ್ಟ ಸಂಘಟನೆ ಇಸ್ಲಾಮಿ ಪಾರಿಭಾಷಿಕಗಳನ್ನು ಬಳಸುತ್ತಿರುವುದನ್ನೂ ಇದೇ

ದೃಷ್ಟಿಯಲ್ಲಿ ನೋಡಬೇಕು. ಯಾವ ರೀತಿಯಲ್ಲೂ ಆ ಗುಂಪು ಇಸ್ಲಾಮನ್ನು ಪ್ರತಿನಿಧಿಸುವುದಿಲ್ಲ.

ಹಿಂದೂ ಹೆಸರು ಇಟ್ಟುಕೊಂಡ ಕೆಲವು ತಿಳಿಗೇಡಿ ಗುಂಪುಗಳು ಎಸಗುವ ನೈತಿಕ ಪೊಲೀಸ್‌ಗಿರಿಯನ್ನಾಗಲೀ ಆರಾಧನಾ ಸ್ಥಳಗಳ ಮೇಲೆ ನಡೆಸುವ ದಾಳಿಯನ್ನಾಗಲೀ ಹಿಂದೂ ಧರ್ಮದ ಅಥವಾ ಅದರ ಅನುಯಾಯಿಗಳ ತಲೆಗೆ ಕಟ್ಟಲಾಗದು ತಾನೆ?

ಶ್ರೀಲಂಕಾದಲ್ಲಿ ನಡೆಯುತ್ತಿರುವ ತಮಿಳರ ಮೇಲಿನ ದೌರ್ಜನ್ಯಕ್ಕೆ ಹಾಗೂ ಮ್ಯಾನ್ಮಾರ್‌ನಲ್ಲಿ ನಡೆಯುತ್ತಿರುವ ರೋಹಿಂಗ್ಯಗಳ ಮೇಲಿನ ದೌರ್ಜನ್ಯಕ್ಕೆ ಯಾವ ರೀತಿ ಬೌದ್ಧ ಧರ್ಮ ಕಾರಣವಲ್ಲವೋ ಅದೇ ರೀತಿ ಮಧ್ಯಪೂರ್ವ ದೇಶಗಳಲ್ಲಿ ಐಸಿಸ್ ನಡೆಸುತ್ತಿರುವ ಭಯೋತ್ಪಾದಕ ಕೃತ್ಯಗಳಿಗೆ ಖಂಡಿತವಾಗಿಯೂ ಇಸ್ಲಾಮನ್ನು ದೂಷಿಸುವಂತಿಲ್ಲ.

ಐಸಿಸ್‌ನ ಅ ಕೃತ್ಯಗಳನ್ನು ಖಂಡಿಸುವುದರಲ್ಲಿ ಮುಸ್ಲಿಮರು ಯಾವ ರೀತಿಯಲ್ಲಿಯೂ ಹಿಂದೇಟು ಹಾಕಿಲ್ಲ. ಅದರ ದೌರ್ಜನ್ಯ ಮತ್ತು ಶೋಷಣೆಗೆ ಅತ್ಯಂತ ಹೆಚ್ಚು ಒಳಗಾಗಿರುವವರು ಮುಸ್ಲಿಮರೇ. ತಮ್ಮ ತಾಯ್ನಾಡನ್ನು ಬಿಟ್ಟು ಪಾಶ್ಚಾತ್ಯ ದೇಶಗಳಲ್ಲಿ ನಿರಾಶ್ರಿತರಾಗಿ ಅಲೆದಾಡುತ್ತಿರುವವರ ಕಷ್ಟವನ್ನು ಒಮ್ಮೆ ಊಹಿಸಿ ನೋಡಿ.

ಭಾರತವೂ ಸೇರಿದಂತೆ ಜಗತ್ತಿನಾದ್ಯಂತವಿರುವ ಮುಸ್ಲಿಮ್ ವಿದ್ವಾಂಸರು (ಉಲೆಮಾಗಳು) ಕೂಡಾ ಐಸಿಸ್‌ನ ವಿಧ್ವಂಸಕ ಕೃತ್ಯಗಳನ್ನು ಖಂಡಿಸುವ ನೂರಾರು ಸಮಾವೇಶಗಳನ್ನು ನಡೆಸಿದ್ದು ಫತ್ವಾಗಳನ್ನು ಹೊರಡಿಸಿದ್ದಾರೆ.

ಈ ವೆಬ್‌ಸೈಟ್‌ಗೆ ಭೇಟಿ ನೀಡಿ: http: lettertobaghdadi.com

ಆದರೆ ಐಸಿಸ್‌ನ ಕೃತ್ಯಗಳನ್ನು ಖಂಡಿಸಿ ಹೊರಡಿಸುವ ಹೇಳಿಕೆಗಳಿಗೆ ನೀಡುವ ಪ್ರಚಾರದಿಂದ ಮಾಧ್ಯಮಗಳ ಟಿಆರ್‌ಪಿ ಹೆಚ್ಚಿಸುವುದಿಲ್ಲ, ಹಾಗಾಗಿ ಈ ಹೇಳಿಕೆಗಳಿಗೆ ಮಾಧ್ಯಮದಲ್ಲಿ ಜಾಗ ಕಡಿಮೆ. ಐಸಿಸ್ ಎಸಗುವ ಹತ್ಯಾಕಾಂಡಗಳು ಮತ್ತು ಐತಿಹಾಸಿಕ ಸ್ಮಾರಕಗಳ ಮೇಲೆ ನೆಡಸುತ್ತಿರುವ ದಾಳಿಗೆ ನೀಡುವ ಪ್ರಚಾರದಿಂದ ಮಾಧ್ಯಮಗಳಿಗೂ ಒಳ್ಳೆಯ ವರಮಾನ ಬರುತ್ತದೆ. ಆದ್ದರಿಂದಲೇ ಪಾಶ್ಚಾತ್ಯ ಮಾಧ್ಯಮಗಳು ಇಸ್ಲಾಮಿಗೆ ಮಸಿ ಬಳಿಯುವ ಈ ಅಭಿಯಾನದಲ್ಲಿ ಮುಂಚೂಣಿಯಲ್ಲಿವೆ.

ಪಾಶ್ಚಾತ್ಯ ಮಾಧ್ಯಮಗಳು ಮತ್ತು ಇತರ ದೇಶಗಳಲ್ಲಿರುವ ಹಿಂಬಾಲಕ ಮಾಧ್ಯಮ ಸಂಸ್ಥೆಗಳ ಅಪಪ್ರಚಾರದಿಂದ ಪ್ರಭಾವಿತರಾಗದಂತೆ ಜಾಗರೂಕರಾಗಿರ ಬೇಕಾದುದು ನಮ್ಮ ಕರ್ತವ್ಯ. ಎಲ್ಲ ಧರ್ಮಗಳಂತೆ ಇಸ್ಲಾಮ್ ಕೂಡಾ ಬಹುಸಂಸ್ಕೃತಿ, ಸಹಿಷ್ಣುತೆ ಮತ್ತು ಸರ್ವಧರ್ಮ ಸಮಭಾವವನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಅಜ್ಞಾನದ ಗೋಡೆಗಳನ್ನು ಕೆಡವಿ ಜ್ಞಾನ ಮತ್ತು ಶಾಂತಿಯ ಸೇತುವೆಯನ್ನು ನಿರ್ಮಿಸಲು ಇದು ಸುಸಂದರ್ಭವಾಗಿದೆ.

# ಅನ್ಯಾಯವು ತೀವ್ರವಾದ ಮತ್ತು ಭಯೋತ್ಪಾದನೆಯನ್ನು ಹುಟ್ಟು ಹಾಕುತ್ತದೆ

ಆಕ್ಸ್‌ಫರ್ಡ್ ನಿಘಂಟಿನ ಪ್ರಕಾರ ಟೆರರ್ ಎಂದರೆ "ತೀವ್ರ ಭೀತಿ" ಮತ್ತು ಭಯೋತ್ಪಾದನೆ ಎಂದರೆ "ರಾಜಕೀಯ ಉದ್ದೇಶಕ್ಕಾಗಿ ಅನಧಿಕೃತ ಮತ್ತು ಅನಪೇಕ್ಷಿತ ಹಿಂಸೆ ಮತ್ತು ಬೆದರಿಕೆಯ ಬಳಕೆ".

ಭಯೋತ್ಪಾದನೆಯು ಉಗ್ರವಾದದ ಪ್ರಾಯೋಗಿಕ ರೂಪವಾಗಿದ್ದು ಅದರ ವ್ಯಾಪ್ತಿ ಸ್ಥಳೀಯ, ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ಮಟ್ಟದವರೆಗೂ ವ್ಯಾಪಿಸಬಹುದು. ಅದಕ್ಕೆ ಶಾಂತಿಯ ಸಂದರ್ಭ ಅಥವಾ ಯುದ್ಧದ ಸನ್ನಿವೇಶ ಎಂಬ ಭೇದವಿಲ್ಲ ಹಿಂಸೆ ಮತ್ತು ಭೀತಿಯ ವಾತಾವರಣವನ್ನು ಸೃಷ್ಟಿಸುವುದೇ ಅದರ ಪರಮ ಗುರಿ. ಬಾಂಬ್ ದಾಳಿ ಅಥವಾ ಇನ್ನಿತರ ಸ್ಫೋಟಕಗಳನ್ನು ಬಳಸಿ ಮುಗ್ಧ ಜನರನ್ನು ಕೊಲ್ಲುವುದು ಮತ್ತು ನಾಶನಷ್ಟವನ್ನುಂಟು ಮಾಡುವುದು ಭಯೋತ್ಪಾದಕರ ಕಾರ್ಯತಂತ್ರ..

ರಾಜಕೀಯ ಹಿಂಸೆಯು ಯಾವ ಸಮಾಜದಲ್ಲೂ ಸಹ್ಯವಲ್ಲವೆಂಬುದು ಎಲ್ಲರೂ ಒಪ್ಪುವಂತಹ ವಿಚಾರ. ಭಯೋತ್ಪಾದನೆಯು ರಾಜಕೀಯ ಹಿಂಸೆಯ ಒಂದು ರೂಪ. ಮುಸ್ಲಿಮ್ ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳ ಪ್ರಮಾಣ ಇತರೆಡೆಗೆ ಹೋಲಿಸಿದರೆ ಅತ್ಯಂತ ಹೆಚ್ಚು. ದಶಕಗಳಿಂದಲೂ ಇಲ್ಲಿನ ಸರಕಾರಗಳಿಗೆ ಪಾಶ್ಚಾತ್ಯ ಜಗತ್ತಿನ ಬೆಂಬಲ ದೊರೆಯುತ್ತಿದೆ. ತಮ್ಮ ರಾಜಕೀಯ ವೈರಿಗಳನ್ನು ನಿಗ್ರಹಿಸಲು ಇಲ್ಲಿನ ಸರಕಾರಗಳು ಹಲವು ರೀತಿಯ ಕಾರ್ಯತಂತ್ರಗಳನ್ನು ಅನುಸರಿಸುತ್ತಾ ಬಂದಿವೆ. ಹಿಂಸೆ ಮತ್ತು ಜೈಲಿಗಟ್ಟುವುದು ಅವರಿಗೆ ಮಾಮೂಲು. ಆದರೆ ಒಂದು ಮಾತಂತೂ ಸ್ಪಷ್ಟ, ದಬ್ಬಾಳಿಕೆಯು ತೀವ್ರವಾದಷ್ಟೂ ಅದಕ್ಕೆ ವ್ಯಕ್ತವಾಗುವ ಪ್ರತಿರೋಧವೂ ಪ್ರಬಲವಾಗುವುದನ್ನು ನಾವು ಕಾಣುತ್ತೇವೆ.

ಇತ್ತೀಚಿನ ದಿನಗಳಲ್ಲಿ ಪಾಶ್ಚಾತ್ಯ ಹಸ್ತಕ್ಷೇಪಕ್ಕೊಳಗಾಗಿ ಹೈರಾಣಾಗಿರುವ ರಾಷ್ಟ್ರಗಳಲ್ಲಿ ಕ್ಯಾನ್ಸರ್‌ನಂತೆ ವ್ಯಾಪಿಸುತ್ತಿರುವ ಉಗ್ರವಾದವು ಅಲ್ಲಿ ಈ ಮೊದಲೇ ಸುಪ್ತವಾಗಿದ್ದ ಪ್ರತಿರೋಧಕ್ಕೆ ಹೊಸ ವೇದಿಕೆ ಕಲ್ಪಿಸಿದೆ.

ಧರ್ಮ, ಧಾರ್ಮಿಕ ಪರಿಭಾಷೆ, ನುಡಿಗಟ್ಟುಗಳು ಮತ್ತು ಸಂಕೇತಗಳನ್ನು ದೌರ್ಜನ್ಯಕ್ಕೆ ಪ್ರತಿರೋಧವೊಡ್ಡುವ ಜನರು ಸಾಮಾನ್ಯವಾಗಿ ಎಲ್ಲೆಡೆಯೂ ಬಳಸುತ್ತಾರೆ. ತಮ್ಮ ಮೇಲೆ ದೌರ್ಜನ್ಯ ಮಾಡುವವರ ವಿರುದ್ಧ ಧಾರ್ಮಿಕ ಸಿದ್ಧಾಂತದಲ್ಲಿ ಪ್ರತಿರೋಧದ ನೆಲೆಯನ್ನು ಕಂಡುಕೊಳ್ಳುವುದು ಸಹಜವೇ. ಅಷ್ಟು ಮಾತ್ರವೇ ಅಲ್ಲ, ಧರ್ಮ ಎಂಬುದು

ಸಮಾಜದಲ್ಲಿ ಸಂಘಟಿತ ಜೀವನಕ್ಕೆ ಇಂಬು ಕೊಡುವ ಪ್ರಬಲ ಅಸ್ತ್ರ. ಇದು ಎಲ್ಲ ಧರ್ಮಾನುಯಾಯಿಗಳಿಗೂ ಅನ್ವಯಿಸುವಂತಹದ್ದಾಗಿದೆ.

ಭಾರತದಲ್ಲಿ ಮಹಾಭಾರತದ ಧರ್ಮಯುದ್ಧದ ಕಲ್ಪನೆಯನ್ನು ಯಾವುದೇ ಎರಡು ರಾಜಕೀಯ ಗುಂಪುಗಳ ನಡುವೆ ನಡೆಯುವ ಸಂಘರ್ಷಕ್ಕೆ ಉದಾಹರಿಸುವುದು ಸಾಮಾನ್ಯವಾಗಿದೆ. ಅಮೇರಿಕದ ಅಧ್ಯಕ್ಷ ಜಾರ್ಜ್ ಬುಶ್ 9/11ರ ಘಟನೆಯ ನಂತರ ತಮ್ಮ ಭಾಷಣದಲ್ಲಿ "ಶಿಲುಬೆಯುದ್ಧ" ಎಂಬ ಪದ ಪ್ರಯೋಗವನ್ನು ಮಾಡಿದ್ದರು. ನಂತರ ಅವರು ಆ ಪದವನ್ನು ಹಿಂದಕ್ಕೆ ಪಡೆದುಕೊಂಡರು. ಹಾಗೆಯೇ ಮುಸಲ್ಮಾನರಲ್ಲೂ ಯುದ್ಧಕ್ಕೆ ಜಿಹಾದ್ ಮತ್ತು ಯಾವುದೇ ಉದ್ದೇಶ ಸಾಧನೆಯ ಹಾದಿಯಲ್ಲಿ ಮೃತರಾದವರಿಗೆ ಶಹೀದ್ ಎಂಬ ಪದವನ್ನು ಪ್ರಯೋಗಿಸುವುದು ಸಾಮಾನ್ಯವಾಗಿದೆ. ಭಾರತೀಯ ಸೈನ್ಯದಲ್ಲಿರುವ ಜವಾನರು ಅತಿಕ್ರಮಣಕಾರರ ವಿರುದ್ಧ ಗಡಿಯಲ್ಲಿ ಹೋರಾಡುತ್ತಾ ಮಡಿದರೆ ಅವರು ಮುಸಲ್ಮಾನರಲ್ಲದಿದ್ದರೂ ಅವರಿಗೆ ಶಹೀದ್ ಎಂಬ ಪದವನ್ನು ಬಳಸಲಾಗುತ್ತದೆ.

ಉಗ್ರವಾದಿಗಳು ಮತ್ತು ಇಸ್ಲಾಮೋಫೋಬ್‌ಗಳು ಏಕಪ್ರಕಾರವಾಗಿ ಇಸ್ಲಾಮನ್ನು ತಮ್ಮ ಹೋರಾಟದ ನುಡಿಗಟ್ಟಾಗಿ ಪರಿವರ್ತಿಸಲಿಕ್ಕೆ ಮುಖ್ಯ ಕಾರಣ ಅದು ಜಗತ್ತಿನಾದ್ಯಂತ ಸ್ವೀಕೃತವಾದ ಧರ್ಮವಾಗಿರುವುದು. ಜನರನ್ನು ಕೆರಳಿಸಲು, ಯಾವುದೇ ಚಳವಳಿ, ಯುದ್ಧ ಅಥವಾ ಹೋರಾಟವನ್ನು ಸಮರ್ಥಿಸಲು ಧರ್ಮವನ್ನು ಬಳಸುವುದು ಎಲ್ಲ ಸಮಾಜಗಳಲ್ಲಿಯೂ ನಮಗೆ ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಈ ಚಳವಳಿ, ಹೋರಾಟ ಮತ್ತು ಯುದ್ಧಗಳಿಗೆ ಧರ್ಮದೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ. ಧಾರ್ಮಿಕ ಆಯಾಮವನ್ನು ಹೊರಗಿಟ್ಟು ನೋಡಿದರೂ ಈ ಚಳವಳಿಗಳು, ಹೋರಾಟಗಳು ಮತ್ತು ಯುದ್ಧಗಳ ಹಿಂದಿನ ಕಾರಣಗಳು ಹಾಗೆಯೇ ಇರುತ್ತವೆ.

ಆಧುನಿಕತೆ, ತಾಂತ್ರಿಕತೆ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಪ್ರವೇಶದೊಂದಿಗೆ ಜಗತ್ತಿನಲ್ಲಿ ಅನ್ಯಾಯ ಮತ್ತು ದೌರ್ಜನ್ಯಗಳು ಕೊನೆಗಾಣಲಿಲ್ಲ. ಬದಲಾಗಿ ಅವು ಹೊಸ ರೂಪಗಳನ್ನು ತಾಳಿದವು. ಹಿಂದೆ ಆಳುವವರು ಪ್ರಜೆಗಳನ್ನು ಶೋಷಿಸುತ್ತಿದ್ದರೆ ಈಗ ಉಳ್ಳವರು ಬಡವರ ಹಕ್ಕುಗಳನ್ನು ಮತ್ತು ಸೊತ್ತುಗಳನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆ. ಕಾಡುಗಳನ್ನು ಆಶ್ರಯಿಸಿ ಬದುಕುತ್ತಿದ್ದವರ ಭೂಮಿಯನ್ನೂ ಮರಗಳನ್ನೂ ಅಣೆಕಟ್ಟುಗಳ ನಿರ್ಮಾಣಕ್ಕಾಗಿ ನಾಶಮಾಡುತ್ತಾ, ಹಾಗೆಯೇ ಅಭಿವೃದ್ಧಿಯ ಹೆಸರಿನಲ್ಲಿ ನಗರೀಕರಣ ಮತ್ತು ಕೈಗಾರಿಕೀರಣದ ನೆಪದಲ್ಲಿ ಭೂಮಿಯನ್ನು ಕಬಳಿಸುತ್ತಾ ಸಾಗುತ್ತಿದ್ದಾರೆ. ಶ್ರೀಮಂತರ ತೆಕ್ಕೆಯಲ್ಲಿರುವ ಮಾಧ್ಯಮಗಳು ಕೇವಲ ಕೈಗಾರಿಕೆಗಳ ಹಿತವನ್ನು ಕಾಯುತ್ತಾ ತಮ್ಮ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತಿವೆ. ಅಮೇರಿಕ ಮತ್ತು ಪಾಶ್ಚಾತ್ಯ ದೇಶಗಳಲ್ಲಿರುವ ಶಸ್ತ್ರಾಸ್ತ್ರ ತಯಾರಿಸುವ

ಕಂಪೆನಿಗಳು ಯುದ್ಧವನ್ನು ವ್ಯಾಪಕಗೊಳಿಸಲು ಪ್ರಯತ್ನಿಸುವ ರಾಜಕೀಯ ಪಕ್ಷಗಳಿಗೆ ಬೆಂಬಲ ನೀಡುತ್ತಿವೆಯೇ ಹೊರತು ಶಾಂತಿಯ ಪರವಾಗಿರುವವರಿಗಲ್ಲ. ಆಧುನಿಕ ಜಗತ್ತಿನಲ್ಲಿ ಶಾಂತಿ ಸಹಬಾಳ್ವೆಗೆ ಇರುವ ಈ ಅಪಾಯಗಳನ್ನು ನಾವು ಅರ್ಥೈಸಿಕೊಳ್ಳಬೇಕಿದೆ.

ಯುದ್ಧಗಳಿಂದ ಜರ್ಝರಿತಗೊಂಡಿರುವ ಅಥವಾ ಪರಕೀಯರ ದಾಳಿಯಿಂದ ತಮ್ಮ ತೈಲ ಸಂಪತ್ತುಗಳನ್ನು ಕಳೆದುಕೊಂಡಿರುವ ರಾಷ್ಟ್ರಗಳ ಯುವಕರೇ ಹೆಚ್ಚಾಗಿ ತೀವ್ರವಾದದ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ತಮ್ಮ ಸೊತ್ತುಗಳು ಕೊಳ್ಳೆಯಾಗುವುದನ್ನು, ಕುಟುಂಬಿಕರು ಕಣ್ಣೆದುರೇ ಸಾಯುವುದನ್ನೂ, ಮಕ್ಕಳು ಅನಾಥರಾಗುವುದನ್ನೂ ಮಹಿಳೆಯರು ವಿಧವೆಯರಾಗುವುದನ್ನು ಕಂಡು ಅವರ ಮನಸ್ಸುಗಳಲ್ಲಿ ಕ್ರೌರ್ಯ ಸಹಜವಾಗಿಯೇ ಉದ್ಭವವಾಗುತ್ತದೆ. ನಾಶ ನಷ್ಟಗಳು ಅವರ ಮನಸ್ಸನ್ನೂ ತಲ್ಲಣಗೊಳಿಸುತ್ತವೆ. ಹೀಗಾಗಿ ಉಗ್ರವಾದಿ ತತ್ವಗಳಿಗೆ ಅವರು ಮಾರು ಹೋಗಿ ಅದರಿಂದ ಶಾಂತಿ, ಸಮೃದ್ಧಿ ಮತ್ತು ಗೌರವಾದರಗಳನ್ನು ಮರಳಿ ಪಡೆಯಬಹುದೆಂದು ಅವರು ಭಾವಿಸುತ್ತಾರೆ. ಇದು ಕೇವಲ ಇಸ್ಲಾಮಿಗೆ ಮಾತ್ರ ಸೀಮಿತವಾದುದಲ್ಲ. ಜಾಗತಿಕ ಆರ್ಥಿಕತೆಯ ವ್ಯವಸ್ಥೆಯು ಯುದ್ಧ, ಬಡತನ, ಅನ್ಯಾಯ ಮತ್ತು ಅಸಂತುಲಿತತೆಯನ್ನು ಹುಟ್ಟು ಹಾಕಿರುವುದೇ ಇದಕ್ಕೆ ಮೂಲ ಕಾರಣ. ಇರಾಕ್ ಮತ್ತು ಸಿರಿಯಾಗಳ ಉತ್ತರ ಭಾಗಗಳು ಉಗ್ರವಾದಿಗಳ ಸೂಕ್ತ ತಾಣವಾಗಿರುವುದರ ಹಿಂದಿರುವುದು ಕೂಡಾ ಈ ಅಂಶಗಳೇ.

ಮಧ್ಯಪೂರ್ವದ ಬಹುತೇಕ ಎಲ್ಲಾ ರಾಷ್ಟ್ರಗಳೂ ತಮ್ಮ ಪ್ರಜೆಗಳಿಗೆ ಸಮಾನತೆ, ನ್ಯಾಯ, ಆತ್ಮಗೌರವವನ್ನು ಖಾತ್ರಿಪಡಿಸುವುದರಲ್ಲಿ ಮತ್ತು ಆಡಳಿತಾಧಿಕಾರದಲ್ಲಿ ಜನರು ನೇರವಾಗಿ ಭಾಗವಹಿಸುವಂತೆ ಮಾಡುವಲ್ಲಿ ವಿಫಲವಾಗಿವೆ. ಕೆಲವು ಕಡೆಗಳಲ್ಲಿ ಇನ್ನೂ ಕ್ರೂರ ಸರ್ವಾಧಿಕಾರಿ ವ್ಯವಸ್ಥೆ ಜಾರಿಯಲ್ಲಿದ್ದು ಆ ಪ್ರದೇಶಗಳಲ್ಲಿ ಜನರು ಪೌರರಾಗಿರದೆ ಕೇವಲ ಗುಲಾಮರಾಗಿದ್ದಾರೆ. ಆ ರಾಷ್ಟ್ರಗಳಲ್ಲಿ ಸಂವಿಧಾನ ಎಂಬುದೇ ಇಲ್ಲ. ಅಲ್ಲಿನ ಆಡಳಿತಗಾರರು ಇದುವರೆಗೂ ಪಾಶ್ಚಾತ್ಯ ರಾಷ್ಟ್ರಗಳ ಕೈಗೊಂಬೆಯಾಗಿದ್ದು ತಮ್ಮದೇ ಜನರನ್ನು ಯಾತನೆ ಮತ್ತು ಅನ್ಯಾಯಕ್ಕೆ ತಳ್ಳುತ್ತಿದ್ದಾರೆ. ಅವು ಎಲ್ಲ ರೀತಿಯಲ್ಲಿಯೂ "ವಿಫಲ ರಾಷ್ಟ್ರಗಳಾಗಿದ್ದು" ಜನರ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡ ಯಾವುದೇ ಆಡಳಿತ ಪರಿಕರ ಅಲ್ಲಿ ಇಲ್ಲ. ಹಾಗೆ ನೋಡಿದರೆ 21ನೇ ಶತಮಾನದ ವರೆಗೂ ಈ ರಾಷ್ಟ್ರಗಳು ಬಾಳಿಕೆ ಬಂದಿರುವುದೇ ಒಂದು ಅಚ್ಚರಿ.

ನಿಜವಾಗಿ ಈ ರಾಷ್ಟ್ರಗಳಲ್ಲಿ ಆಡಳಿತಗಾರರು ಮತ್ತು ಹೋರಾಟಗಾರರು ತಮ್ಮ ಹಿತಾಸಕ್ತಿಯ ರಕ್ಷಣೆಗಾಗಿ ಇಸ್ಲಾಮನ್ನು ತಮ್ಮ ಗುರಾಣಿಯನ್ನಾಗಿ ಬಳಸುತ್ತಿದ್ದಾರೆ. ಆದರೆ ನ್ಯಾಯ, ಶಾಂತಿ, ಸಮಾನತೆ ಮತ್ತು ಜನತೆಯನ್ನು ಆಡಳಿತದಲ್ಲಿ ಪಾಲುದಾರ

ರಾಗಿಸುವಂತಹ ಇಸ್ಲಾಮಿನ ಉದಾತ್ತ ಮೌಲ್ಯಗಳನ್ನು ಬದಿಗಿರಿಸಿದ್ದಾರೆ.

ಮತ್ತೊಂದೆಡೆ ಇಸ್ಲಾಮ್‌ನ ಮುಖವಾಡ ಹಾಕಿ ಕೊಲೆ ಮಾಡುವವರು ಪ್ರತೀಕಾರ ತೀರಿಸುವವರು ಮತ್ತು ಜಿಹಾದಿಗಳು ಎಂದು ಭಾವಿಸಿಕೊಂಡಿದ್ದಾರೆ. ಆದರೆ ಇಸ್ಲಾಮಿನ ದೃಷ್ಟಿಯಲ್ಲಿ ಇವರು ಕೊಲೆಗಡುಕರಾಗಿದ್ದಾರೆ. ತಮಗಿಂತ ಭಿನ್ನವಾಗಿ ಯೋಚಿಸುತ್ತಾರೆ ಅಥವಾ ಇಸ್ಲಾಮಿಗೆ ಅವಹೇಳನ ಮಾಡುತ್ತಾರೆ ಎಂಬ ಕಾರಣವೊಡ್ಡಿ ನಿರಾಯುಧ ವ್ಯಕ್ತಿಗಳನ್ನು ಹುಡುಕಿಕೊಂಡು ಹೋಗಿ ಕೊಲ್ಲುವ ಅತ್ಯಂತ ನೀಚ ಮತ್ತು ತುಚ್ಛ ಕಾರ್ಯದಲ್ಲಿ ಇವರು ತೊಡಗಿದ್ದಾರೆ.

**ಕುರ್‌ಆನ್ ಸ್ಪಷ್ಟವಾಗಿ ಹೇಳುವಂತೆ :** ಮಾನವಕುಲದ ಸಂರಕ್ಷಣೆಯೇ ಇಸ್ಲಾಮಿನ ಧ್ಯೇಯವಾಗಿದೆ. ಮನುಷ್ಯನ ಪ್ರಾಣದ ಸಂರಕ್ಷಣೆಯು ಒಂದು ಪ್ರಮುಖ ಆದ್ಯತೆಯಾಗಿದೆ.

> “ಒಬ್ಬ ಮಾನವನು ಇನ್ನೊಬ್ಬನ ಜೀವ ಉಳಿಸಿದರೆ ಅವನು ಸಂಪೂರ್ಣ ಮಾನವ ಕುಲದ ಜೀವ ಉಳಿಸಿದಂತೆ.” (5:35)

ಕುರ್‌ಆನ್‌ನ ಇದೇ ಸೂಕ್ತದಲ್ಲಿ ಮುಂದುವರಿಯುತ್ತಾ “ಒಬ್ಬನು ಅನ್ಯಾಯವಾಗಿ ಮತ್ತೊಬ್ಬನ ಕೊಲೆ ಮಾಡಿದರೆ ಅವನು ಸಂಪೂರ್ಣ ಮಾನವ ಕೋಟಿಯನ್ನು ವಧಿಸಿದಂತೆ”. ಕುರ್‌ಆನ್‌ನ ಇನ್ನೊಂದು ಕಡೆ ಈ ರೀತಿ ಇದೆ, “ಅಲ್ಲಾಹನು ಸನ್ಮಾನಿಸಿರುವ ಜೀವವನ್ನು ನ್ಯಾಯದಿಂದಲ್ಲದೇ ಹರಣ ಮಾಡಬೇಡಿರಿ.” ಪ್ರವಾದಿ ಮುಹಮ್ಮದರು(ಸ) ಹೇಳಿದರು: “ನಮ್ಮವರ ವಿರುದ್ಧ ಶಸ್ತ್ರವನ್ನು ಎತ್ತುವವನು ನಮ್ಮವನಲ್ಲ.” ಅವರು ಮುಂದುವರಿಯುತ್ತಾ

> “ಲೋಕದ ಅಂತ್ಯ ಸಮೀಪಿಸುವಾಗ, ವಿನಾ ಕಾರಣದ ಕೊಲೆಗಳು ಸಾಮಾನ್ಯವಾಗಿದ್ದು, ಕೊಲೆಯಾದವನಿಗೆ ತನ್ನನ್ನು ಯಾರು ಕೊಂದರು ಮತ್ತು ಏಕೆ ಕೊಲ್ಲಲಾಯಿತೆಂದು ತಿಳಿದಿರುವುದಿಲ್ಲ, ಅದೇ ರೀತಿ ಕೊಂದವನಿಗೆ ತಾನಾರನ್ನು ಕೊಂದೆನೆಂದೂ ತಿಳಿದಿರುವುದಿಲ್ಲ.”

ಸಾವಿರದ ನಾಲ್ಕುನೂರು ವರ್ಷಗಳ ಹಿಂದೆ ಪ್ರವಾದಿ ಮುಹಮ್ಮದರು ನಾವು ಈಗ ಎದುರಿಸುತ್ತಿರುವ ಇಂತಹ ಕರಾಳ ಪರಿಸ್ಥಿತಿಯ ಬಗ್ಗೆ ಮುನ್ಸೂಚನೆ ನೀಡಿದ್ದರು. ಮುಗ್ಧ ಜನರು ಕೊಲ್ಲಲ್ಪಡುತ್ತಿದ್ದಾರೆ. ಯಾರು ಅವರನ್ನು ಕೊಲ್ಲುತ್ತಿದ್ದಾರೆ ಮತ್ತು ಯಾಕಾಗಿ ಎಂದು ಅವರಿಗೆ ತಿಳಿದಿಲ್ಲ. ಅದೇ ರೀತಿ ಕೊಲ್ಲುವವರಿಗೂ ತಮ್ಮ ನೈಜ ಬಲಿಪಶುಗಳು ಯಾರು ಎಂದೂ ತಿಳಿದಿಲ್ಲ. ಕೊಲೆಗಟುಕರು ಮತ್ತು ಕೊಲ್ಲಲ್ಪಡುವವರ ನಡುವೆ ಯಾವುದೇ ವೈಯಕ್ತಿಕ ದ್ವೇಷವೂ ಇದ್ದಂತಿಲ್ಲ.

# ಭಾರತೀಯತೆ ಅಥವಾ ಭಾರತೀಯ ರಾಷ್ಟ್ರೀಯತೆ

ರಾಷ್ಟ್ರೀಯತೆ ಮತ್ತು ರಾಷ್ಟ್ರಭಕ್ತಿ ಬಹಳ ಕಾಲದಿಂದಲೂ ಜಗತ್ತಿನಾದ್ಯಂತ ಚಾಲ್ತಿಯಲ್ಲಿರುವ ಎರಡು ಪ್ರಮುಖ ಕಲ್ಪನೆಗಳು. ಈ ವಿಚಾರವನ್ನು ಹಿಡಿದು ಎಲ್ಲ ಕಾಲದಲ್ಲಿಯೂ, ಅದು ಪ್ರಾಚೀನ, ಆಧುನಿಕ ಅಥವಾ ಆಧುನಿಕೋತ್ತರ ಯಾವುದೇ ಆಗಿರಬಹುದು, ಅತಿರೇಕಗಳು ಮತ್ತು ದೌರ್ಜನ್ಯಗಳು ನಡೆದಿವೆ. ಜನಾಂಗೀಯತೆ ಮತ್ತು ರಾಷ್ಟ್ರಭಕ್ತಿಯ ಹೆಸರಲ್ಲಿ ಯುರೋಪಿನಲ್ಲಿ ಸಾಕಷ್ಟು ರಕ್ತಪಾತ ನಡೆದಿದ್ದು ಇದರಿಂದಲೇ ಅನೇಕ ಸಣ್ಣ ರಾಷ್ಟ್ರಗಳು ಹುಟ್ಟು ಪಡೆದಿವೆ. ದುರದೃಷ್ಟವೆಂದರೆ, ಭಾರತದಲ್ಲಿ ನಾವು ಇಂದು ರಾಷ್ಟ್ರೀಯತೆ ಮತ್ತು ರಾಷ್ಟ್ರವನ್ನು ಆರಾಧಿಸುವ ಈ ಕಾಕ್‌ಟೇಲ್‌ಗೆ ಆತುಕೊಂಡಿದ್ದೇವೆ. ಇಂದಿನ ಸರಕಾರ ಅಧಿಕಾರಕ್ಕೆ ಬಂದ ಲಾಗಾಯ್ತಿನಿಂದ ಹಿಂದೂ ರಾಷ್ಟ್ರೀಯತೆಯು ಮೇಲುಗೈ ಸಾಧಿಸುತ್ತಿದೆ. ಈಗ ಎದುರಾಗಿರುವ ಪ್ರಶ್ನೆಯೆಂದರೆ ನಾವು ಭಾರತೀಯತೆಯನ್ನು ಅಪ್ಪಿಕೊಳ್ಳಬೇಕೇ ಅಥವಾ ಭಾರತೀಯ ರಾಷ್ಟ್ರೀಯತೆಯನ್ನೇ ಎಂಬುದು. ಭಾರತದ ಪ್ರಜೆಗಳು ತಮ್ಮ ದೇಶಪ್ರೇಮಕ್ಕೆ ಆಗಿಂದಾಗ್ಗೆ ಸಾಕ್ಷ್ಯವನ್ನು ಒದಗಿಸುತ್ತಿರಬೇಕೇ? ಈ ವಿಚಾರದಲ್ಲಿ ನಿರ್ದಿಷ್ಟ ಸಮುದಾಯದ ಜನರನ್ನು ನಾವು ನಿರಂತರವಾಗಿ ಕಟಕಟೆಯಲ್ಲಿ ನಿಲ್ಲಿಸುತ್ತಿರಬೇಕೇ? ಒಬ್ಬ ವ್ಯಕ್ತಿಯ ದೇಶಪ್ರೇಮವನ್ನು ಅಳೆಯಲಿಕ್ಕೆ ಇರುವ ಮಾನದಂಡವಾದರೂ ಯಾವುದು? ದೇಶಪ್ರೇಮವನ್ನು ಪ್ರದರ್ಶಿಸುವ ವಿಧಾನ ಯಾವುದು? ಮತ್ತು ಯಾವ ಯಾವ ಸಂದರ್ಭದಲ್ಲಿ ಮತ್ತು ಎಷ್ಟು ಬಾರಿ ಅದನ್ನು ಪ್ರಸ್ತುತಪಡಿಸಬೇಕು? ಇದನ್ನು ನಿರ್ಧರಿಸುವವರು ಯಾರು? ಭಾರತೀಯ ಸಂವಿಧಾನವೇ? ಅಥವಾ ನಿರ್ದಿಷ್ಟ ಸಿದ್ಧಾಂತವನ್ನು ಪ್ರತಿಪಾದಿಸುವ ಮತ್ತು ಶ್ರೇಷ್ಠತೆಯ ವ್ಯಸನಕ್ಕೆ ಬಲಿಯಾಗಿರುವ ಯಾವುದಾದರೂ ಒಂದು ಗುಂಪಿನ ಜನರೇ?

## ರಾಷ್ಟ್ರ ಮತ್ತು ರಾಷ್ಟ್ರಭಕ್ತಿ

ಭಾರತ ಒಂದು ಪ್ರಜಾಸತ್ತಾತ್ಮಕ ರಾಷ್ಟ್ರ ಮತ್ತು ನಮ್ಮ ಕಾನೂನು ಕಟ್ಟಳೆಗಳನ್ನು ನಮ್ಮ ಸಂವಿಧಾನವೇ ನಿರ್ದೇಶಿಸುತ್ತದೆ. ಸದ್ಯದ ಚರ್ಚೆಯು ಸಂವಿಧಾನದ ಸಾರ್ವಭೌಮತೆ ಮತ್ತು ಜನರ ಮೇಲೆ ತಮ್ಮದೇ ರಾಷ್ಟ್ರೀಯತೆಯ ಕಲ್ಪನೆಯನ್ನು ಹೇರಲು ಪ್ರಯತ್ನಿಸುತ್ತಿರುವ ಪ್ರಭುತ್ವೇತರ ಶಕ್ತಿಗಳ ನಡುವೆ ಕೇಂದ್ರೀಕೃತವಾಗಿದೆ. ಕಾನೂನು ಮತ್ತು ಸಂವಿಧಾನದ ಈ ಮೂಲ ವಿಷಯವನ್ನು ಬದಿಗೊತ್ತಿ ಮುಸ್ಲಿಮರನ್ನು ರಾಜಕೀಯ ಚರ್ಚೆಗೆ ಎಳೆಯುವ ಪ್ರಯತ್ನ ಈಗ ನಡೆಯುತ್ತಿದೆ. ಕೆಲವು ಮುಸ್ಲಿಮ್ ನಾಯಕರು ಕೂಡಾ ಕೆಲವು ಅಗೋಚರ ಶಕ್ತಿಗಳ ಈ ಸಂಚಿಗೆ ಬಲಿಯಾಗಿ ಇಡೀ ಚರ್ಚೆಯನ್ನೇ ಮತ್ತಷ್ಟು ಗೋಜಲಾಗಿಸುತ್ತಿದ್ದಾರೆ. ಯಾವುದೇ ವ್ಯಕ್ತಿ ಅಥವಾ ಸಮುದಾಯದ ರಾಷ್ಟ್ರೀಯತೆಯನ್ನು ಪ್ರಶ್ನಿಸುವ ಅಧಿಕಾರವನ್ನು ನಮ್ಮ ಸಂವಿಧಾನ ಯಾರಿಗಾದರೂ ಕೊಟ್ಟಿದೆಯೇ? ಈ ಪ್ರಶ್ನೆಯನ್ನು ಇಂದು ಯಾರೂ ಕೇಳುತ್ತಿಲ್ಲ. ವಾಸ್ತವವೆಂದರೆ, ರಾಜಕೀಯ ನಾಯಕರು, ರಾಜಕೀಯ ಪಕ್ಷಗಳು ಮತ್ತು ವೋಟುಬ್ಯಾಂಕ್ ರಾಜಕಾರಣವೇ ಇಲ್ಲಿ ನಿಜವಾದ ಅಪರಾಧಿಗಳು.

# ಆತ್ಮಾಹುತಿ ದಾಳಿ:

ಜೀವ ಪವಿತ್ರವಾದುದು. ಆದರೆ ಅದು ನಮ್ಮದಲ್ಲ, ನಮಗೆ ಸೇರಿದ್ದಲ್ಲ. ಅದು ನಮ್ಮ ಸೊತ್ತಾಗಲೀ ನಮ್ಮ ಹತೋಟಿಯಲ್ಲಿರುವುದಾಗಲೀ ಅಲ್ಲ. ನನ್ನ ಜೀವನ, ನನ್ನ ಮರಣ ಮತ್ತು ನನ್ನ ಆಯ್ಕೆ ಎಂಬ ಪಾಶ್ಚಾತ್ಯ ಸಮಾಜದಲ್ಲಿ ಪ್ರಚಲಿತವಿರುವ ತತ್ವವು ಎಲ್ಲ ದೃಷ್ಟಿಯಿಂದಲೂ ಅಸಮಂಜಸ. ಮನುಷ್ಯನ ಬದುಕು ದೇವನ ಒಂದು ಕೊಡುಗೆಯಾಗಿದ್ದು ಅವನ ವಿಶ್ವಸ್ಥ ನಿಧಿಯಾಗಿದೆ. ನಮ್ಮ ಜೀವದ ಸಂರಕ್ಷಣೆ ನಮ್ಮ ಹೊಣೆಗಾರಿಕೆಯಾಗಿದೆ. ಈ ಕೊಡುಗೆಯನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದ್ದು ಅದನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ನಮ್ಮ ಪ್ರಾಣವನ್ನು ಸ್ವತಃ ನಾವು ಹರಣ ಮಾಡುವಂತಿಲ್ಲ. ಜೀವದ ಮೇಲಿನ ಅಧಿಕಾರ ನಮ್ಮದಲ್ಲ ಎಂಬುದೇ ಇದಕ್ಕಿರುವ ಮೂಲ ಕಾರಣ. ಈ ವಿಷಯದಲ್ಲಿ ನಮಗೆ ಆಯ್ಕೆ ಇಲ್ಲ. ಅತ್ಮಹತ್ಯೆ ಮಾಡುವುದು ದೇವನ ಈ ವಿಶ್ವಾಸಕ್ಕೆ ಬಗೆಯುವ ದ್ರೋಹವಾಗಿದ್ದು, ನಾವು ಆ ಮೂಲಕ ದೇವನಿಗೆ ಸೇರಿದ ಸೊತ್ತನ್ನು ಕಬಳಿಸಿದಂತಾಗುತ್ತದೆ.. ಇದು ಕೇವಲ ಒಂದು ಜೀವದ ಹರಣ ಮಾಡಿದಂತಲ್ಲ ಬದಲಾಗಿ ಇಡೀ ಮಾನವ ಕುಲವನ್ನೇ ಹರಣ ಮಾಡಿದಂತೆ. ಕುರ್‌ಆನ್‌ನ ಒಂದು ಸೂಕ್ತವು ಸ್ಪಷ್ಟವಾಗಿ ಸಾರುವಂತೆ, "ನಿಮ್ಮನ್ನು ನೀವೇ ವಿನಾಶಕ್ಕೊಳಪಡಿಸಿಕೊಳ್ಳಬೇಡಿರಿ". (ಪವಿತ್ರ ಕುರ್‌ಆನ್ 2:195)

ಕೆಲವು ಮುಸ್ಲಿಮ್ ವಲಯಗಳಲ್ಲಿ ಚಾಲ್ತಿಯಲ್ಲಿರುವ "ಆತ್ಮಾಹುತಿ ದಾಳಿ" ಎಂಬ ಕಲ್ಪನೆಯ ಬಗ್ಗೆ ಇನ್ನು ಚರ್ಚಿಸೋಣ. ಈ ರೀತಿಯ ಅಸಹ್ಯಕರ ಕೃತ್ಯವನ್ನು ಇಸ್ಲಾಮ್‌ನ ಬಗ್ಗೆ ತಮಗೆ ಪ್ರೀತಿ ಇದೆ ಎಂದು ಘೋಷಿಸುವ ವ್ಯಕ್ತಿಗಳೇ ನೆಚ್ಚಿಕೊಂಡಿರುವುದು ಅಚ್ಚರಿ ಮೂಡಿಸುತ್ತದೆ. ಈ ಬಗೆಯ ದಾಳಿಯು ಕುರ್‌ಆನ್‌ನ ಎಲ್ಲ ಬೋಧನೆಗಳಿಗೂ ವ್ಯತಿರಿಕ್ತವಾಗಿದೆ.

ಪ್ರಥಮವಾಗಿ ಆತ್ಮಾಹುತಿ ದಾಳಿಯು ಆತ್ಮಹತ್ಯೆಯನ್ನು ಒಳಗೊಂಡಿದ್ದು, ಇದನ್ನು ಇಸ್ಲಾಮ್ ಖಂಡತುಂಡವಾಗಿ ವಿರೋಧಿಸುತ್ತದೆ. ಬಾಂಬನ್ನು ಬಳಸಿಯೋ ಬಳಸದೆಯೋ ಈ ಕೃತ್ಯವನ್ನೆಸಗಿದರೆ ತಮ್ಮನ್ನು ತಾವೇ ಹತ್ಯೆ ಮಾಡುವ ವ್ಯಕ್ತಿಗಳೊಂದಿಗೆ ಇತರರೂ ಬಲಿಪಶುಗಳಾಗುತ್ತಾರೆ. ಇವರಲ್ಲಿ ಆ ವ್ಯಕ್ತಿಗಳ ಕುಟುಂಬಿಕರೂ ಸೇರಿದ್ದು, ಹಲವು ವರ್ಷಗಳ ವರೆಗೆ ಅವರು ಭಾವನಾತ್ಮಕ, ಧಾರ್ಮಿಕ ಹಾಗೂ ಇನ್ನಿತರ ಪರಿಣಾಮಗಳನ್ನು ಎದುರಿಸುತ್ತಿರಬೇಕಾಗುತ್ತದೆ. ಎರಡನೆಯದಾಗಿ ಮುಗ್ಧ ಜನರನ್ನು ಬಲಿತೆಗೆಯುವುದು, ಕ್ರೂರ ಸಾಮೂಹಿಕ ಕೊಲೆಯೇ ಆಗಿದೆ. ಕುರ್‌ಆನ್‌ನ ಪ್ರಕಾರ,"ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವ ಕೋಟಿಯನ್ನೇ ವಧಿಸಿದಂತೆ." (5:32) ಹಾಗಾಗಿ ಆತ್ಮಾಹುತಿ ದಾಳಿಯು ಎರಡು

ನೆಲೆಯಲ್ಲಿ ಗುರುತರ ಅಪರಾಧವಾಗಿದೆ. ಈ ಆತ್ಮಾಹುತಿ ಬಾಂಬ್ ದಾಳಿ ನಡೆಸುವ ವ್ಯಕ್ತಿ ನೇರವಾಗಿ ಸ್ವರ್ಗಕ್ಕೆ ಹೋಗುತ್ತಾನೆಂಬ ಕಲ್ಪನೆಯು ಯಾವ ವಿಧದಿಂದಲೂ ಸಮಂಜಸವೆನಿಸುವುದಿಲ್ಲ. ಮೂರನೆಯದಾಗಿ ಆತ್ಮಾಹತ್ಯಾ ಬಾಂಬ್ ದಾಳಿಯು ತಮ್ಮ ಹತಾಶೆಯ ಪ್ರದರ್ಶನವಾಗಿದ್ದರೆ, ಇದು ದೇವನ ಕಾರುಣ್ಯದ ಮೇಲೆ ನಂಬಿಕೆ ಇಲ್ಲದಿರುವುದು ಮತ್ತು ದೇವನ ಮೇಲೆ ಭರವಸೆ ಕಳಕೊಂಡ ಲಕ್ಷಣವಾಗಿದೆ. "ದೇವನ ಅನುಗ್ರಹದ ಬಗ್ಗೆ ನಿರಾಶರಾಗಬೇಡಿರಿ" ಎಂಬ ಇಸ್ಲಾಮ್‌ನ ಮೂಲ ಬೋಧನೆಗೆ ಇದು ವಿರುದ್ಧವಾಗಿದೆ. ಹತಾಶೆಯ ಸಂದರ್ಭಗಳಲ್ಲೂ ಕುರ್‌ಆನ್ ಸತ್ಯವಿಶ್ವಾಸಿಗಳಿಗೆ "ಈ ಲೋಕದಲ್ಲಿ ಒಳಿತನ್ನೇ ಮಾಡಿರಿ ಮತ್ತು ಸಹನೆಯಿಂದ ಮುನ್ನಡೆಯಿರಿ" ಎಂದು ಕಲಿಸಿಕೊಡುತ್ತದೆ.

ದೇವನ ಭೂಮಿಯು ಅತಿ ವಿಶಾಲವಾಗಿದೆ (39:10). ಕೊನೆಯದಾಗಿ, ಯುದ್ಧದ ಸಂದರ್ಭದಲ್ಲಿ ಆತ್ಮಾಹುತಿ ದಾಳಿಯು ಒಂದು ಸಮ್ಮತಾರ್ಹ ಆಯ್ಕೆಯಾಗಿದ್ದರೆ, ಪ್ರವಾದಿ ಮುಹಮ್ಮದ್‌ರ ಜೀವಮಾನದಲ್ಲಿ ಅದಕ್ಕೆ ನಿದರ್ಶನ ಸಿಗುತ್ತಿತ್ತು. ಅವರ ಮಕ್ಕಾ ಜೀವನದ ಕಾಲಘಟ್ಟದಲ್ಲಿ ಅವರು ಎಲ್ಲಾ ವಿಧದ ಬಹಿಷ್ಕಾರಗಳನ್ನು ಎದುರಿಸಿದಾಗಲೂ, ಅವರ ಜೀವಕ್ಕೆ ಕುತ್ತುಂಟಾದಾಗಲೂ ಅನುಯಾಯಿಗಳು ಕ್ರೂರ ಮರ್ದನಕ್ಕೊಳಗಾದ ಸಂದರ್ಭದಲ್ಲೂ ಹುಟ್ಟೂರಿನಿಂದ ಅವರನ್ನು ಹೊರಕಟ್ಟಿದಾಗಲೂ ಪ್ರವಾದಿ ಮುಹಮ್ಮದ್‌ರು ಧೃತಿಗೆಡಲಿಲ್ಲ. ಮದೀನಾದಲ್ಲಿ ತಮ್ಮ ವೈರಿಗಳ ವಿರುದ್ಧ ಹೋರಾಡುವಾಗಲೂ ಆತ್ಮಹತ್ಯಾ ದಾಳಿಯಂತಹ ವಿಧಾನವನ್ನು ಪ್ರವಾದಿ ಮುಹಮ್ಮದ್‌ರು ಬಳಸಲಿಲ್ಲ. ಬದಲಾಗಿ ಅವರ ಯುದ್ಧ ತಂತ್ರಗಳಲ್ಲಿ ಜೀವರಕ್ಷಣೆಯೇ ಪ್ರಮುಖ ಧ್ಯೇಯವಾಗಿತ್ತು. ಮಾತ್ರವಲ್ಲ ಮುಗ್ಧ ಜನರನ್ನು ಕೊಲ್ಲುವ, ವಿರೋಧಿಗಳಲ್ಲದವರನ್ನು ಸದೆ ಬಡಿಯುವ, ಮಹಿಳೆಯರು, ಮಕ್ಕಳನ್ನು ಕೊಲ್ಲುವುದನ್ನು, ಜಾನುವಾರುಗಳನ್ನು – ಮರಮಟ್ಟುಗಳನ್ನು ನಾಶ ಮಾಡುವುದನ್ನು ಪ್ರವಾದಿ ತೀವ್ರವಾಗಿ ವಿರೋಧಿಸಿದ್ದಾರೆ. ಯುದ್ಧವೊಂದರಲ್ಲಿ ಅಚಾತುರ್ಯದಿಂದಾಗಿ ಕೆಲವು ಮುಗ್ಧ ಮಕ್ಕಳ ಕೊಲೆಯಾಗಿತ್ತು. ಪ್ರವಾದಿಯವರು ಇದರಿಂದ ಬಹಳ ನೊಂದರು ಮತ್ತು ಕಣ್ಣೀರಿಡುತ್ತಿದ್ದರು. ಅವರ ಅನುಯಾಯಿಯೊಬ್ಬರು ಅವರನ್ನು ಸಮಾಧಾನ ಪಡಿಸುತ್ತಾ, 'ಅವರು ಮುಸ್ಲಿಮೇತರರ ಮಕ್ಕಳು' ಎಂದು ಹೇಳಿದರು. ಇದಕ್ಕೆ ಪ್ರವಾದಿವರ್ಯರು ಕುಪಿತರಾಗಿ "ಮುಸ್ಲಿಮರಲ್ಲದ ಮಕ್ಕಳೂ ನಿಮಗಿಂತ ಉತ್ತಮರು. ಜಾಗ್ರತೆ ಮಕ್ಕಳನ್ನು ಎಂದೂ ಕೊಲ್ಲದಿರಿ, ಜಾಗ್ರತೆ ಮಕ್ಕಳನ್ನು ಕೊಲೆಗೈಯ್ಯದಿರಿ, ಎಲ್ಲ ಮಗುವು ದೇವನ ನೈಜ ಪ್ರಕೃತಿಯಲ್ಲಿ ಹುಟ್ಟುತ್ತದೆ."

ಆತ್ಮಹತ್ಯಾ ಬಾಂಬ್ ದಾಳಿಯನ್ನು ಯುದ್ಧಾಸ್ತ್ರವನ್ನಾಗಿ ಬಳಸುವುದು ಅಥವಾ ಸೈನ್ಯದ ತಂತ್ರವನ್ನಾಗಿ ಬಳಸುವುದು ಕುರ್‌ಆನ್ ಮತ್ತು ಇಸ್ಲಾಮ್ ಪ್ರತಿಪಾದಿಸುವ ಎಲ್ಲ ತತ್ವಗಳನ್ನೂ ವಿರೋಧಿಸಿದಂತಾಗುವುದು. ಜೀವವು ಪವಿತ್ರವಾಗಿದೆ. ಆದ್ದರಿಂದಲೇ,

"ಯಾವ ಜೀವಿಯೂ ಅಲ್ಲಾಹನ ಅನುಮತಿ ಹೊಂದದೇ ಸಾಯಲಾರದು. ಮರಣದ ಸಮಯವಂತೂ ಬರೆಯಲ್ಪಟ್ಟಿದೆ"(3:145) ಎಂದು ಕುರ್‌ಆನ್ ಪ್ರತಿಪಾದಿಸುತ್ತದೆ.

ನಮ್ಮ ಮನುಷ್ಯತ್ವದ ನಿಜವಾದ ಪರೀಕ್ಷೆ ನಡೆಯುವುದು ಹತಾಶೆ, ಅಸಹಾಯಕತೆ, ನೋವು ದುಖಃಗಳ ಸಂದಿಗ್ಧ ಪರಿಸ್ಥಿತಿಗಳಲ್ಲೇ. ಇಂತಹ ಸಂದರ್ಭಗಳಲ್ಲಿ ಬದುಕು ದುಸ್ತರವೆನಿಸುತ್ತದೆ. ಆದರೆ ಇಂತಹ ಪರಿಸ್ಥಿತಿಯಲ್ಲೇ ಜೀವನದ ಮೇಲಿನ ನಮ್ಮ ವಿಶ್ವಾಸವನ್ನು ದೃಢಪಡಿಸಿಕೊಳ್ಳುವ ಅಗತ್ಯವಿದೆ.

ಕೆಲವು ಪಥಭ್ರಷ್ಟ ಮುಸಲ್ಮಾನರು ಇಸ್ಲಾಮಿ ಯುದ್ಧ ನೀತಿಗಳ ಬಗ್ಗೆ ತಮ್ಮ ಅಜ್ಞಾನವನ್ನು ಇನ್ನಾದರೂ ಕೊನೆಗೊಳಿಸುವ ಅಗತ್ಯವಿದೆ. ಯಾವುದನ್ನು ಹರಾಮ್ (ನಿಷೇಧ) ಗೊಳಿಸಲಾಗಿದೆಯೋ ಅದು ತನ್ನಷ್ಟಕ್ಕೆ ಹಲಾಲ್ (ಧರ್ಮಸಮ್ಮತ) ಗೊಳ್ಳುವುದು ಇಸ್ಲಾಮ್‌ನಲ್ಲಿ ಸಾಧ್ಯವಿಲ್ಲ. ಆತ್ಮಹತ್ಯೆಯನ್ನು ಕೇವಲ ಪ್ರವಾದಿ ಮುಹಮ್ಮದ್‌ರು ವಿರೋಧಿಸುವುದಲ್ಲ ಸರ್ವಶಕ್ತನಾದ ದೇವನೇ ಈ ಬಗ್ಗೆ ಎಚ್ಚರಿಸಿರುವನು. ಜ್ಞಾನವನ್ನು ಪಡೆಯಲು ನಾವು ಯಾರು ಜ್ಞಾನಿಗಳಾಗಿದ್ದಾರೋ ಅವರನ್ನು ಆಶ್ರಯಿಸಬೇಕೇ ಹೊರತು ಅಲ್ಪಜ್ಞಾನಿ ಅಥವಾ ಅಜ್ಞಾನಿಗಳನ್ನಲ್ಲ. ಇಸ್ಲಾಮಿನ ಸರಿಯಾದ ತಿಳುವಳಿಕೆ ಇಲ್ಲದವರು ತಮ್ಮ ಸ್ವಂತ ನಿಲುವುಗಳನ್ನು ಇಸ್ಲಾಮಿನ ಹೆಸರಲ್ಲಿ ಪ್ರಚಾರ ಪಡಿಸುತ್ತಾರೆ. ಒಂದು ವಿಷಯವನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಹೆಚ್ಚಿನ ಆತ್ಮಹತ್ಯಾ ದಾಳಿಗಳ ಹಿಂದಿರುವ ಕಾರಣಗಳು ರಾಜಕೀಯ ಪ್ರೇರಿತವೇ ವಿನಃ ಧಾರ್ಮಿಕವಲ್ಲ. ಇಸ್ಲಾಮಿನ ದೃಷ್ಟಿಯಲ್ಲಿ ಆತ್ಮಹತ್ಯೆ ಅತ್ಯಂತ ದೊಡ್ಡ ಪಾಪವಾಗಿರುವಾಗ ಅದರ ಮೂಲಕ ಹುತಾತ್ಮತೆ ದೊರೆಯುತ್ತದೆ ಎಂದು ಭಾವಿಸುವುದು ಮೂರ್ಖತನ.

ಕುರ್‌ಆನ್ ಹೇಳುತ್ತದೆ:

> "ನಿಮ್ಮನ್ನು ನೀವೇ ವಧಿಸಿ ಕೊಳ್ಳಬೇಡಿರಿ, ಅಲ್ಲಾಹನು ನಿಮ್ಮ ಮೇಲೆ ಕೃಪೆಯುಳ್ಳವನೆಂಬುದನ್ನು ಖಾತ್ರಿಯಾಗಿ ನಂಬಿರಿ." (ಕುರ್‌ಆನ್ 4: 29)
>
> "ನಿಮ್ಮನ್ನು ನೀವೇ ವಿನಾಶಕ್ಕೊಳಪಡಿಸಿಕೊಳ್ಳಬೇಡಿರಿ." (ಕುರ್‌ಆನ್ 2: 195)

ಆತ್ಮಹತ್ಯೆಯ ಕುರಿತು ಪ್ರವಾದಿವರ್ಯರು ಈ ರೀತಿ ಹೇಳಿರುವರು,

> " ನಿಶ್ಚಯವಾಗಿಯೂ ಯಾರು (ಉದ್ದೇಶಪೂರ್ವಕವಾಗಿ) ತನ್ನನ್ನು ತಾನೇ ಹತ್ಯೆಗಯ್ಯುವನೋ ಆತನನ್ನು ನರಕಾಗ್ನಿಯಲ್ಲಿ ಹಾಕಿ ಶಿಕ್ಷಿಸಲಾಗುವುದು ಮತ್ತು ಅವನು ಅದರಲ್ಲೇ ಸದಾ ಕಾಲವಿರುವನು"

ಕುರ್‌ಆನ್‌ನ ಸೂಕ್ತಗಳು ಆತ್ಮಹತ್ಯೆಯನ್ನು ಖಂಡತುಂಡವಾಗಿ ನಿಷೇಧಿಸುತ್ತವೆ ಮತ್ತು ಹದೀಸ್‌ನಲ್ಲಿ ಆ ವ್ಯಕ್ತಿಗೆ ಸ್ವರ್ಗವು ನಿಷಿದ್ಧವಾಗಿದೆ ಎಂದು ಹೇಳಲಾಗಿದೆ.

# ಜಿಹಾದ್ ಮತ್ತು ಭಯೋತ್ಪಾದನೆ ಸಮಾನವೇ?

# ಖಂಡಿತವಾಗಿಯೂ ಅಲ್ಲ ...!

ಜಿಹಾದನ್ನು ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದರ ವಚನಗಳ ಬೆಳಕಿನಲ್ಲಿ ಅರ್ಥೈಸಬೇಕಾಗಿದೆ. ಜಿಹಾದ್ ಎಂಬ ಅರಬಿ ಪದದ ಅರ್ಥ "ಹೋರಾಟ" ಅಥವಾ "ನೇರ ಮಾರ್ಗಕ್ಕಾಗಿ ನಾವು ನಡೆಸುವ ದಿಟ್ಟ ಮತ್ತು ಸೂಕ್ತ ಪ್ರಯತ್ನವಾಗಿದೆ." ಈ ಹೋರಾಟವು ಬೌದ್ಧಿಕ, ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ಮಾತ್ರವಲ್ಲದೇ ಶಾರೀರಿಕವೂ ಆಗಿರಬಹುದು.

## ಅತ್ಯುನ್ನತ ಜಿಹಾದ್

ಹುನೈನ್ ಯುದ್ಧದಿಂದ ಮರಳುವಾಗ ಪ್ರವಾದಿ ಮುಹಮ್ಮದ್‌ರು ಈ ರೀತಿ ಘೋಷಿಸಿದರು,
“ನಾವು ಒಂದು ಚಿಕ್ಕ ಜಿಹಾದ್‌ನಿಂದ ದೊಡ್ಡ ಜಿಹಾದ್‌ನ ಕಡೆಗೆ ಮರಳುತ್ತಿದ್ದೇವೆ.” ಅನುಯಾಯಿಯೊಬ್ಬರು ಕೇಳಿದರು, “ಅತ್ಯುನ್ನತ ಜಿಹಾದ್ ಎಂದರೇನು?” ಆಗ ಪ್ರವಾದಿವರ್ಯರು ಉತ್ತರಿಸಿದರು, “ಕೆಡುಕಿನಿಂದ ದೂರ ಸರಿಯಲು ತನ್ನ ಆತ್ಮದೊಂದಿಗೆ ಮಾಡುವ ಜಿಹಾದ್.”

ಹೀಗೆ ಪ್ರವಾದಿ ಮುಹಮ್ಮದ್‌ರು ಮನುಷ್ಯ ಕೆಡುಕಿನ ವಿರುದ್ಧ ನಡೆಸುವ ಆಧ್ಯಾತ್ಮಿಕ ಸಂಘರ್ಷವನ್ನು ಮಹೋನ್ನತ ಜಿಹಾದ್ ಎಂದು ಕರೆಯುವ ಮೂಲಕ ಅದಕ್ಕೆ ಅತಿ ಹೆಚ್ಚಿನ ಪ್ರಾಧಾನ್ಯ ನೀಡಿದರು. ಮುಸ್ಲಿಮರಿರಲಿ, ಮುಸ್ಲಿಮೇತರರಿರಲಿ ಎಲ್ಲ ಮಾನವರಿಗೂ ಈ ಆಂತರಿಕ ಸಂಘರ್ಷ ಎನ್ನುವುದು ಅತ್ಯಂತ ಕಷ್ಟಕರವಾಗಿರುತ್ತದೆ. ಇದು ಅತ್ಯಂತ ಪಾವನ ಹೋರಾಟವಾಗಿದ್ದು ಇದಕ್ಕೆ ಹೆಚ್ಚಿನ ಅರಿವು, ಔದಾರ್ಯ ಮತ್ತು ಪ್ರಾಮಾಣಿಕತೆ ಬೇಕು.

ಸಾಮಾಜಿಕ ಜೀವನದಲ್ಲಿ ಎಲ್ಲ ರೀತಿಯ ಆಕ್ರಮಣ, ದೌರ್ಜನ್ಯಗಳು ಮತ್ತು ಅನ್ಯಾಯದ ವಿರುದ್ಧ ಹೋರಾಡಿ, ಮೌಲ್ಯಗಳು, ನ್ಯಾಯ ಮತ್ತು ಶಾಂತಿಯನ್ನು ಸ್ಥಾಪಿಸುವುದೇ ಜಿಹಾದ್‌ನ ಗುರಿಯಾಗಿದೆ. ಇಸ್ಲಾಮ್ ಶಾಂತಿಯಾಗಿದ್ದರೆ ಜಿಹಾದ್ ಎಂಬುದು ಅದನ್ನು ಸಾಧಿಸುವ ವಿಧಾನವಾಗಿದೆ.

# ಜಿಹಾದ್‌ನ ಕನಿಷ್ಟ ಮಟ್ಟ

ಹಾಗಾದರೆ ಸಣ್ಣ ಜಿಹಾದ್ ಎಂದರೆ ಏನು? ಪ್ರವಾದಿ ಮುಹಮ್ಮದ್‌ರ ಪ್ರಕಾರ ಇದು ಆತ್ಮರಕ್ಷಣೆ, ನ್ಯಾಯದ ಸ್ಥಾಪನೆ ಮತ್ತು ಇಸ್ಲಾಮಿನ ಸಂರಕ್ಷಣೆಗಾಗಿ ನಡೆಸುವ ಹೋರಾಟವಾಗಿದೆ. ಆದರೆ ಆಕ್ರಮಣಕಾರಿ ಯುದ್ಧವಾಗಲೀ ಅಥವಾ ಭೂಭಾಗಗಳನ್ನು ವಶಪಡಿಸುವ ಸಮರವಾಗಲೀ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಆತ್ಮರಕ್ಷಣೆಗಾಗಿರುವ ಯುದ್ಧವಾಗಿದ್ದರೂ ಯಾರು ಇದರಲ್ಲಿ ಭಾಗಿಯಾಗುತ್ತಾರೋ ಅವರಿಗೆ ಕೆಲವು ಹೊಣೆಗಾರಿಕೆಗಳಿರುತ್ತದೆ. ನೈತಿಕವಾಗಿ ಜಿಹಾದನ್ನು ಇಸ್ಲಾಮಿ ನಿಯಮಾವಳಿಗಳಂತೆಯೇ ಪಾಲಿಸಬೇಕಾಗಿದೆ. ಹಾಗೆಂದರೆ ಮುಗ್ಧರು, ಮಹಿಳೆಯರು, ಮಕ್ಕಳು ಮತ್ತು ಆಯುಧರಹಿತ ನಾಗರಿಕರಿಗೆ ಯಾವುದೇ ತೊಂದರೆಗಳಾಗಬಾರದು. ಸೊತ್ತುಗಳು ಹಾಗೂ ಪ್ರಕೃತಿಗೆ ಹಾನಿಯುಂಟಾಗಬಾರದು ಮತ್ತು ಇತರರ ಆರಾಧನಾ ಸ್ಥಳಗಳನ್ನು ನಾಶ ಮಾಡಬಾರದು. ಅಪಹರಣ, ಒತ್ತೆಯಾಳುಗಳ ಹತ್ಯೆ, ಜನ ಸಾಮಾನ್ಯರ ಮೇಲೆ ಯದ್ವಾತದ್ವಾ ಗುಂಡಿನ ದಾಳಿ, ಜನವಾಸದ ಪ್ರದೇಶಗಳಲ್ಲಿ, ಕಟ್ಟಡಗಳಲ್ಲಿ ಬಾಂಬ್‌ಗಳನ್ನಿರಿಸುವುದು ದುಷ್ಟ ಕೃತ್ಯಗಳಾಗಿದ್ದು ಇಸ್ಲಾಮ್ ಇದನ್ನು ತೀವ್ರವಾಗಿ ಖಂಡಿಸುತ್ತದೆ. ಇದು ಭಯೋತ್ಪಾದನೆ ಮತ್ತು ಕೊಲೆಯ ಸಾಲಿಗೆ ಸೇರುತ್ತದೆ.

ಜಿಹಾದನ್ನು ಯಾರು ಬೇಕಾದರೂ ಯಾರ ವಿರುದ್ಧ ಬೇಕಾದರೂ ಏಕಪಕ್ಷೀಯವಾಗಿ ಘೋಷಿಸುವಂತಿಲ್ಲ.. ಜಿಹಾದ್‌ಗೆ ಇಡೀ ಸಮುದಾಯದ ಒಪ್ಪಿಗೆ ಅಗತ್ಯವಿದ್ದು ತಮ್ಮ ವೈರಿಗಳು, ಆಕ್ರಮಣಕಾರರು ಯಾರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. ಜತೆಗೆ ಅವರು ಅಸಹಾಯಕರ ಮೇಲೆ ದೌರ್ಜನ್ಯವೆಸಗಿದ್ದಾರೆ ಎಂಬುದು ಖಚಿತವಾಗಬೇಕು.

ಹಾಗೆಯೇ, ಯಾವುದಾದರೂ ತಥಾಕಥಿತ 'ಇಸ್ಲಾಮೀ ಜಿಹಾದ್' ಗುಂಪುಗಳು ಈ ಹೊಣೆಗಾರಿಕೆಯನ್ನು ತಾವೇ ಸ್ವಯಂ ವಹಿಸಿಕೊಳ್ಳುವಂತಿಲ್ಲ. ಮುಗ್ಧ ಜನರನ್ನು ಹಿಂಸಿಸುವುದೂ ಸೇರಿದಂತೆ ಅವರು ನಡೆಸುವ ತೀವ್ರಗಾಮಿ ಕೃತ್ಯಗಳಿಗೆ ಇಸ್ಲಾಮಿ ಕಾನೂನಿನಲ್ಲಿ ಯಾವುದೇ ಆಧಾರವಿಲ್ಲ. ಇಸ್ಲಾಮನ್ನು ಕೆಲವು ತಿಳಿಗೇಡಿ ಅಥವಾ ಅಜ್ಞಾನಿ ಮುಸ್ಲಿಮರ ತಪ್ಪು ಕೃತ್ಯಗಳ ಆಧಾರದಲ್ಲಿ ಅಳೆಯುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಹಾಗೆಯೇ ಮುಸ್ಲಿಮರ ಸದ್ಯದ ಶೋಚನೀಯ ಪರಿಸ್ಥಿತಿಯನ್ನು ನೋಡಿ ಇಸ್ಲಾಮಿನ ಬಗ್ಗೆ ತೀರ್ಮಾನಕ್ಕೆ ಬರುವಂತಿಲ್ಲ.

ಯೂಸುಫ್ ಇಸ್ಲಾಮ್ ಎಂದು ಚಿರಪರಿಚಿತರಾಗಿರುವ ಮಾಜಿ ಪಾಪ್ ಸಂಗೀತಗಾರ ಕ್ಯಾಟ್ ಸ್ಟೀವನ್ಸ್ ಹೇಳುವಂತೆ, "ಇಸ್ಲಾಮನ್ನು ಮಾಧ್ಯಮಗಳಲ್ಲಿ ತೋರಿಸುವಂತೆ ಕೆಲವು ಪಥಭ್ರಷ್ಟ ಮುಸ್ಲಿಮರ ವರ್ತನೆಯಿಂದ ಅಳೆಯುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಇದು ಕಾರು ಚಾಲಕ ಕುಡುಕ ಎಂಬ ಕಾರಣಕ್ಕೆ ಕಾರನ್ನೇ ದೂಷಿಸಿದಂತೆ."

## ಉಗ್ರಗಾಮಿಗಳು ಇಸ್ಲಾಮನ್ನು ಪ್ರತಿನಿಧಿಸುವುದಿಲ್ಲ ಎಂಬುದನ್ನು ಮುಸ್ಲಿಮ್ ಸಮುದಾಯಕ್ಕೆ ಮತ್ತು ಇಡೀ ಸಮಾಜಕ್ಕೆ ಯಾವ ರೀತಿಯಲ್ಲಿ ತಿಳಿಸಬಹುದು?

ಇಸ್ಲಾಮ್ ಸೌಮ್ಯವಾದ, ನ್ಯಾಯ ಮತ್ತು ಶಾಂತಿಯನ್ನು ಪ್ರತಿಪಾದಿಸುತ್ತದೆ ಎಂಬುದನ್ನು ಜನರಿಗೆ ಮನದಟ್ಟು ಮಾಡುವ ಅತ್ಯುತ್ತಮ ವಿಧಾನವೆಂದರೆ ಆ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು. ಇಸ್ಲಾಮ್‌ನ ಬಗ್ಗೆ ಜನರಲ್ಲಿ ಇರುವ ಸಂದೇಹಗಳಿಗೆ ಉತ್ತರಿಸಲು ಮತ್ತು ಸಂವಾದ ನಡೆಸಲು ಯಾವತ್ತೂ ಹಿಂದೇಟು ಹಾಕಬೇಡಿ. ಉಗ್ರಗಾಮಿಗಳು ಯಾವ ರೀತಿ ತಮ್ಮ ರಾಜಕೀಯ ಹಾಗೂ ಆರ್ಥಿಕ ಉದ್ದೇಶಗಳಿಗೆ ತಕ್ಕಂತೆ ಇಸ್ಲಾಮಿನ ಬೋಧನೆಗಳನ್ನು ತಿರುಚುತ್ತಿದ್ದಾರೆ ಎಂಬುದನ್ನು ಸರಿಯಾಗಿ ತಿಳಿದುಕೊಂಡಾಗ ಮಾತ್ರ ಅವರ ವಾದಗಳನ್ನು ಪರಿಣಾಮಕಾರಿಯಾಗಿ, ನಿಖರವಾಗಿ ಮತ್ತು ಪ್ರಾಮಾಣಿಕವಾಗಿ ಎದುರಿಸಲು ಸಾಧ್ಯವಾಗುತ್ತದೆ.

> “ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ. ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವರ್ತಿಸಿರಿ. ಯಾರು ಅವನ ಮಾರ್ಗದಿಂದ ಭ್ರಷ್ಟನಾಗಿದ್ದಾನೆ ಮತ್ತು ಯಾರು ನೇರ ಮಾರ್ಗದಲ್ಲಿದ್ದಾನೆ ಎಂಬುದನ್ನು ನಿಮ್ಮ ಪ್ರಭುವೇ ಚೆನ್ನಾಗಿ ಬಲ್ಲನು. ನೀವು ಪ್ರತೀಕಾರವೆಸಗುವುದಿದ್ದರೆ ನಿಮ್ಮ ಮೇಲೆ ಅತಿರೇಕವೆಸಗಲಾಗಿದ್ದಷ್ಟು ಮಾತ್ರವೆಸಗಿರಿ. ಆದರೆ, ನೀವು ತಾಳ್ಮೆ ವಹಿಸಿದರೆ ನಿಶ್ಚಯವಾಗಿಯೂ ಇದು ಸಹನಶೀಲರಿಗೆ ಅತ್ಯುತ್ತಮ. ಸಹನೆಯೊಂದಿಗೆ ಕಾರ್ಯವೆಸಗುತ್ತಲೇ ಸಾಗಿರಿ ಮತ್ತು ನಿಮ್ಮ ಈ ಸಹನೆ ಅಲ್ಲಾಹನ ಅನುಗ್ರಹದಿಂದಲೇ ಇದೆ. ನಿಶ್ಚಯವಾಗಿಯೂ ಅಲ್ಲಾಹನು ದೇವ ಭಯದೊಂದಿಗೆ ವರ್ತಿಸುವವರ ಹಾಗೂ ಸೌಜನ್ಯ ನೀತಿಯನ್ನುಸರಿಸುವವರ ಸಂಗಡವಿದ್ದಾನೆ.” (ಕುರ್‌ಆನ್ 16: 125–128)

# ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಇರುವ ಸಾಮಾನ್ಯ ಗ್ರಹಿಕೆ

## ಇಸ್ಲಾಮನ್ನು ಭಯೋತ್ಪಾದನೆಯೊಂದಿಗೆ ಜೋಡಿಸುವಾಗ ನಾನು ಯಾವ ರೀತಿ ಪ್ರತಿಕ್ರಿಯಿಸಬೇಕು?

ಇಸ್ಲಾಮನ್ನು ಭಯೋತ್ಪಾದನೆಯೊಂದಿಗೆ ಸಮೀಕರಿಸುವುದನ್ನು ಕೇಳಿದಾಗ ಸಹಜವಾಗಿಯೇ ಬಹಳ ಬೇಸರ ಮತ್ತು ದುಃಖವಾಗುತ್ತದೆ. ನಾವು ಯಾವುದೇ ಸಮಾಜದಲ್ಲಿ ಬದುಕುತ್ತಿದ್ದರೂ ಅದರ ಆಗುಹೋಗುಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ತುಂಬಾ ಅಗತ್ಯವಾಗಿದೆ. ನಮ್ಮ ನೆರೆಯವರೊಂದಿಗೆ ಸಂಬಂಧವಿರಿಸುವುದು. ಸಮುದಾಯದ ಸಂಘಗಳಲ್ಲಿ ಭಾಗವಹಿಸುವುದು, ಶಾಲಾ ಕಾಲೇಜುಗಳ ರಕ್ಷಕ ಸಂಘಗಳಲ್ಲಿ ಭಾಗವಹಿಸುವುದು ಮತ್ತು ಸ್ವಯಂಸೇವೆಯಲ್ಲಿ ತೊಡಗಿಸಿಕೊಳ್ಳುವುದು ವ್ಯಕ್ತಿ ಎಂಬ ನೆಲೆಯಲ್ಲಿ ಅಗತ್ಯವಾಗಿದೆ.

ಈ ರೀತಿಯ ಭಾಗವಹಿಸುವಿಕೆಯಿಂದ ನಾವು ನಮ್ಮ ಧಾರ್ಮಿಕ ವಿಶ್ವಾಸಗಳನ್ನು ಪ್ರಾಯೋಗಿಕವಾಗಿ ಜನರ ಮುಂದಿಟ್ಟಂತಾಗುತ್ತದೆ. ಮಾತ್ರವಲ್ಲ, ಇಸ್ಲಾಮ್‌ನ ಬಗ್ಗೆ ಅವರಲ್ಲಿರಬಹುದಾದ ತಪ್ಪುತಿಳುವಳಿಕೆಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. ಸಮೀಕ್ಷೆಗಳಿಂದ ವ್ಯಕ್ತವಾದಂತೆ ಯಾರು ಮುಸ್ಲಿಮರೊಂದಿಗೆ ಹೆಚ್ಚೆಚ್ಚು ವ್ಯವಹರಿಸುತ್ತಾರೋ ಮತ್ತು ಮಾತುಕತೆಯಲ್ಲಿ ತೊಡಗುತ್ತಾರೋ ಅವರು ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಸರಿಯಾದ ಸಕಾರಾತ್ಮಕ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಹಾಗೆಯೇ ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಜನರಿಗಿರುವ ತಪ್ಪುಕಲ್ಪನೆ ಮತ್ತು ಪೂರ್ವಗ್ರಹಪೀಡಿತ ನಂಬಿಕೆಗಳನ್ನು ತಿದ್ದುವ ಯಾವ ಅವಕಾಶವನ್ನೂ ಮುಸ್ಲಿಮರು ಕೈಬಿಡಬಾರದು ಮತ್ತು ಈ ನಿಟ್ಟಿನಲ್ಲಿ ಯಾವ ರೀತಿಯ ಹಿಂಜರಿಕೆಯನ್ನೂ ತೋರಿಸಬಾರದು.

ಒಂದು ಸಮಾಜ ಎಂಬ ನೆಲೆಯಲ್ಲಿ ಇಸ್ಲಾಮೋಫೋಬಿಯಾ ಮತ್ತು ಕೋಮುವಾದದ ವಿರುದ್ಧ ಹೋರಾಡುತ್ತಿರುವ ಹಾಗೂ ಭಾರತೀಯ ಮುಸ್ಲಿಮರ ಸಮಸ್ಯೆಗಳ ಅಭಿವ್ಯಕ್ತಿಗೆ ವೇದಿಕೆ ಕಲ್ಪಿಸುತ್ತಿರುವ ಸಂಘಟನೆಗಳ ಜತೆ ನಾವು ಕೈಜೋಡಿಸುವ ಅಗತ್ಯವಿದೆ.

ಈ ನಿಟ್ಟಿನಲ್ಲಿ ಸಲಾಮ್ ಸೆಂಟರ್ ಹಲವಾರು ಹೆಜ್ಜೆಗಳನ್ನು ಹಾಕಿದೆ. 2008ರಲ್ಲಿ ನಾವು ಈ ಕುರಿತು ಮುಂದಡಿ ಇಟ್ಟೆವು. ಈ ಮಧ್ಯೆ ನಾವು ಹಲವಾರು ಕೃತಿಗಳನ್ನು ಪ್ರಕಟಿಸಿದ್ದೇವೆ. ಜನಸಾಮಾನ್ಯರಲ್ಲಿ ಇಸ್ಲಾಮಿನ ಕುರಿತು ಸಕಾರಾತ್ಮಕ ಚಿತ್ರಣ ಮೂಡಿಸುವುದು ಇದರ ಉದ್ದೇಶವಾಗಿದೆ.

**1. ಪ್ರವಾದಿ ಮುಹಮ್ಮದ್ ಶಿಕ್ಷಣ ಮತ್ತು ಜೀವನ**
ಈ ಕೃತಿ ಪ್ರವಾದಿಯವರ (ಸ) ಶಿಕ್ಷಣ ಮತ್ತು ಜೀವನವನ್ನು ಬಿಂಬಿಸುತ್ತದೆ.

**2. ಇಸ್ಲಾಮ್ ಎಲ್ಲರಿಗಾಗಿ**
ಈ ಕೃತಿ ಇಸ್ಲಾಮಿನ ಮೂಲಭೂತ ವಿಶ್ವಾಸವನ್ನು ಪ್ರಸ್ತುತಪಡಿಸುತ್ತದೆ.

**3. ತಪ್ಪು ಕಲ್ಪನೆಗಳು**
ಈ ಕೃತಿ ಇಸ್ಲಾಮಿನ ಬಗೆಗಿನ ತಪ್ಪುಕಲ್ಪನೆಗಳನ್ನು ಹೋಗಲಾಡಿಸುತ್ತದೆ.

ತಮ್ಮ ದೇಶ ಬಾಂಧವ ಸ್ನೇಹಿತರಿಗೆ ಇಸ್ಲಾಮಿನ ಕುರಿತು ಪರಿಚಯಪಡಿಸಲು ಈ ಎಲ್ಲ ಕೃತಿಗಳನ್ನು ಉಡುಗೊರೆಯಾಗಿ ನೀಡಲಾಗುತ್ತದೆ. ಈ ಕೃತಿಗಳು ಇಂಗ್ಲಿಷ್, ತಮಿಳು, ಹಿಂದಿ, ತೆಲುಗು ಮತ್ತು ಉರ್ದು ಭಾಷೆಗಳಲ್ಲೂ ಲಭ್ಯವಿದೆ. ಈ ಕೃತಿಗಳನ್ನು ಸಲಾಮ್ ಸೆಂಟರಿನ ಈ ನಂಬರಿಗೆ 9901129956 ಕರೆ ಮಾಡಿ ಪಡೆದುಕೊಳ್ಳಬಹುದು.

# ಕಿರುಕುಳ ಮತ್ತು ತಾರತಮ್ಯ

ಔದ್ಯೋಗಿಕ ಕ್ಷೇತ್ರದಲ್ಲಿ ಅಧಿಕಾರಿಗಳಿಂದ ಮತ್ತು ಸಹೋದ್ಯೋಗಿಗಳಿಂದ ತಾರತಮ್ಯವಾಗುತ್ತಿದ್ದರೆ ನಾವು ಏನು ಮಾಡಬೇಕು?

ಧರ್ಮದ ಆಧಾರದಲ್ಲಿ ಯಾವುದೇ ರೀತಿಯ ತಾರತಮ್ಯ ಮತ್ತು ಕಿರುಕುಳವಿಲ್ಲದ ಸುರಕ್ಷಿತ ವಾತಾವರಣದಲ್ಲಿ ನೌಕರಿ ಮಾಡುವುದು ಪ್ರತಿಯೊಬ್ಬನ ಹಕ್ಕಾಗಿದೆ. ಕೆಲಸದ ಸ್ಥಳದಲ್ಲಿ ಅಥವಾ ಸೇವೆ ಒದಗಿಸುವಾಗ ಕಿರುಕುಳರಹಿತ ವಾತಾವರಣವನ್ನು ಖಾತ್ರಿಪಡಿಸಬೇಕಾದುದು ಉದ್ಯೋಗದಾತರು ಮತ್ತು ಸೇವೆ ಒದಗಿಸುವವರ ಕರ್ತವ್ಯವಾಗಿದೆ. ಒಂದು ವೇಳೆ ಕಿರುಕುಳ ನಡೆಯುತ್ತಿದ್ದರೆ ಶಿಸ್ತುಕ್ರಮಕೈಗೊಳ್ಳಬೇಕಾದುದು ಉದ್ಯೋಗದಾತರ ಮತ್ತು ಸೇವೆಯನ್ನೊದಗಿಸುವವರ ಕರ್ತವ್ಯವಾಗಿದೆ.

ಕೆಲಸದ ಸ್ಥಳದಲ್ಲಿ ನಿಮ್ಮ ಮೇಲೆ ಕಿರುಕುಳ ಆಗುತ್ತಿದ್ದರೆ ಅಥವಾ ತಾರತಮ್ಯ ಕಂಡು ಬಂದರೆ ನಿಮ್ಮ ಸಂಸ್ಥೆಯಲ್ಲಿಯೇ ಇರುವ ಯಾರಾದರೊಬ್ಬರಿಗೆ ಈ ವಿಚಾರ ತಿಳಿಸಬೇಕು.

ಉದ್ಯೋಗದ ಸ್ವರೂಪ ಮತ್ತು ವ್ಯವಸ್ಥೆಯ ಆಧಾರದಲ್ಲಿ ನಿಮಗೆ ನಿಮ್ಮ ಮೇಲಾಗುತ್ತಿರುವ ಅನ್ಯಾಯವನ್ನು ಈ ಕೆಳಗಿನವರಲ್ಲಿ ಹೇಳಬಹುದು.

1) ನಿಮ್ಮ ನಿಕಟ ಮೇಲಧಿಕಾರಿ ಅಥವಾ ಉನ್ನತ ವ್ಯವಸ್ಥಾಪಕ

2) ನಿಮ್ಮ ಒಕ್ಕೂಟದ ಪ್ರತಿನಿಧಿ ಅಥವಾ

3) ಮಾನವ ಹಕ್ಕು ಆಯೋಗ

ಯಾವ ಸಂದರ್ಭದಲ್ಲಿ ಮತ್ತು ಎಲ್ಲಿ ಈ ತಾರತಮ್ಯ ಅಥವಾ ಕಿರುಕುಳ ನಡೆಯಿತು ಎಂಬುದರ ಮಾಹಿತಿ, ಯಾಕಾಗಿ ಇದು ನಡೆಯಿತು ಎಂಬುದರ ಸರಳ ವಿವರಣೆ ಇರಬೇಕು. ಸಮಸ್ಯೆಯನ್ನು ತಿಳಿಸುವಲ್ಲಿ ನೀವು ಸಂಯಮದಿಂದಿದ್ದು ಸರಿಯಾದ ರೀತಿಯಲ್ಲಿ ಅದನ್ನು ತಿಳಿಸಬೇಕು. ನೀವು ಶಾಂತರಾಗಿ ಈ ವಿಷಯವನ್ನು ಆ ಕೂಡಲೇ ತಿಳಿಸಲು ಸಾಧ್ಯವಾಗದಿದ್ದರೆ ನೀವು ಸಮಾಧಾನಗೊಳ್ಳುವವರೆಗೂ ಕಾಯಿರಿ.

ನಿಮ್ಮ ಸಮಸ್ಯೆಗೆ ದೊರಕಿದ ಪರಿಹಾರದಿಂದ ನೀವು ಸಮಾಧಾನಗೊಳ್ಳದಿದ್ದರೆ ಅಥವಾ ನಿಮಗೆ ಸಲಹೆ ಮಾರ್ಗದರ್ಶನಗಳ ಅಗತ್ಯವಿದ್ದರೆ ನೀವು ಕಾನೂನು ತಜ್ಞರನ್ನು ಅಥವಾ ವಕೀಲರನ್ನು ಸಂಪರ್ಕಿಸಿ ನಿಮ್ಮ ದೂರನ್ನು ನಿಮ್ಮ ಒಕ್ಕೂಟಕ್ಕೆ ಸಲ್ಲಿಸುವ, ಪ್ರಾದೇಶಿಕ ಅಥವಾ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಸಲ್ಲಿಸುವ, ನ್ಯಾಯ ಮಂಡಲಗಳಿಗೆ ಸಲ್ಲಿಸುವ ಅಥವಾ ಇನ್ನಾವುದೇ ಕಾನೂನಿನ ನೆರವನ್ನು ಪಡೆಯುವ ಅವಕಾಶಗಳಿವೆ.

# 'ಭಯೋತ್ಪಾದಕ' ಎಂದು ಕರೆದರೆ ಏನು ಮಾಡಬೇಕು?

ನಿಮ್ಮನ್ನು ಅಪಮಾನಿಸಿದರೆ ಬೇಸರವಾಗುವುದು ಮತ್ತು ಕೋಪಗೊಳ್ಳುವುದು ಸಹಜ. ಆದರೆ ಎಲ್ಲ ಸಂದರ್ಭಗಳಲ್ಲೂ ಶಾಂತರಾಗಿರುವುದು ತುಂಬಾ ಅಗತ್ಯವಾಗಿದೆ. ಪರಿಸ್ಥಿತಿಯ ಮೇಲೆ ಅವಲಂಬಿಸಿ ಪ್ರತಿಕ್ರಿಯಿಸ ಬೇಕಾದ ಹಲವು ವಿಧಾನಗಳಿವೆ.

1) ನಿಮ್ಮ ಕೆಲಸದ ಸ್ಥಳದಲ್ಲಿ ಇಂತಹ ಕಾಮೆಂಟ್ (ನಿಮ್ಮ ಗ್ರಾಹಕ ಅಥವಾ ಸಹೋದ್ಯೋಗಿಗಳಿಂದ) ಬಂದರೆ, ಇದನ್ನು ನಿಮ್ಮ ಕೆಲಸದ ಸ್ಥಳದಲ್ಲಿರುವ ಹೊಣೆಗಾರ ವ್ಯಕ್ತಿಗಳ (ಮೇಲ್ವಿಚಾರಕ, ವ್ಯವಸ್ಥಾಪಕ ಅಥವಾ ಮಾನಹಕ್ಕುಗಳ ಪ್ರತಿನಿಧಿಗೆ) ಗಮನಕ್ಕೆ ತನ್ನಿ. ಏನು ನಡೆಯಿತು ಮತ್ತು ಅದರಿಂದ ನಿಮ್ಮ ಮೇಲಾದ ಪರಿಣಾಮ ಏನು ಎಂಬುದನ್ನು ತಿಳಿಸಿ. ಈ ಪರಿಸ್ಥಿತಿಯನ್ನು ನಿರ್ವಹಿಸಲು ಅವರು ತೆಗೆದುಕೊಂಡ ಕ್ರಮದ ಬಗ್ಗೆ ನಿಮಗೆ ತಿಳಿಸಲು ಹೇಳಿ. ಕಿರುಕುಳದಿಂದ ಮುಕ್ತವಾದ ಕೆಲಸದ ವಾತಾವರಣವನ್ನು ದೊರಕಿಸಿ ಕೊಡಬೇಕಾದುದು ಅವರ ಕರ್ತವ್ಯವಾಗಿದೆ.

2) ನೀವು ವಿದ್ಯಾರ್ಥಿಯಾಗಿದ್ದರೆ ಮತ್ತು ಇಂತಹ ಕಾಮೆಂಟ್‌ಗಳು ಇತರ ವಿದ್ಯಾರ್ಥಿಗಳಿಂದ ಬಂದಿದ್ದರೆ ಇದನ್ನು ಶಿಕ್ಷಕರು, ಪ್ರಾಂಶುಪಾಲರು ಅಥವಾ ಮಾರ್ಗದರ್ಶನ ನೀಡುವ ಸಲಹೆಗಾರರಿಗೆ ತಿಳಿಸಿ.

3) ಇಂತಹ ಕಾಮೆಂಟ್ ಒಬ್ಬ ಸಾಮಾನ್ಯ ನಾಗರಿಕನಿಂದ ಬಂದಿದ್ದರೆ ಅದನ್ನು ಬಗೆಹರಿಸಲು ಹಲವು ಮಾರ್ಗಗಳಿವೆ.

ಎ) ಅಂತಹ ಕಾಮೆಂಟ್‌ಗೆ ಪ್ರತ್ಯುತ್ತರ ನೀಡಬೇಕಾದ ಅಗತ್ಯವಿಲ್ಲದಿರುವುದರಿಂದ ಆ ಸ್ಥಳದಿಂದ ನೀವು ನಿರ್ಗಮಿಸಿ

ಬಿ) ಇದರಿಂದ ನಿಮಗೆ ಗಾಬರಿ ಅಥವಾ ಭಯವುಂಟಾಗಿದ್ದರೆ ಪೊಲೀಸರಿಗೆ ಈ ಬಗ್ಗೆ ದೂರು ನೀಡಬೇಕು.

ಸಿ) ನಿಮಗೆ ಈ ಬಗ್ಗೆ ಚರ್ಚಿಸುವ ಅಥವಾ ಅವರೊಂದಿಗೆ ಮಾತುಕತೆ ನಡೆಸುವ ಸೂಕ್ತ ವಾತಾವರಣ ಮತ್ತು ಅವಕಾಶವಿದ್ದರೆ ಅದಕ್ಕೆ ಪ್ರಯತ್ನಿಸಿ. ಅವರೊಡನೆ ನೀವು ಹಾಗೆ ಭಾವಿಸಲು ಕಾರಣವೇನು ಎಂದು ಕೇಳಿ ಅದಕ್ಕೆ ಶಾಂತರಾಗಿ ಉತ್ತರಿಸಲು ಪ್ರಯತ್ನಿಸಿ.

## ಸಮಸ್ಯೆಯನ್ನು ಬಗೆಹರಿಸಲು ನಾವು ಕೈಗೊಳ್ಳಬೇಕಾದ ಉಪಕ್ರಮಗಳೇನು?

ಭಯೋತ್ಪಾದಕರ ಹಿಂಸಾಕೃತ್ಯವನ್ನು ಇಸ್ಲಾಮ್‌ನ ತಲೆಗೆ ಕಟ್ಟಲು ಆರಂಭಿಸಿದ ನಂತರ ಭಾರತದಲ್ಲಿ ಮುಸ್ಲಿಮ್ ಸಮುದಾಯವು ಹಲವು ಕ್ಲಿಷ್ಟ ಸವಾಲುಗಳನ್ನು ಎದುರಿಸಿದೆ. ಭವಿಷ್ಯದಲ್ಲಿ ಬಿಕ್ಕಟ್ಟುಗಳನ್ನು ಬಗೆಹರಿಸಲು ಭಾರತದ ಮುಸ್ಲಿಮರು ಹಲವು ಕ್ರಮಗಳನ್ನು ಅನುಸರಿಸಬಹುದು.

1. ಅಪರಾಧಿ ಚಟುವಟಿಕೆಗಳ ಬಗ್ಗೆ ಕೂಡಲೇ ಕಾನೂನು ಪಾಲಕರಿಗೆ ತಿಳಿಸಬೇಕು.

2. ನಿಜವಾದ ಮುಸ್ಲಿಮರು ಯಾರು ಎಂಬುದನ್ನು ಅವರ ಸಮುದಾಯಾದ ಚಟುವಟಿಕೆಗಳಲ್ಲಿ ಭಾಗಿಯಾಗುವುದರ ಮೂಲಕ, ನೆರೆಯವರೊಂದಿಗೆ ಉತ್ತಮ ಸಂಬಂಧವನ್ನು ಹೊಂದುವ ಮೂಲಕ, ನೆರೆಯ ಮತ್ತು ಸಮುದಾಯದ ಸಂಘಟನೆಗಳ ಚಟುವಟಿಕೆಗಳಲ್ಲಿ ಭಾಗಿಯಾಗುವ ಮೂಲಕ ಹಾಗೂ ಶಾಲೆಯ ರಕ್ಷಕ ಸಂಘಸಂಸ್ಥೆಗಳಲ್ಲಿ ಭಾಗವಹಿಸುವುದರಿಂದ ಮತ್ತು ಸ್ವಯಂ ಸೇವೆಯ ರೂಪದಲ್ಲಿ ತೋರಿಸಿಕೊಡಬೇಕಾಗಿದೆ.

3. ಮಾಧ್ಯಮ ಮತ್ತು ರಾಜಕೀಯ ಕ್ಷೇತ್ರದಲ್ಲಿ ಮುಸ್ಲಿಮರ ಮತ್ತು ಇಸ್ಲಾಮಿನ ಬಗ್ಗೆ ಇರುವ ತಪ್ಪು ಚಿತ್ರಣಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕು.

4. ಭಾರತೀಯ ಮುಸ್ಲಿಮರ ಸಾಂವಿಧಾನಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಮತ್ತು ಅದಕ್ಕೆ ಧ್ವನಿಯಾಗುವ ಸಂಘಟನೆಗಳಿಗೆ ಸಹಕಾರ ಒದಗಿಸಬೇಕು.

5. ಒಟ್ಟು ಸಮಾಜಕ್ಕೆ ಪ್ರಯೋಜನಕಾರಿಯಾದ ಚಟುವಟಿಕೆಗಳಲ್ಲಿ ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರೊಂದಿಗೆ ಒಟ್ಟಾಗಿ ಭಾಗಿಯಾಗುವುದು.

6. ಕುಟುಂಬ ಸದಸ್ಯರೆಂಬಂತೆ ಸಹಾಯಕ್ಕೆ ಮುಂದಾಗುವುದು. .

7. ಸಾರ್ವಜನಿಕ ಸಂವಾದ ಮತ್ತು ಪ್ರವಚನಗಳಲ್ಲಿ ಭಾಗಿಯಾಗುವುದು.

8. ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದು.

9. ಇಸ್ಲಾಮ್‌ನ ಬಗ್ಗೆ ಸರಿಯಾದ ಜ್ಞಾನ ಸಂಪಾದಿಸುವುದು. ಇದರಿಂದ ಉಗ್ರವಾದಿ ಸಂದೇಶಗಳನ್ನು ಗುರುತಿಸಲು ಮತ್ತು ಸೋಲಿಸಲು ಸಾಧ್ಯವಾಗುತ್ತದೆ.

## ಜಗತ್ತಿನಾದ್ಯಂತ ಮುಸ್ಲಿಮರ ವಿರುದ್ಧ ನಡೆಯುತ್ತಿರುವ ಆಕ್ರಮಣಗಳಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕು?

ಎಲ್ಲ ಪರಿಸ್ಥಿತಿಗಳನ್ನು ಸಂದರ್ಭ ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ ಗ್ರಹಿಸುವ ಮೂಲಕ ಒಂದು ಸಂತುಲಿತ ನಿಲುವನ್ನು ತೆಗೆದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ದಬ್ಬಾಳಿಕೆ, ಆಕ್ರಮಣ ಮತ್ತು ಅತಿಕ್ರಮಣ ಎಲ್ಲೇ ನಡೆದರೂ ಯಾವುದೇ ಜನರ ಮೇಲೆ ನಡೆದರೂ ಅದನ್ನು ಸಮರ್ಥಿಸಲಾಗದು. ವ್ಯಕ್ತಿ, ಸಮೂಹ ಮತ್ತು ರಾಷ್ಟ್ರಗಳು ನಡೆಸುವ ಕಾನೂನುಬಾಹಿರ ಕೃತ್ಯಗಳಿಂದ ರಕ್ಷಣೆ ಪಡೆಯಲು ಕಾನೂನು ಮತ್ತು ಕರಾರುಗಳಿವೆ.

> "ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನೂ ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ಕಾಣುವಿರಿ. ಈ ಗುಣ ವಿಶೇಷವು ಸಹನಶೀಲರಿಗಲ್ಲದೇ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ." (ಕುರ್‌ಆನ್ 41:34–35)

ಲೋಕದಾದ್ಯಂತ ಮುಸ್ಲಿಮರನ್ನು ಅಪರಾಧಿಗಳಂತೆ ಕಾಣುವ ಮತ್ತು ಎಲ್ಲ ಮುಸ್ಲಿಮರಿಗೂ ಇದನ್ನು ಅನ್ವಯಿಸುವ ಪಾಶ್ಚಾತ್ಯ ನಿಲುವನ್ನು ಖಂಡಿಸಬೇಕು. ಸಂಘರ್ಷದಲ್ಲಿರುವ ಪ್ರತಿಯೊಂದು ಮುಸ್ಲಿಮ್ ರಾಷ್ಟ್ರಗಳು ಒಂದೋ ಹೊರ ರಾಷ್ಟ್ರಗಳ ಹೇರಿಕೆಯಿಂದ ಅಥವಾ ಸ್ವಯಂ ಉಂಟಾದ ರಾಷ್ಟ್ರದೊಳಗಿನ ಭಿನ್ನ ಕಾರಣಗಳಿಂದ ಈ ರೀತಿಯ ಸಂದಿಗ್ಧತೆಯನ್ನೆದುರಿಸುತ್ತವೆ. ಮುಸ್ಲಿಮ್ ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಭಯೋತ್ಪಾದಕ ಸಂಘಟನೆಗಳಾದ ಅಲ್ ಕಾಯಿದಾ ಮತ್ತು ಐಸಿಸ್‌ಗಳ ಚಟುವಟಿಕೆಗಳೇ ಕುಮ್ಮಕ್ಕು ನೀಡುತ್ತಿವೆ. ಮುಸ್ಲಿಮರ ಮೇಲೆ ಜಗತ್ತಿನ ನಾನಾ ಕಡೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ನಮ್ಮಲ್ಲಿರುವ ಆಕ್ರೋಶವನ್ನು ದುರ್ಬಳಕೆ ಮಾಡಿ ಈ ಸಂಘಟನೆಗಳು ಸರಿ–ತಪ್ಪುಗಳ ಸರಳ ವ್ಯಾಖ್ಯೆಯನ್ನು ನಮ್ಮ ಮುಂದಿಡುತ್ತವೆ. ಈ ಪರಿಸ್ಥಿತಿ ಉದ್ಭವವಾಗಿದ್ದು ಹೇಗೆ? ಇದು ನಾವು ಕೇಳಬೇಕಾದ ಮಹತ್ವದ ಪ್ರಶ್ನೆ. ಇದರಿಂದ ನಾವು ಕಲಿಯಬೇಕಾದ ಪಾಠವೇನು? ಅನ್ಯಾಯವನ್ನು ಶಾಂತಿಯುತವಾಗಿ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ಬಗೆ ಹರಿಸುವುದು ಹೇಗೆ?

ನಮ್ಮ ಮೇಲಾಗುತ್ತಿರುವ ಅಥವಾ ಆಗುತ್ತಿದೆ ಎಂದು ನಾವು ಭಾವಿಸಿಕೊಂಡಿರುವ ಅನ್ಯಾಯವನ್ನು ತೊಡೆದು ಹಾಕಲು ಭಯೋತ್ಪಾದನೆ ಮತ್ತು ಹಿಂಸೆಯ ದಾರಿಗಿಳಿಯುವವರು ಅದರಿಂದ ತಾವು ಸಾಧಿಸುತ್ತಿರುವುದಾದರೂ ಏನು ಎಂಬುದನ್ನು ಮೊದಲು ಯೋಚಿಸಬೇಕು.

ಪ್ರವಾದಿ ಮುಹಮ್ಮದ್‌ರು ನಮ್ಮನ್ನು ಈ ರೀತಿ ಎಚ್ಚರಿಸಿರುವರು, "ನೀವು ಸ್ವಂತ ನಿಲುವುಗಳನ್ನು ಹೊಂದದ ವ್ಯಕ್ತಿಗಳಂತಾಗಬೇಡಿ. ಇತರರು ನಮಗೆ ಒಳಿತನ್ನು ಮಾಡಿದರೆ ನಾವೂ ಒಳಿತನ್ನು ಮಾಡುವೆವು, ಇತರರು ಕೆಡುಕನ್ನು ಮಾಡಿದರೆ ನಾವೂ ಕೆಡುಕನ್ನು ಮಾಡುವೆವು ಎನ್ನಬೇಡಿರಿ. ಬದಲಾಗಿ ಎಲ್ಲ ಸಂದರ್ಭಗಳಲ್ಲೂ ನೀವು ಒಳಿತನ್ನೇ ಮಾಡಿರಿ, ಜನರು ನಿಮಗೆ ಒಳಿತು ಮಾಡಲಿ ಅಥವಾ ಕೆಡುಕನ್ನು ಬಗೆಯಲಿ." (ಅಲ್-ತಿರ್ಮಿದಿ)

## ಇಸ್ಲಾಮ್ ಪೌರತ್ವದ ಬಗ್ಗೆ, ಮುಸ್ಲಿಮೇತರರು ಹೆಚ್ಚಿನ ಸಂಖ್ಯೆಯಲ್ಲಿರುವ ರಾಷ್ಟ್ರಗಳಲ್ಲಿ ಮುಸ್ಲಿಮರ ಪೌರತ್ವದ ಬಗ್ಗೆ, ಏನು ಹೇಳುತ್ತದೆ?

ಇಸ್ಲಾಮಿ ಕಾನೂನಿನ ಮೂಲ ಮತ್ತು ಎಂದೆಂದಿಗೂ ಅನ್ವಯಿಸುವಂತಹ ತತ್ವವೇನೆಂದರೆ, ಮುಸ್ಲಿಮರು ತಾವು ವಾಸಿಸುತ್ತಿರುವಂತಹ ದೇಶದ ಕಾನೂನನ್ನು ಪಾಲಿಸಬೇಕು. ಅದು ಮುಸ್ಲಿಮ್ ಬಹುಸಂಖ್ಯಾತ ರಾಷ್ಟ್ರವಾಗಿರಲಿ ಅಥವಾ ಮುಸ್ಲಿಮೇತರರು ಬಹುಸಂಖ್ಯಾತರಾಗಿರುವ ರಾಷ್ಟ್ರವಾಗಿರಲಿ. ಈ ತತ್ವವು ಹಲವು ವರ್ಷಗಳಿಂದ ಧಾರ್ಮಿಕ ಅಲ್ಪಸಂಖ್ಯಾತರಾಗಿದ್ದುಕೊಂಡು ಯಾವ ರೀತಿ ಶಾಂತಿ ಮತ್ತು ಸಾಮರಸ್ಯದಿಂದ ಜೀವಿಸಬೇಕೆಂದು ಮುಸ್ಲಿಮರಿಗೆ ಕಲಿಸಿಕೊಟ್ಟಿದೆ. ಆದರೆ ಮುಸ್ಲಿಮರ ವಿಶ್ವಾಸದ ಮೂಲಭೂತ ಆಚರಣೆಗಳಿಗೆ ಅವರು ವಾಸಿಸುತ್ತಿರುವ ದೇಶದ ಕಾನೂನಿನಲ್ಲಿ ನಿರ್ಬಂಧಗಳಿದ್ದರೆ ಅದನ್ನು ತಡೆಯುವ ಮತ್ತು ಪ್ರತಿರೋಧಿಸುವ ಅವಕಾಶವಿದೆ. ಅಂತಹ ಯಾವುದೇ ನಿರ್ಬಂಧಗಳಿದ್ದರೆ ಅದನ್ನು ಪೌರರಿಗಿರುವ ಕಾನೂನುಬದ್ಧವಾದ ವಿಧಾನದಿಂದ ನಿವಾರಿಸಲು ಶ್ರಮಿಸಬೇಕಾಗಿದೆ. ನ್ಯಾಯ, ಶಾಂತಿ, ಸಮಾನತೆ, ಮಾನವೀಯ ಸೇವೆ ಮುಂತಾದ ಮಹೋನ್ನತ ಮೌಲ್ಯಗಳಿಗೆ ನಾವು ನಿಷ್ಠಾವಂತರಾಗಿರಬೇಕು. ನ್ಯಾಯವೇ ನಮ್ಮ ಪರಮ ಮಾರ್ಗನಿರ್ದೇಶಕ ತತ್ವವಾಗಿರುವುದರಿಂದ ಯಾವುದೇ ರೀತಿಯ ನೈತಿಕ ತಾಕಲಾಟಕ್ಕೆ ಇಲ್ಲಿ ಅವಕಾಶವಿಲ್ಲ.

> ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ ನ್ಯಾಯದ ಸಾಕ್ಷ್ಯ ವಹಿಸುವವರೂ ಆಗಿರಿ. ಒಂದು ವಿಭಾಗದ ಮೇಲಿನ ದ್ವೇಷವು ನಿಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ರೇಗಿಸದಿರಲಿ. ನ್ಯಾಯ ಪಾಲಿಸಿರಿ. ಇದು ದೇವ ಭಯಕ್ಕೆ ಹೆಚ್ಚು ನಿಕಟವಾಗಿರುವುದು. (ಕುರ್‌ಆನ್ 5:8)

# ಭಾರತೀಯ ಸಂವಿಧಾನ ಮತ್ತು ಸಂಸ್ಕೃತಿಯ ಗರಿಮೆ

ನಮ್ಮ ಸಂವಿಧಾನದ ರಚನೆಯ ಹಿಂದೆ ಉದಾರವಾದಿ ಮಾನವೀಯ ಮೌಲ್ಯಗಳಿಗೆ ನಿಷ್ಠರಾಗಿರುವ ಶ್ರೇಷ್ಠ ಮನಸ್ಸುಗಳು ಕೆಲಸ ಮಾಡಿವೆ. 5,000 ವರ್ಷಗಳ ವಿಸ್ತೃತವಾದ ಮತ್ತು ವೈಭವೋಪೇತವಾದ ಭಾರತೀಯ ನಾಗರಿಕತೆಯು ಧಾರ್ಮಿಕ, ಭಾಷೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ನಮಗೆ ಬಳುವಳಿಯಾಗಿ ನೀಡಿದೆ. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾನ ನ್ಯಾಯ ಮತ್ತು ಎಲ್ಲರಿಗೂ ಸಮಾನ ಅವಕಾಶಎಂಬ ಸರ್ವಸಮ್ಮತ ಸಾಮಾನ್ಯ ತತ್ವಗಳ ಆಧಾರದಲ್ಲಿಸಮಾಜದ ವಿವಿಧ ವರ್ಗಗಳ ಮಧ್ಯೆಏಕತೆಯನ್ನು ಸಾಧಿಸಲು ನಮ್ಮ ಸಂವಿಧಾನಕರ್ತರು ಪ್ರಯತ್ನಿಸಿದ್ದಾರೆ. ಉಪಖಂಡವು ಧರ್ಮದ ಆಧಾರದಲ್ಲಿ ಇಬ್ಭಾಗವಾದ ನಂತರ ಇದು ನಿಜವಾಗಿಯೂ ಅವರ ಮಟ್ಟಿಗೆ ಅತ್ಯಂತ ಕ್ಲಿಷ್ಟಕರವಾದ ಸವಾಲಾಗಿತ್ತು. ಆದರೂ ಎಲ್ಲ ಧರ್ಮಗಳನ್ನು ಗೌರವಿಸುವ ಮತ್ತು ಯಾವುದೇ ನಿರ್ದಿಷ್ಟ ಧರ್ಮ, ಜಾತಿ, ಭಾಷೆ ಅಥವಾ ಸಂಸ್ಕೃತಿಯನ್ನು ಆಚರಿಸುವ ಜನರ ವಿರುದ್ಧ ಪಕ್ಷಪಾತ ತೋರದ ಒಂದು ರಾಷ್ಟ್ರವನ್ನು ಅವರು ನಮಗೆ ಒದಗಿಸಿಕೊಟ್ಟಿದ್ದಾರೆ.

ಭಾರತದ ವೈವಿಧ್ಯತೆಯನ್ನು ರಕ್ಷಿಸುತ್ತಲೇ ಎಲ್ಲ ಧರ್ಮಗಳ ಮತ್ತು ಸಂಸ್ಕೃತಿಯ ಅಭ್ಯುದಯಕ್ಕೆ ಈ ಸಂವಿಧಾನವು ಬಹಳಷ್ಟು ಅವಕಾಶವನ್ನು ನೀಡಿದೆ. ಆಧುನೀಕರಣ, ಕೈಗಾರಿಕೀಕರಣ ಮತ್ತು ನಗರೀಕರಣದಿಂದ ವಿವಿಧ ನಂಬಿಕೆ ಮತ್ತು ಆಚರಣೆಗಳ ಜನರು ಒಂದಾಗಿ ಸಂಪನ್ಮೂಲಗಳನ್ನು ಹಂಚಿಕೊಂಡು ಸೌಹಾರ್ದದಿಂದ ಬಾಳ್ವೆ ನಡೆಸಲು ಸಾಧ್ಯ ಎಂಬುದನ್ನು ನಮ್ಮ ಸಂವಿಧಾನದ ನಿರ್ಮಾತೃಗಳು ಮೊದಲೇ ಅಂದಾಜಿಸಿದ್ದರು. ಸಂವಿಧಾನದ ಈ ಆಶಯಗಳು ಇಂದು ಕಾರ್ಯರೂಪಕ್ಕೆ ಬಂದಿರುವುದನ್ನು ನಾವು ನಮ್ಮ ಕಣ್ಣೆದುರೇ ನೋಡುತ್ತಿದ್ದೇವೆ.

## ಕೆಲವೊಮ್ಮೆ ತೀವ್ರಗಾಮಿಗಳು ತಮ್ಮ ಸಿದ್ಧಾಂತಕ್ಕೆ ಜನರನ್ನು ಆಕರ್ಷಿಸಲು ಹಿತಮಿತವಾದ ಭಾಷೆ ಬಳಸುತ್ತಾರೆ. ಹಾಗಿರುವಾಗ ಅವರನ್ನು ಆರಂಭದಲ್ಲೇ ತೀವ್ರಗಾಮಿಗಳು ಎಂದು ಗುರುತಿಸುವುದು ಹೇಗೆ?

ಹಿಂಸಾತ್ಮಕ ಉದ್ದೇಶವನ್ನು ಹೊಂದಿರುವ ತೀವ್ರವಾದಿಗಳು ಯುವ ಜನರನ್ನು ತಮ್ಮ ತೆಕ್ಕೆಗೆ ಸೆಳೆದುಕೊಳ್ಳಲು ಕ್ರಿಮಿನಲ್ ಗ್ಯಾಂಗ್‌ಗಳು ಮಾಡುವಂತೆ ಬ್ರೈನ್‌ವಾಷಿಂಗ್ ಮತ್ತು ಮ್ಯಾನಿಪ್ಯುಲೇಶನ್‌ಗೆ ಇಳಿಯುತ್ತಾರೆ.

- ನಿಮ್ಮ ಸಾಮರ್ಥ್ಯಗಳ ಬಗ್ಗೆ ನಿಮಗೆ ನಂಬಿಕೆಯಿರಲಿ.
- ನೀವು ಅವರೊಂದಿಗೆ ಇರುವಾಗ ಮತ್ತು ಅವರ ಮಾತುಗಳನ್ನು

ಕೇಳುವಾಗ ನಿಮ್ಮ ಮನದಲ್ಲಿ ಕಸಿವಿಸಿ ಅಥವಾ ಆತಂಕ ಮೂಡಿದರೆ ಅವರೊಂದಿಗೆ ಸಂಬಂಧವನ್ನು ಕಡಿದುಕೊಳ್ಳಿ.

- ಸಮುದಾಯದ ಹಿರಿಯರಿಗೆ ಆ ಬಗ್ಗೆ ತಿಳಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಿ.
- ಇಸ್ಲಾಮಿನ ನೈಜ ಮೌಲ್ಯಗಳು ನಿಮ್ಮ ಅತ್ಯುತ್ತಮ ರಕ್ಷಕ ಎಂಬುದು ನೆನಪಿರಲಿ. ನಿಮ್ಮ ನಂಬಿಕೆಗಳ ಬಗ್ಗೆ ನಿಮಗೆ ಸರಿಯಾದ ತಿಳುವಳಿಕೆಯಿರಲಿ. ಇದರಿಂದ ನಿಮಗೆ ನಿಮ್ಮನ್ನೇ ಸುಧಾರಿಸಲು ಮತ್ತು ಉತ್ತಮ ಜೊತೆಗಾರರನ್ನು ಪಡೆಯಲು ಸಾಧ್ಯವಾಗುತ್ತದೆ. ಮಾತ್ರವಲ್ಲ, ದ್ವೇಷಭರಿತ ವಾದಗಳ ಸುಳಿಗೆ ಬೀಳದಂತೆ ನಿಮ್ಮನ್ನು ರಕ್ಷಿಸಬಹುದು.
- ನಿಮ್ಮ ಮನೆಯ ಅಥವಾ ಹೊರಗಿನ ಯಾವುದೇ ಸನ್ನಿವೇಶವು ನಿಮ್ಮಲ್ಲಿ ಆತಂಕವನ್ನುಂಟು ಮಾಡುತ್ತಿದ್ದರೆ ಉತ್ತಮ ಸಲಹೆಗಾರರ ಅಥವಾ ಇಸ್ಲಾಮಿ ವಿದ್ವಾಂಸರ ಅಥವಾ ಹಿರಿಯರ ಸಹಾಯವನ್ನು ಪಡೆದು ನಿಮ್ಮ ಉದ್ವೇಗಕ್ಕೆ ಸಮಾಧಾನವನ್ನು ಕಂಡು ಹಿಡಿಯಲು ಪ್ರಯತ್ನಿಸಿ. ಇದರಿಂದ ರಚನಾತ್ಮಕವಾಗಿ ನಿಮ್ಮ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ.

## ಈಗಾಗಲೇ ಪ್ರಚಾರದಲ್ಲಿರುವ ತೀವ್ರಗಾಮಿ ವಿಚಾರಗಳನ್ನು ಹೇಗೆ ತಡೆಯಬಹುದು?

ಯಾರು ಆ ರೀತಿ ಮಾಡುತ್ತಿದ್ದಾರೆ ಎಂಬುದನ್ನು ಕಂಡುಹಿಡಿಯಿರಿ. ಪ್ರಸಾರಗೊಳ್ಳುತ್ತಿರುವ ಸಂದೇಶ ಏನು ಎಂಬುದನ್ನೂ ಅರಿಯಿರಿ ಮತ್ತು ನಿಮ್ಮ ಹಿರಿಯರಿಗೆ ಈ ಬಗ್ಗೆ ತಿಳಿಸಿರಿ. ನಿಮ್ಮ ಸಮುದಾಯದಲ್ಲಿ ಈ ವಿಚಾರದಲ್ಲಿ ಸಾಮರ್ಥ್ಯವನ್ನು ಹೊಂದಿದ ವ್ಯಕ್ತಿಗಳ ಗಮನ ಸೆಳೆದು ಅದಕ್ಕೆ ಸೂಕ್ತ ಉತ್ತರವನ್ನು ನೀಡಲು ತಿಳಿಸಿ.

## ನಮ್ಮ ಸಮುದಾಯದ ನೇತಾರರು ಈ ಸಂದೇಶಗಳ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತಿದ್ದಾರೆ.

ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ 11/9ರ ಆಕ್ರಮಣದ ಬಳಿಕ ಮತ್ತು ಅದಕ್ಕಿಂತ ಮುಂಚೆಯೂ ಮುಸ್ಲಿಮ್ ಸಂಘಟನೆಗಳು ಭಾರತದಲ್ಲಿ ಮುಸಲ್ಮಾನರು, ಇತರ ವರ್ಗಗಳು, ಮೀಡಿಯಾ, ರಾಜಕಾರಣಿಗಳು ಮತ್ತು ಸಮಾಜದ ಇತರ ವಲಯಗಳಿಗೆ ತಮ್ಮ ನಿಲುವನ್ನು ಹೇಳುತ್ತಾ ಬಂದಿವೆ. ಮಸೀದಿಗಳು, ಇಸ್ಲಾಮೀ ಕೇಂದ್ರಗಳು

ಇತ್ಯಾದಿಗಳಲ್ಲಿ ಸಭೆಗಳನ್ನು, ಮುಕ್ತಚರ್ಚೆ ಮತ್ತು ವಿವಿಧ ಧರ್ಮಗಳ ನಡುವೆ ಸಮ್ಮೇಳನಗಳ ಮೂಲಕ ಇಸ್ಲಾಮಿನ ಮೂಲ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸಲಾಗಿದೆ. ಈ ಕ್ರಮಗಳಿಂದ ವಿವಿಧ ವರ್ಗಗಳ ನಡುವೆ ಪರಸ್ಪರ ಸಂಬಂಧ ಕ್ರಮೇಣ ಹೆಚ್ಚುತ್ತಿರುವುದು ಕಂಡುಬಂದಿದೆ. ಅನೇಕ ದಾರ್ಶನಿಕರು, ಅಧಿಕೃತ ಇಸ್ಲಾಮೀ ಸಂಘಟನೆಗಳು ತೀವ್ರವಾದದ ವಿರುದ್ಧ ಫತ್ವಾಗಳನ್ನು ಜಾರಿಗೂಳಿಸಿವೆ. ಅವುಗಳ ಈ ಕೆಳಗಿನ ವೆಬ್‌ಸೈಟ್‌ನಲ್ಲಿ ನೋಡಬಹುದು.

**http://www.cbc.ca/news/world/islamic-schikar-issues-fatwa-against-terrorism-1.866830**

ಅದೇ ರೀತಿ ದಾಯಿಶ್(ISIS)ನ ವಿರುದ್ಧ ಉಲೆಮಾಗಳು ಮತ್ತು ದಾರ್ಶನಿಕರೂ ಫತ್ವಾಗಳನ್ನು ಜಾರಿಗೊಳಿಸಿದ್ದಾರೆ. ಅವುಗಳನ್ನು ಈ ಕೆಳಗಿನ ವೆಬ್‌ಸೈಟ್‌ನಲ್ಲಿ ನೋಡಬಹುದು.

**www.lettertobaghdadi.com**

## ಯುವಕರು ಮತ್ತು ಹೆತ್ತವರು ಇಸ್ಲಾಮಿನ ಬಗ್ಗೆ ಜ್ಞಾನವನ್ನು ಪಡೆಯುವುದು ಹೇಗೆ?

ಇಸ್ಲಾಮಿನ ಅಧ್ಯಯನವನ್ನು ಶಾಸ್ತ್ರೀಯ ನೆಲೆಯಲ್ಲಿ ನಡೆಸಬೇಕಾದರೆ ಅದಕ್ಕೆ ಕುಟುಂಬದ ಸಕ್ರಿಯ ಪಾಲ್ಗೊಳ್ಳುವಿಕೆ ಬೇಕು.

ಅದು ಈ ಕೆಳಗಿನ ಅಂಶಗಳನ್ನೊಳಗೊಂಡಿದೆ:

- ನಿಮ್ಮ ಪ್ರಾರ್ಥನೆ ಮತ್ತು ಆಟೋಟ ಚಟುವಟಿಕೆಗಳಲ್ಲಿ ನಿಮ್ಮ ಕುಟುಂಬಿಕರೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಿರಿ.
- ಅರ್ಹ, ಕಾನೂನು ಬದ್ಧ ಮತ್ತು ಮಾನ್ಯತೆ ಹೊಂದಿರುವ ವಿದ್ವಾಂಸರ ಕೃತಿಗಳನ್ನು ಓದಿರಿ ಮತ್ತು ಕುಟುಂಬಿಕರೊಂದಿಗೆ ಸೇರಿ ಅವರ ಭಾಷಣಗಳನ್ನು ಕೇಳಿ ಅದರ ಬಗ್ಗೆ ಅಧ್ಯಯನ ನಡೆಸಿ ಅದರಿಂದ ಪ್ರಯೋಜನ ಪಡೆಯಿರಿ. ಈ ವಿದ್ವಾಂಸರು ಭಾಷಣ ಮಾಡುವಂತಹ ಸಮ್ಮೇಳನಗಳಲ್ಲಿ ಭಾಗವಹಿಸಿ ಏನನ್ನು ಕೇಳಿದ್ದೀರೋ ಅದರ ಬಗ್ಗೆ ಸಂಕ್ಷಿಪ್ತವಾಗಿ ನಿಮ್ಮ ಕುಟುಂಬಿಕರೊಂದಿಗೆ ಚರ್ಚಿಸಿ.
- ಮುಸ್ಲಿಮರು ಉದಾತ್ತ ಮೌಲ್ಯಗಳಾದ ಮಾನವ ಹಕ್ಕುಗಳು, ಧಾರ್ಮಿಕ ಸ್ವಾತಂತ್ರ್ಯ, ನ್ಯಾಯ ಹಾಗೂ ಕಾನೂನು ಪಾಲನೆಯಂತಹ ಅಂಶಗಳನ್ನು ಹಂಚಿಕೊಂಡು, ನಮ್ಮ ಮಕ್ಕಳಿಗೆ ಭಾರತದ ಸಂವಿಧಾನದ ಬಗ್ಗೆ ಅದರ ದಂಡ ಸಂಹಿತೆಯ (Indian Panel Code) ಬಗ್ಗೆ ಮತ್ತು ರಾಜದ್ರೋಹದ (Sedition ) ಬಗ್ಗೆ ಸರಿಯಾದ ಜ್ಞಾನವನ್ನು ನೀಡಿರಿ.

- ಅಂತರ್ಜಾಲ ಪ್ರಜ್ಞಾವಂತಿಕೆ ಮತ್ತು ಎಚ್ಚರದೊಂದಿಗೆ ಬಳಸಿ. ನಿಮ್ಮ ಮಕ್ಕಳಿಗೂ ಅದನ್ನೇ ಕಲಿಸಿ. ನಿಮ್ಮ ಮಕ್ಕಳು ಅಂತರ್ಜಾಲವನ್ನು ಬಳಸುವಾಗ ಅವರ ಮೇಲೆ ನಿಗಾ ಇರಲಿ. ವೆಬ್ ಆಧಾರಿತ ಸೈಟ್‌ಗಳನ್ನು ಬಳಸುವಾಗ ಜಾಗರೂಕರಾಗಿರಿ. ಅವು ಇಸ್ಲಾಮಿ ಸೈಟ್‌ಗಳಂತೆ ಕಂಡರೂ ಇಸ್ಲಾಮಿನ ಬಗ್ಗೆ ಭೀತಿ ಹುಟ್ಟು ಹಾಕುವ ಅಥವಾ ತೀವ್ರಗಾಮಿ ಸೈಟ್‌ಗಳಾಗಿರುವ ಸಾಧ್ಯತೆ ಇದೆ.

- ಇಸ್ಲಾಮಿನ ಬಗ್ಗೆ ಭೀತಿ ಹುಟ್ಟಿಸುವ ವೆಬ್‌ಸೈಟ್‌ಗಳು ಕುರ್‌ಆನಿನ ಅಧ್ಯಾಯಗಳನ್ನು ಸಂದರ್ಭ ಸನ್ನಿವೇಶಗಳ ಪರಿವೆಯಿಲ್ಲದೆ ಉದ್ಧರಿಸುತ್ತವೆ ಮತ್ತು ತಮ್ಮಿಷ್ಟದಂತೆ ಕಟ್ ಎಂಡ್ ಪೇಸ್ಟ್ ಮಾಡುತ್ತವೆ. ಪ್ರವಾದಿ ಮುಹಮ್ಮದ್‌ರ ವಚನಗಳಿಗೆ ಸುಳ್ಳನ್ನು ಬೆರೆಸಿ ಅವರ ಚಾರಿತ್ರ್ಯಕ್ಕೆ ಮಸಿ ಬಳಿಯಲಾಗುತ್ತದೆ. ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಇಸ್ಲಾಮ್ ಕಾರಣ ಎಂದು ಆಪಾದಿಸಲಾಗುತ್ತದೆ. ಇದನ್ನು ಅತ್ಯಂತ ಆಕರ್ಷಣೀಯವಾಗಿ ನಿಜವೆಂಬಂತೆ ಬಿಂಬಿಸಲಾಗುತ್ತದೆ. ಆದರೆ ಅವು ತಪ್ಪು ಉಲ್ಲೇಖಗಳು ಕಪೋಲಕಲ್ಪಿತ ಮಾಹಿತಿಗಳು ಮತ್ತು ಶುದ್ಧ ಸುಳ್ಳು ವಿಚಾರಗಳಾಗಿವೆ.

- ಉಗ್ರಗಾಮಿಗಳು ಧಾರ್ಮಿಕ ಪಾರಿಭಾಷೆಯನ್ನು ತಮ್ಮ ಹಿಂಸೆ, ದ್ವೇಷಗಳನ್ನು ಸಮರ್ಥಿಸಿಕೊಳ್ಳಲು ಬಳಸುತ್ತಾರಾದರೂ ಅವರ ಕಾರ್ಯಸೂಚಿಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಿತಾಸಕ್ತಿಗಳೇ ಕಾರಣ ಎಂಬುದು ಗಮನಿಸಬೇಕಾದ ಅಂಶ.

- ಇದೇ ರೀತಿಯಲ್ಲಿ ತೀವ್ರವಾದಿ ಮುಸ್ಲಿಮ್ ವೆಬ್‌ಸೈಟ್‌ಗಳೂ ಮಾರಕವಾಗಿದ್ದು ಅವು ಇಸ್ಲಾಮಿ ಬೋಧನೆಗಳು ಮತ್ತು ಇತಿಹಾಸವನ್ನು ತಿರುಚಿ ತಮ್ಮ ರಾಜಕೀಯ, ಸೈದ್ಧಾಂತಿಕ ಕಾರ್ಯಸೂಚಿಗೆ ತಕ್ಕಂತೆ ಪರಿವರ್ತಿಸುತ್ತಾರೆ. ಇವರು ಕುರ್‌ಆನಿನ ಸೂಕ್ತಗಳನ್ನು ಅದರ ಹಿನ್ನಲೆಯಿಂದ ಹೊರ ತೆಗೆದು ತಮ್ಮ ಸ್ವಂತ ಇಚ್ಛೆಯಂತೆ ಅದಕ್ಕೆ ಬಣ್ಣ ಕೊಟ್ಟು ಒಂದು ಚಿತ್ರಣವನ್ನು ರೂಪಿಸುತ್ತಾರೆ. ಇದು ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ನೈಜ ವಿಚಾರಗಳಿಂದ ಹಾದಿ ತಪ್ಪಿಸುವಂತಹದ್ದಾಗಿದೆ. ಉಗ್ರಗಾಮಿ ವೆಬ್‌ಸೈಟ್‌ಗಳಲ್ಲಿ ತಥಾಕಥಿತ ವಿದ್ವಾಂಸರ ಹೆಸರುಗಳನ್ನು ಬಳಸಿ ತಮ್ಮ ವಾದವನ್ನು ಸಮರ್ಥಿಸಲಾಗುತ್ತದೆ. ಕೆಲವೊಮ್ಮೆ ಜನರು ಮಾನ್ಯ ಮಾಡುವ ವಿದ್ವಾಂಸರ ಹೆಸರುಗಳನ್ನು ಬಳಸಿ ತಪ್ಪು ಮಾಹಿತಿಯನ್ನು ನೀಡುತ್ತಾರೆ. ಈ ವೆಬ್‌ಸೈಟ್‌ಗಳಲ್ಲಿ ಮುಸ್ಲಿಮರ ಮೇಲೆ ನಡೆಯುವ ದೌರ್ಜನ್ಯಗಳನ್ನು ಅತಿರಂಜಿತವಾಗಿ ನಿರೂಪಿಸಲಾಗುತ್ತದೆ. ಹಾಗೆಯೇ ಮುಸ್ಲಿಮೇತರರ ವಿರುದ್ಧ ಹಾಗೂ ಪಾಶ್ಚಾತ್ಯರ ವಿರುದ್ಧ ದ್ವೇಷವನ್ನು ಪಸರಿಸಲಾಗುತ್ತದೆ. ಹಾಗೆಯೇ ಭಯೋತ್ಪಾದನೆಯ ವಿರುದ್ಧ ಮಾತೆತ್ತುವವರ, ಶಾಂತಿ ಮತ್ತು ನ್ಯಾಯವನ್ನು ಬೋಧಿಸುವವರ ವಿರುದ್ಧ ಟೀಕಾ ಪ್ರಹಾರ ನಡೆಯುತ್ತದೆ. ಹಿಂಸೆಯ ವೈಭವೀಕರಣವನ್ನು ಅಲ್ಲಿ ಕಾಣಬಹುದು.

• ಕುರ್‌ಆನನ್ನು ಅದರ ಐತಿಹಾಸಿಕ ಹಿನ್ನಲೆಯ ಆಧಾರದಲ್ಲಿ ಸಮಯ, ಸ್ಥಳ, ಸಂದರ್ಭಗಳಿಗೆ ಅನುಗುಣವಾಗಿ ಅಧ್ಯಯನ ನಡೆಸಬೇಕು. ಪ್ರವಾದಿ ಮುಹಮ್ಮದ್‌ರ ಜೀವನದ ಉದಾಹರಣೆಯನ್ನು ತೆಗೆಯುವಾಗ ಅದರ ಹಿನ್ನೆಲೆಯನ್ನು ಗಮನಿಸಬೇಕು. ಕುರ್‌ಆನ್ ಸೂಕ್ತಗಳ ಪರಿಣತ ವ್ಯಾಖ್ಯಾನಕಾರರ ಬೋಧನೆಗಳನ್ನು ಸ್ವೀಕರಿಸುವಾಗಲೂ ಈ ಅಂಶವನ್ನು ನೆನಪಿಡಬೇಕು.

• ಕುರ್‌ಆನ್ ಪ್ರತಿಪಾದಿಸುವ ಇಸ್ಲಾಮಿನ ನೈಜ ತಿರುಳಾದ ನ್ಯಾಯ, ಸಮಾನತೆ, ಮಾನವ ಹಕ್ಕುಗಳು ಮತ್ತು ಮಾನವ ಘನತೆಯಂತಹ ಅಂಶಗಳ ಮೇಲೆ ಭರವಸೆಯಿಟ್ಟು ಮಾಧ್ಯಮ ಮತ್ತು ಸೈಬರ್ ಲೋಕದಿಂದ ಹೊರಬರುವ ಅನಿಸ್ಲಾಮಿಕ ಪದ್ಧತಿಗಳಾದ ದ್ವೇಷ ಕಾರುವ ಉಗ್ರಗಾಮಿ ಸಂದೇಶಗಳನ್ನು ಬೇರ್ಪಡಿಸಿ ತೋರಿಸಬೇಕು.

• ಮಸೀದಿ, ಶಾಲೆ ಮತ್ತು ಇತರ ಕೇಂದ್ರಗಳಲ್ಲಿ ತಮ್ಮ ಮಕ್ಕಳು ಧಾರ್ಮಿಕ ಶಿಕ್ಷಣವನ್ನು ಪಡೆಯುವ ಅಥವಾ ಸಂವಾದಗಳನ್ನು ನಡೆಸುವ ಗುರುಗಳ ಬಗ್ಗೆ ಚೆನ್ನಾಗಿ ಅರಿಯಿರಿ. ನಿಮ್ಮಲ್ಲಿ ಗೊಂದಲವಿದ್ದರೆ ಆ ಬಗ್ಗೆ ಪ್ರಶ್ನೆಗಳನ್ನು ಕೇಳಿ ಮತ್ತು ಅವರ ಬೋಧನೆಗಳ ಬಗ್ಗೆ ಸವಾಲು ಹಾಕಿರಿ. ನಿಮ್ಮ ಕಳವಳದ ಬಗ್ಗೆ ಅವರಿಗೆ ತಿಳುವಳಿಕೆ ನೀಡಿ. ನಿಮ್ಮ ಮಕ್ಕಳಿಗೂ ನಿಮ್ಮ ಆತಂಕದ ಬಗ್ಗೆ ಅರಿವು ಮೂಡಿಸಿ.

• ನಿಮ್ಮ ಮಕ್ಕಳನ್ನು ವಿಮರ್ಶಾತ್ಮಕವಾಗಿ ಆಲೋಚಿಸುವಂತೆ ಪ್ರೇರೇಪಿಸಿ. ಕುರುಡು ಅನುಕರಣೆ ಮಾಡುವುದರ ಬಗ್ಗೆ ಎಚ್ಚರಿಸಿ. ಸಹಪಾಠಿಗಳ ಬೆದರಿಕೆಗಳು ನಿಮ್ಮ ಮಕ್ಕಳು ತಾವು ಕೇಳಿದ ವಿಷಯಗಳನ್ನು ಸುಲಭವಾಗಿ ನಿಮ್ಮೊಂದಿಗೆ ಹಂಚಿಕೊಳ್ಳದಂತೆ ಮಾಡಬಹುದು. ಅವರ ಆತಂಕವನ್ನು ದೂರ ಮಾಡಲು ನೀವು ಶಾಂತ ಪ್ರವೃತ್ತಿಯನ್ನು ಹೊಂದಬೇಕು ಹಾಗೂ ನಿಮ್ಮೊಂದಿಗೆ ಮಾತನಾಡುವಂತೆ ಮತ್ತು ಪ್ರಶ್ನೆಗಳನ್ನು ಕೇಳುವಂತೆ ಅವರನ್ನು ಉತ್ತೇಜಿಸಬೇಕು.

• ತಮ್ಮ ಮಕ್ಕಳ ಆನ್‌ಲೈನ್ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಲೇ ಅದರ ಬಗ್ಗೆ ನಿಗಾ ಇರಿಸಲು ಹೆತ್ತವರು ಪ್ರಯತ್ನಿಸಬೇಕು. ಉದಾಹರಣೆಗೆ ಹೆತ್ತವರು ಹೆಚ್ಚು ಹೆಚ್ಚು ತಮ್ಮನ್ನು ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸಾಫ್ಟ್‌ವೇರ್ ನಿಯಂತ್ರಣದ ವಿವಿಧ ವಿಧಾನಗಳನ್ನು ಕಂಡು ಹಿಡಿಯುವುದು, ಡೌನ್‌ಲೋಡ್‌ಗಳ ಮೇಲ್ವಿಚಾರಣೆ ನಡೆಸುವುದು, ಗಣಕ ಯಂತ್ರವನ್ನು ಆದಷ್ಟು ಎಲ್ಲರಿಗೂ ಕಾಣುವಂತಹ ಸ್ಥಳದಲ್ಲಿರಿಸುವುದು ಮತ್ತು ವೆಬ್‌ಸೈಟ್‌ನ ಪರಾಮರ್ಶೆಗಳನ್ನು ನಡೆಸುವುದು ಇತ್ಯಾದಿ.

## ಇಂಟರ್‌ನೆಟ್‌ನ ಮುಖಾಂತರ ತಮ್ಮ ಮಕ್ಕಳು ಉಗ್ರವಾದಿಗಳ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂದು ಹೆತ್ತವರಿಗೆ ಶಂಕೆಯುಂಟಾದರೆ ಏನು ಮಾಡಬೇಕು?

**ಕೆಳಗಿನ ಲಕ್ಷಣಗಳ ಬಗ್ಗೆ ಜಾಗರೂಕರಾಗಿರಿ**

- ಸಮಾಜಘಾತುಕ ವರ್ತನೆಗಳು ಒಮ್ಮಿಂದೊಮ್ಮೆಲೇ ಗೋಚರಿಸಬಹುದು.
- ರಾತ್ರಿ ಎಲ್ಲರೂ ಮಲಗಿರುವ ಸಂದರ್ಭದಲ್ಲಿ ಹೆಚ್ಚಿನ ಸಮಯವನ್ನು ಇಂಟರ್‌ನೆಟ್‌ನಲ್ಲಿ ಕಳೆಯುವುದು.
- ತಾವು ವೀಕ್ಷಿಸುತ್ತಿರುವ ಸೈಟ್‌ಗಳ ಬಗ್ಗೆ ಅತಿಯಾದ ಗೌಪ್ಯತೆ ಮತ್ತು ತಾವು ಎಲ್ಲಿಗೆ ಹೋಗುತ್ತಿದ್ದೇವೆ ಮತ್ತು ಯಾರನ್ನು ಭೇಟಿಯಾಗುತ್ತಿದ್ದೇವೆ ಎಂಬ ವಿಷಯಗಳನ್ನು ಅಡಗಿಸಿಡುವುದು.
- ಅವರ ಧಾರ್ಮಿಕ ಮತ್ತು ರಾಜಕೀಯ ಅಭಿಪ್ರಾಯಗಳ ಬಗ್ಗೆ ಮಾತೆತ್ತಿದಾಗ ಕೂಡಲೇ ರೊಚ್ಚಿಗೇಳುವುದು.
- ಸಮಾಜದ ಆಗು–ಹೋಗುಗಳ ಬಗ್ಗೆ ಅನುಮಾನ ಪಡುವುದು ಅಥವಾ ಪೂರ್ವನಿರ್ಧರಿತ ತೀರ್ಮಾನಗಳನ್ನು ಹೊಂದಿರುವುದು.
- ಹೆತ್ತವರು ಮತ್ತು ಒಡಹುಟ್ಟಿದವರೊಂದಿಗೆ ಮಾತುಕತೆಗಳನ್ನು ನಡೆಸದಿರುವುದು.
- ಅವರ ಸ್ನೇಹಿತರ ವರ್ತುಲ ಏಕಾಏಕಿ ಬದಲಾಗಬಹುದು.
- ಸಾಮಾನ್ಯವಾಗಿ ತಮ್ಮ ಕುಟುಂಬದ ಇತರ ಸದಸ್ಯರಿಗಿಲ್ಲದ ಅತಿಯಾದ ಧಾರ್ಮಿಕತೆ.
- ಜಗತ್ತಿನ ಬಗ್ಗೆ ಒಳಿತು ಕೆಡುಕುಗಳ ಆಧಾರದಲ್ಲಿ ಉಗ್ರ ನಿಲುವುಗಳನ್ನು ಪ್ರಕಟಿಸುವುದು ಮತ್ತು ಈ ವಿಷಯದಲ್ಲಿ ಎಂದೂ ರಾಜಿಯಾಗದಂತಹ ಮನಸ್ಥಿತಿಯನ್ನು ಹೊಂದಿರುವುದು.
- ಜಾಗತಿಕ ವಿದ್ಯಮಾನಗಳ ಬಗ್ಗೆ ಅತೀವ ಆಸಕ್ತಿ.
- ತಮ್ಮ ಸಾಮನ್ಯ ಗೆಳೆಯರೊಂದಿಗೆ ಆಸಕ್ತಿಯನ್ನು ಕಳೆದುಕೊಳ್ಳುವುದು.
- ಮಹಿಳೆಯರ ಬಗ್ಗೆ ಗೌರವ ಕಳೆದುಕೊಳ್ಳುವುದು ಮತ್ತು ಮಹಿಳಾ ವಿರೋಧಿ ಮಾತುಗಳನ್ನಾಡುವುದು.
- ಶಾಂತಿ, ಸೌಹಾರ್ದವನ್ನು ಬೋಧಿಸುವ ವಿದ್ವಾಂಸರ ಬಗ್ಗೆ ಅಗೌರವ ತಾಳುವುದು.
- ಸಮಾಜದಿಂದ ಪ್ರತ್ಯೇಕಗೊಳ್ಳುವ ತವಕ.

# ಎಚ್ಚರ ವಹಿಸಿರಿ

## ಇತರ ಮುಸ್ಲಿಮರೊಂದಿಗೆ ಸೇರಿ ಸರ್ವಾಧಿಕಾರಿಗಳ ವಿರುದ್ಧ ಹೋರಾಡಲು ಕಡಲಾಚೆಗೆ ಹೋಗುವ ಭಾರತೀಯ ಮುಸ್ಲಿಮ್ ಯುವಕರಿಗೇನಾಗಿದೆ?

ಜಾಗತಿಕ ಸಂಘರ್ಷಗಳು ಕೇವಲ ಸರ್ವಾಧಿಕಾರಿಗಳ ವಿರುದ್ಧ ಹೋರಾಡುವಂತಹ ಸುಲಭದ ವಿಚಾರವಲ್ಲ. ಇದು ಕ್ಲಿಷ್ಟಕರ ಪರಿಸ್ಥಿತಿಯಾಗಿದ್ದು, ಹಲವು ರಾಜಕೀಯ ಕಾರ್ಯಸೂಚಿಗಳನ್ನು ಹೊಂದಿರುತ್ತದೆ. ಸರ್ವಾಧಿಕಾರಿಗಳನ್ನು ವಿರೋಧಿಸುವ ಹಲವು ಗುಂಪುಗಳು ತಾವೇ ಭಯೋತ್ಪಾದನೆ, ನಾಗರಿಕರನ್ನು ಕೊಲ್ಲುವ ಮತ್ತು ಇತರ ಹಿಂಸಾತ್ಮಕ ಪ್ರವೃತ್ತಿಗಳಲ್ಲಿ ತೊಡಗಿಕೊಂಡಿರುತ್ತಾರೆ. ಸರ್ವಾಧಿಕಾರವನ್ನು ವಿರೋಧಿಸುವವರು ಸತಃ ಅಸಾಂವಿಧಾನಿಕ ಮಾರ್ಗವನ್ನು ತುಳಿದು ಕ್ರೌರ್ಯವನ್ನೆಸಗುವ ಅಪಾಯವಿದೆ. ಕಲಹಪೀಡಿತ ಪ್ರದೇಶದ ಹೊರಗಿರುವವರು, ಇವರಲ್ಲಿ ಭಾರತೀಯರೂ ಸೇರಿರಬಹುದು, ಒಟ್ಟಾರೆ ಸಮಸ್ಯೆಯ ಸೂಕ್ಷ್ಮಗಳನ್ನು ಅರಿಯದೆ ಹಿಂಸಾಚಾರಕ್ಕೆ ಇಳಿಯುವ ಅಪಾಯವನ್ನೂ ನಾವು ಕಡೆಗಣಿಸುವಂತಿಲ್ಲ.

## ಯುದ್ಧದಲ್ಲಿ ಹೋರಾಡಲು ಹೊರ ರಾಷ್ಟ್ರಗಳಿಗೆ ಪ್ರಯಾಣ ಬೆಳೆಸುವ ಯುವಕರು

- ತಮ್ಮ ಜೀವ, ಆರೋಗ್ಯ, ಸ್ವಾತಂತ್ರ್ಯ ಮತ್ತು ಕುಟುಂಬದ ಘನತೆಯನ್ನು ಘಾಸಿಗೊಳಿಸುತ್ತಾರೆ.
- ಅಮಾಯಕ ನಾಗರಿಕರ ಮೇಲೆ ನಡೆಯುವ ಹಿಂಸೆಗೆ ಇವರೂ ಜವಾಬ್ದಾರರಾಗುತ್ತಾರೆ ಮತ್ತು ಅಂತಹ ಕೃತ್ಯಗಳ ನೈತಿಕ ಮತ್ತು ಕಾನೂನಾತ್ಮಕ ಪರಿಣಾಮಗಳನ್ನು ಎದುರಿಸಬೇಕಾಗುತ್ತವೆ.
- ಇಂತಹ ಯುವಕರು ಭಾರತೀಯ ಕಾನೂನನ್ನು ಉಲ್ಲಂಘಿಸುವವರಾಗಿದ್ದು ದೇಶದಿಂದ ಹೊರಡುವಾಗ ಅಥವಾ ಮರಳುವಾಗ ಕಾನೂನು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ.

# ಇಸ್ಲಾಮಿನ ಬಗ್ಗೆ ಭೀತಿ ಹುಟ್ಟಿಸುವ ವೆಬ್‌ಸೈಟ್‌ಗಳು

ಇಸ್ಲಾಮ್‌ನ ವಿರುದ್ಧ ಅಪಪ್ರಚಾರದಲ್ಲಿ ತೊಡಗಿರುವ ನೂರಾರು ವೆಬ್‌ಸೈಟ್‌ಗಳು, ರೇಡಿಯೋ ಕಾರ್ಯಕ್ರಮಗಳು, ಟಿವಿ ವಾಹಿನಿಗಳು ಇಂದು ನಮಗೆ ಕಾಣಸಿಗುತ್ತವೆ. 2011 ರಿಂದಲೇ ಟ್ವಿಟರ್‌ನಲ್ಲಿ ಕಿಲ್ಲಾಲ್ ಮುಸ್ಲಿಮ್ (Twitter hash tag **#killallmuslims**) ಎಂಬ ವಿಳಾಸವಿದೆ. ಇಂತಹ ಆಕ್ಷೇಪಾರ್ಹ ಸಾಮಗ್ರಿಗಳು ಇಂದು ಇಂಟರ್‌ನೆಟ್ ಜಗತ್ತಿನಲ್ಲಿ ವಿಫಲವಾಗಿದ್ದು, ಇದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ತಥಾಕಥಿತ ಗುತ್ತೇದಾರರಿಗೆ ಸಂತೋಷವಾಗಬಹುದೇ ಹೊರತು ಮುಸ್ಲಿಮರ ಸಂಕಷ್ಟಗಳಿಗೆ ಇದು ಯಾವ ರೀತಿಯ ಪರಿಹಾರವನ್ನೂ ಒದಗಿಸುವುದಿಲ್ಲ..

ಇಸ್ಲಾಮೋಫೋಬಿಯಾ ಎಂದರೆ ಇಸ್ಲಾಮಿನ ದ್ವೇಷ ಅಥವಾ ಭಯವನ್ನು ಹುಟ್ಟು ಹಾಕುವುದು. ಇಸ್ಲಾಮೋಫೋಬಿಕ್ ಜಾಲತಾಣಗಳು ಕುರ್‌ಆನ್‌ನ ವಚನಗಳನ್ನು ಅದರ ಸಂದರ್ಭ ಸನ್ನಿವೇಶಗಳನ್ನು ಹೇಳದೆ ದುರ್ವ್ಯಾಖ್ಯಾನಿಸುವ ಕೆಲಸದಲ್ಲಿ ತಲ್ಲೀನವಾಗಿವೆ. ಪ್ರವಾದಿ ಮುಹಮ್ಮದ್‌ರ ಬಗ್ಗೆ ಸುಳ್ಳನ್ನು ಪ್ರಚಾರ ಮಾಡುವುದು, ಅವರ ಚಾರಿತ್ರ್ಯವಧೆ ನಡೆಸುವುದು ಮತ್ತು ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಇಸ್ಲಾಮನ್ನು ಹೊಣೆಯಾಗಿಸುವುದು ಇವರ ಕಾರ್ಯತಂತ್ರ. ಇವರು ಸುಳ್ಳನ್ನು ಎಷ್ಟು ಸುಂದರವಾಗಿ ಪೋಣಿಸುತ್ತಾರೆಂದರೆ ಅದು ಆಕರ್ಷಣೀಯವೂ, ನಂಬಲರ್ಹವೂ ಆಗಿ ತೋರುತ್ತದೆ. ವಾಸ್ತವದಲ್ಲಿ ಅವು ತಪ್ಪು ಉದ್ಧರಣೆ, ಕೃತಕ ಮಾಹಿತಿಗಳು ಮತ್ತು ಅಪ್ಪಟ ಸುಳ್ಳಿನ ಕಂತೆಗಳಾಗಿವೆ.

ಇದೇ ರೀತಿಯಲ್ಲಿ ತೀವ್ರವಾದಿ ಮುಸ್ಲಿಮ್ ವೆಬ್‌ಸೈಟ್‌ಗಳೂ ಅಪಾಯಕಾರಿಯಾಗಿದ್ದು ಅವು ಇಸ್ಲಾಮಿ ಬೋಧನೆಗಳು ಮತ್ತು ಇತಿಹಾಸವನ್ನು ತಿರುಚಿ ತಮ್ಮ ರಾಜಕೀಯ, ಸೈದ್ಧಾಂತಿಕ ಕಾರ್ಯಸೂಚಿಗೆ ತಕ್ಕಂತೆ ಪ್ರಸ್ತುತಪಡಿಸುತ್ತವೆ. ಇವರು ಕುರ್‌ಆನಿನ ಸೂಕ್ತಗಳನ್ನು ಅದರ ಹಿನ್ನೆಲೆ ಮತ್ತು ಅಂದಿನ ಸನ್ನಿವೇಶವನ್ನು ಮರೆಮಾಚಿ ತಮಗೆ ಮನಬಂದಂತೆ ವ್ಯಾಖ್ಯಾನಿಸುವ ಮೂಲಕ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ವಾಸ್ತವಗಳಿಗೆ ವಿರುದ್ಧವಾದ ಚಿತ್ರಣವನ್ನು ನೀಡುತ್ತಾರೆ. ತೀವ್ರವಾದಿ ವೆಬ್‌ಸೈಟ್‌ಗಳು ವಿಶ್ವಾಸಾರ್ಹತೆಯಿಲ್ಲದ ವಿದ್ವಾಂಸರ ಹೆಸರುಗಳನ್ನು ತಮ್ಮ ವಾದದ ಸಮರ್ಥನೆಗಾಗಿ ಉಲ್ಲೇಖಿಸುತ್ತಾರೆ ಅಥವಾ ಜನರ ಮಾನ್ಯತೆ ಇರುವ ವಿದ್ವಾಂಸರ ಹೆಸರುಗಳನ್ನು ಬಳಸಿ ತಪ್ಪು ಮಾಹಿತಿಗಳನ್ನು ಪ್ರಸಾರ ಮಾಡುತ್ತಾರೆ. ಈ ಸೈಟ್‌ಗಳು ತಮ್ಮ ದ್ವೇಷಪೂರಿತ ವಿಚಾರಗಳ ಸಮರ್ಥನೆಗೆ ಮುಸ್ಲಿಮರ ಮೇಲೆ ನಡೆದಿರುವ ಅನ್ಯಾಯಗಳ ಅತಿರಂಜಿತ ಚಿತ್ರಣವನ್ನು ಮುಂದಿಡುತ್ತವೆ. ಮುಸ್ಲಿಮೇತರರ ವಿರುದ್ಧ ಹಾಗೂ ಪಾಶ್ಚಾತ್ಯ ಜಗತ್ತಿನ ವಿರುದ್ಧ ದ್ವೇಷ ಕಾರುತ್ತವೆ. ಹಾಗೆಯೇ ಭಯೋತ್ಪಾದನೆಯ ವಿರುದ್ಧ ಮಾತೆತ್ತಿ, ಶಾಂತಿ ಮತ್ತು ನ್ಯಾಯವನ್ನು ಬೋಧಿಸುವವರ ವಿರುದ್ಧ ಇವರು ಹರಿಹಾಯುತ್ತಾರೆ..

## ಇಂಟರ್‌ನೆಟ್ ಬಳಕೆಯಲ್ಲಿ ಎಚ್ಚರವಿರಲಿ

ನಿಮ್ಮ ಮಕ್ಕಳು ಯಾವ ವೆಬ್‌ಸೈಟ್ ನೋಡುತ್ತಾರೆಂಬ ಮಾಹಿತಿ ನಿಮಗೆ ಅಗತ್ಯವಾಗಿ ಇರಬೇಕು. ಯಾವ ವೆಬ್‌ಸೈಟ್‌ನಲ್ಲಿ ಎಷ್ಟು ಗಹನ, ಎಷ್ಟು ವಿಶ್ವಾಸಯೋಗ್ಯ, ಎಷ್ಟು ವಿಶ್ವಾಸಾರ್ಹ ಅಥವಾ ಎಷ್ಟು ವಿಮರ್ಶಾತ್ಮಕ ಮತ್ತು ವಿಶ್ಲೇಷನಾತ್ಮಕ ಎಂಬುದನ್ನೂ ಅವರಿಗೆ ತಿಳಿಸಿರಿ. ಕೆಲವು ವೆಬ್‌ಸೈಟ್‌ಗಳು ಇಸ್ಲಾಮೀ ಆಗಿದೆಯೆಂದು ತೋರುತ್ತದೆ. ಆದರೆ ಇಸ್ಲಾಮಿನಿಂದ ಭೀತಿ ಹುಟ್ಟಿಸುವಂತಹ ಮನೋಭಾವಕ್ಕೆ (Islamophobia) ಪ್ರೋತ್ಸಾಹ ನೀಡುತ್ತದೆ.

- ಇಸ್ಲಾಮ್‌ಫೋಬಿಯಾ ವೆಬ್‌ಸೈಟ್‌ಗಳು ಸಾಮಾನ್ಯವಾಗಿ ಇಸ್ಲಾಮೀ ಶಿಕ್ಷಣಗಳನ್ನು ಅವುಗಳ ಹಿನ್ನೆಲೆಯಿಂದ ಪ್ರತ್ಯೇಕಿಸಿ ತೋರಿಸುತ್ತದೆ. ಅವು ಪ್ರವಾದಿ(ಸ) ಅವರ ಕುರಿತು ಸುಳ್ಳು ಸೃಷ್ಟಿಸುವ, ಅವರ ಚಾರಿತ್ರ್ಯಕ್ಕೆ ಮಸಿ ಬಳಿಯುವ, ಅವರ ಮಹತ್ಸಾಧನೆಗಳನ್ನು ಲೇವಡಿ ಮಾಡುವ ಹಾಗೂ ಇಡೀ ಜಗತ್ತಿನಲ್ಲಿ ನಡೆಯುತ್ತಿರುವ ಘಟನೆಗಳು ಮತ್ತು ಕ್ಷೋಭೆಗೆ ಇಸ್ಲಾಮನ್ನು ಹೊಣೆಯಾಗಿಸುವಂತಹ ಕಾರ್ಯದಲ್ಲಿ ನಿರತರಾಗಿರುವುದು ಕಂಡು ಬರುತ್ತದೆ. ಆ ವೆಬ್‌ಸೈಟ್‌ಗಳನ್ನು ಬಹಳ ಪರಿಶ್ರಮದಿಂದ ತಯಾರಿಸಲಾಗಿದೆ. ಬಾಹ್ಯವಾಗಿ ಇಸ್ಲಾಮಿನ ಏಳಿಗೆ ಮತ್ತು ಇಸ್ಲಾಮೀ ಉದ್ದೇಶವೆಂದು ಬಿಂಬಿಸುತ್ತವೆ. ಆದರೆ ಇಸ್ಲಾಮಿನ ಶಿಕ್ಷಣಗಳನ್ನು ವಿರೂಪಗೊಳಿಸುತ್ತವೆ. ಇಸ್ಲಾಮಿನ ಕುರಿತು ಸಂದೇಹಗಳನ್ನು ಸೃಷ್ಟಿಸುತ್ತವೆ. ವಂಚನೆ ಮತ್ತು ಆರೋಪಗಳನ್ನು ವಿಶ್ವಾಸಾರ್ಹಗೊಳಿಸುವ ಕೆಲಸ ಮಾಡುತ್ತಿವೆ.
- ತೀವ್ರವಾದಿಗಳೂ ಹಿಂಸೆ, ದ್ವೇಷ ಇತ್ಯಾದಿಗಳ ಪ್ರಚಾರಕ್ಕೆ ಇಸ್ಲಾಮೀ ಭಾಷೆ ಮತ್ತು ಪಾರಿಭಾಷಿಕಗಳನ್ನು ಬಳಸುತ್ತವೆ. ಅವುಗಳ ಬಳಿ ತಮ್ಮ ವಿಶಿಷ್ಟ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಜೆಂಡಾಗಳಿರುತ್ತವೆ. ಅದಕ್ಕಾಗಿ ಅವು ಎಲ್ಲ ಧರ್ಮಗಳ ಶಿಕ್ಷಣಗಳನ್ನು ವಿಕೃತಗೊಳಿಸಿ ತೋರಿಸುತ್ತದೆ.
- ತೀವ್ರವಾದಿಗಳ ವೆಬ್‌ಸೈಟ್‌ಗಳು ಕೂಡಾ ಅಷ್ಟೇ ಅಪಾಯಕಾರಿಯಾಗಿವೆ. ಅವುಗಳೂ ಕುರ್‌ಆನಿನ ಸೂಕ್ತಗಳನ್ನು ಅದರ ಹಿನ್ನೆಲೆಯಿಂದ ಕಡಿದು

ತೋರಿಸುತ್ತದೆ. ವಿಶ್ವಾಸಾರ್ಹವಲ್ಲದ ಉಲೆಮಾಗಳು ಮತ್ತು ದಾರ್ಶನಿಕರನ್ನು ಉದ್ಧರಿಸುತ್ತಾರೆ. ವಿಶ್ಲೇಷಣಾತ್ಮಕ ಪ್ರತಿಭೆಗಳಿಲ್ಲದ ಜನರು ಇದನ್ನೇ ಅಪ್ಪಟ ಇಸ್ಲಾಮ್ ಎಂದು ಭಾವಿಸುತ್ತಾರೆ.

- ಇನ್ನು ಕೆಲವು ವೆಬ್‌ಸೈಟ್‌ಗಳು ಯಹೂದಿಯರು, ಇಸ್ರೇಲ್ ಮತ್ತು ಎಲ್ಲ ಪಾಶ್ಚಿಮಾತ್ಯ ದೇಶಗಳ ಮೇಲೆ ನಿರಂತರ ದಾಳಿ ನಡೆಸುತ್ತವೆ. ಅವುಗಳ ವಿರುದ್ಧ ಪ್ರಚೋದಿಸುವ ಮತ್ತು ಕೆರಳಿಸುವ ಕೆಲಸ ಮಾಡುತ್ತವೆ. ಹೀಗೆ ಅವು ಮುಸಲ್ಮಾನರನ್ನು ಮರ್ದಿತ(victim)ರೆಂದು ಸಾಬೀತುಪಡಿಸುವ ಶ್ರಮದಲ್ಲಿ ತೊಡಗಿಕೊಂಡಿವೆ. ಈ ವೆಬ್‌ಸೈಟ್‌ಗಳು ಮುಸ್ಲಿಮ್ ವಿರೋಧಿ ಶಕ್ತಿಗಳು ಮತ್ತು ಸಂಘಟನೆಗಳ ಬೆಂಬಲದಿಂದ ಜಾರಿಗೊಂಡಿರುವ ಸಾಧ್ಯತೆಯಿದೆ. ಮುಸ್ಲಿಮ್ ಯುವಕರಿಗೆ ಮರ್ದಿತಾವಸ್ಥೆಯ ಪ್ರಜ್ಞೆ ಮೂಡಿಸಿ ಅವರನ್ನು ಹಿಂಸೆಗೆ ಪ್ರಚೋದಿಸುವುದೇ ಅವುಗಳ ಉದ್ದೇಶವಾಗಿರಬಹುದು. ಈ ಕಾರ್ಯತಂತ್ರವನ್ನು ಬೃಹತ್ ಶಕ್ತಿಗಳು, ವಿರೋಧಿ ಶಕ್ತಿಗಳನ್ನು ಅತಿಶಯೋಕ್ತ ರೀತಿಯಲ್ಲಿ ತೋರಿಸಿ ಸೆಕ್ಯೂರಿಟಿಯ ಹೆಸರಿನಲ್ಲಿ ಆದಷ್ಟು ಹೆಚ್ಚು ಬಜೆಟ್‌ಗಳಿಸಿ ಶಸ್ತ್ರಾಸ್ತ್ರಗಳನ್ನು ವಿಕ್ರಯಿಸಲಿಕ್ಕಾಗಿ ಪ್ರಯೋಗಿಸುತ್ತವೆ. ಈ ವೆಬ್‌ಸೈಟ್‌ಗಳನ್ನು ನೋಡುವಾಗ ಅವುಗಳನ್ನು ಅತ್ಯಂತ ಪರಿಣತ ತಂತ್ರಜ್ಞಾನದಿಂದ ತಯಾರಿಸಲಾಗಿದೆಯೆಂದು ಭಾಸವಾಗುತ್ತದೆ.

# ಅಂತರ್ಜಾಲ ಸುರಕ್ಷತೆ

## 1. ಸಮಸ್ಯಾತ್ಮಕ ಸಾಮಾಜಿಕ ಜಾಲತಾಣಗಳೆಂದರೇನು?

ನಿಜಾರ್ಥದಲ್ಲಿ ಸಮಸ್ಯಾತ್ಮಕ ಸಾಮಾಜಿಕ ಜಾಲತಾಣಗಳು ನಿಜವಾದ ತೊಡಕಾಗಿರದೇ ಜನರ ಸಾಮಾಜಿಕ ಜಾಲತಾಣಗಳ ಸಮಸ್ಯಾತ್ಮಕ ಬಳಕೆಯು ದೊಡ್ಡ ಗಂಡಾಂತರವನ್ನುಂಟು ಮಾಡುತ್ತಿದೆ. ಭಾರತೀಯರು ತಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲೂ ತಂತ್ರಜ್ಞಾನದ ಮೇಲೆ ಹೆಚ್ಚೆಚ್ಚು ಅವಲಂಬಿತರಾಗುತ್ತಿರುವುದರಿಂದ ದಿನೇ ದಿನೇ ಸೈಬರ್ ಅಪರಾಧಗಳ ಸಂಖ್ಯೆಯು ಹೆಚ್ಚುತ್ತಿದ್ದು ಇದರಿಂದ ಆಗುವ ಅಪಾಯದ ಪ್ರಮಾಣವೂ ವ್ಯಾಪಕವಾಗುತ್ತಿದೆ.

ಸೈಬರ್ ಅಪರಾಧಗಳ ಪ್ರಮಾಣವನ್ನು ತಡೆಯಲಿಕ್ಕಾಗಿ ಪೊಲೀಸ್ ಗುಪ್ತಚರ ವಿಭಾಗವು ಭಾರತೀಯ ಮತ್ತು ಅಂತರಾಷ್ಟ್ರೀಯ ಕಾನೂನು ನಿರ್ವಹಣಾ ಸಂಸ್ಥೆಗಳ ಸಹಯೋಗದೊಂದಿಗೆ ಹೊಸ ಹೊಸ ಪರಿಕರ ಮತ್ತು ಮಾರ್ಗಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಪೊಲೀಸ್ ಗುಪ್ತಚರ ವಿಭಾಗದ ಮೂಲ ಗುರಿಯು ಭಾರತದ ಭದ್ರತೆ ಮತ್ತು ಸುರಕ್ಷತೆಯಾಗಿದೆ. ಇದು ಭಾರತೀಯರನ್ನು ಸೈಬರ್ ಅಪರಾಧ ಮತ್ತು ಇನ್ನಿತರ ಆನ್‌ಲೈನ್ ಶೋಷಣೆಗಳಿಂದ ರಕ್ಷಿಸುವ ಕಾರ್ಯತಂತ್ರವನ್ನೊಳಗೊಂಡಿದೆ. ಸೈಬರ್ ಭದ್ರತೆಯು ಭಾರತೀಯ ಸಾರ್ವಜನಿಕ ಸುರಕ್ಷತೆಯ ನಿಯಮವಳಿಗಳ ಅಧೀನದಲ್ಲಿ ಬರುತ್ತದೆ.

## 2. ಹೆತ್ತವರ ನಿಯಂತ್ರಣ ಮತ್ತು ಮೇಲ್ವಿಚಾರಣೆ ಯಾವ ವಯಸ್ಸಿನಿಂದ ಆರಂಭವಾಗಬೇಕು?

ಮಕ್ಕಳನ್ನು ಬೆಳೆಸುವುದಕ್ಕೆ ಸಂಬಂಧಿಸಿದ ಅಗತ್ಯ ಕೌಶಲಗಳು, ಯುವ ಜನರನ್ನು ಸುರಕ್ಷಿತ ಮತ್ತು ಗೌರವಪೂರ್ಣವಾಗಿ ವ್ಯವಹರಿಸುವಂತೆ ಪ್ರೇರೇಪಿಸುವುದು ಹೇಗೆ, ಈ ಸಂಬಂಧ ಇರುವ ವಿವಿಧ ಕಾನೂನುಗಳು ಯಾವುವು ಎಂಬ ಬಗ್ಗೆ ಪೋಷಕರಿಗೆ ವಿವರ ಬೇಕಿದ್ದರೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು:

http://bc.rcmp.ca/viewpage.action?sitenodeid=87&languageid=1&contentid=21690

ಸಾಮಾಜಿಕ ಜಾಲತಾಣಗಳನ್ನು ಬಳಸುವಾಗ ಮತ್ತು ಮಾಹಿತಿಗಳನ್ನು ವೀಕ್ಷಿಸುವಾಗ ಮತ್ತು ಹಂಚುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯುವ ಜನತೆಯಲ್ಲಿ ಜಾಗೃತಿ ಮೂಡಿಸಬೇಕು. ಇದು ಅಂತರ್ಜಾಲ ಸುರಕ್ಷತೆಯ ನಿಟ್ಟಿನಲ್ಲಿ ಬಹಳ ಮಹತ್ವದ್ದಾಗಿದೆ.

# ಮಕ್ಕಳ ತರಬೇತಿ ಮತ್ತು ಸುಧಾರಣೆ

ಮಕ್ಕಳ ಸರಿಯಾದ ತರಬೇತಿ ಮತ್ತು ಸುಧಾರಣೆಯು ಇಂದಿನ ಸಮಾಜದ ಅತಿ ಪ್ರಮುಖವಾದ ಸಮಸ್ಯೆಯಾಗಿದೆ. ಮಕ್ಕಳನ್ನು ಕಾನೂನು ಉಲ್ಲಂಘನೆಯಿಂದ ದೂರವುಳಿಸಲು ಮತ್ತು ಆರೋಗ್ಯಕಾರಿ ಚರ್ಚೆ ಹಾಗೂ ವಿಶ್ಲೇಷಣೆಯಲ್ಲಿ ಪಾಲ್ಗೊಳಿಸಲು ಅವರಿಗೆ ಅಂತರ್ಜಾಲ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯನ್ನು ಕಲಿಸಬೇಕಾದುದು ಅಗತ್ಯ. ಅದಕ್ಕಾಗಿ ಈ ಕೆಳಗಿನ ತಾಣಗಳನ್ನು ಸಂಪರ್ಕಿಸಿರಿ.

http://www.rcmp-grc.gc.ca/qc/pub/cybercrime/cybercrime-eng.htm

**ಅಂತರ್ಜಾಲ ಬಳಕೆಗೆ ಮಾರ್ಗದರ್ಶಿ ಸೂತ್ರಗಳು ಮತ್ತು ಮಾಹಿತಿಗಳನ್ನು ಪೋಸ್ಟ್ ಮಾಡುವ ನಿಯಮ:**

ಹೆತ್ತವರು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸಾಮಾಜಿಕ ಜಾಲತಾಣ ಮತ್ತು ಅವುಗಳ ಮಾಧ್ಯಮಗಳ (Source) ಕುರಿತು ಮಾಹಿತಿಗಳನ್ನು ಕಲೆ ಹಾಕುತ್ತಿರಬೇಕು.

**ಅಂತರ್ಜಾಲದ ಕೆಲವು ಅಪಾಯಗಳನ್ನು ಇಲ್ಲಿ ವಿವರಿಸಲಾಗುತ್ತಿದೆ.**

- ಹ್ಯಾಕರ್ಸ್ ಮತ್ತು ನಿಂದನಾತ್ಮಕ ವಿಷಯಗಳನ್ನು ಹಾಕುವವರು, ಕಂಪ್ಯೂಟರ್ ವೈರಸ್, ಟ್ರೋಜನ್ ಹಾರ್ಸ್ ಮತ್ತು ಕ್ರಿಮಿಗಳು.
- Trojan horses, warms Headers and Mahcioin logic (Verses)
- ಹಾನಿಕಾರಕ, ಮನನೋಯಿಸುವ ಮತ್ತು ದ್ವೇಷಕಾರಕ ವಿಷಯಗಳು.
- ಮೋಸ, ಬೆದರಿಕೆಯುಕ್ತ ಮತ್ತು ಭಯ ಹುಟ್ಟಿಸುವಂತಹ ವಿಷಯಗಳು.
- ನೀವು ಅರಿಯದಂತಹ ಮಾಧ್ಯಮಗಳ ಮೂಲಕ ಬರುವ ಈಮೇಲ್. Spam, Spyware ಇತ್ಯಾದಿ.
- ಮಕ್ಕಳನ್ನು ಪುಸಲಾಯಿಸುವ ಮೋಸದ ವಿಷಯಗಳು.
- ದ್ವೇಷಕಾರಕ ಮತ್ತು ಹಾನಿಕಾರಕ ಈಮೇಲ್‌ಗಳು.

ಬೆದರಿಕೆಯೊಡ್ಡುವ ಸಂಗತಿಯು ಈಗ ಅಂತರ್ಜಾಲದಲ್ಲಿಯೂ ಕಾಣತೊಡಗಿದೆ. ನಿಮ್ಮ ಈಮೇಲ್‌ನಲ್ಲಿಯೂ ಬೆದರಿಕೆಯೊಡ್ಡುವಂತಹ ಸಂದೇಶಗಳು ಬರಬಹುದು. ಇದನ್ನು Cyber Bullying ಎನ್ನುತ್ತಾರೆ. ಈಗ ಇದು ಮೊಬೈಲ್‌ನಲ್ಲಿಯೂ ಎಸ್.ಎಂ.ಎಸ್. ಮೂಲಕವೂ ಬರುತ್ತವೆ. ಇಂತಹ ಬೆದರಿಕೆಯ ಸಂದೇಶಗಳು ಬಂದರೆ ಅವುಗಳನ್ನು ಕಡೆಗಣಿಸಬೇಕು. ಒಂದು ವೇಳೆ ಇಂತಹ ಸಂದೇಶ ಕಳುಹಿಸುವವರು ಯಾರೆಂದು ತಿಳಿದು ಬಂದರೆ ಕಾನೂನು ಪಾಲಕರಿಗೆ ದೂರು ಸಲ್ಲಿಸಬೇಕು.

- ಕೆಲವೊಮ್ಮೆ ಈಮೇಲ್, ಫೋನ್ ಮತ್ತು ವಾಟ್ಸಾಪ್‌ನಲ್ಲಿ (Whatsapp) ಅಶ್ಲೀಲ ಚಿತ್ರಗಳನ್ನು ಹೊಂದಿರುವಂತಹ ಸಂದೇಶಗಳೂ ಬರುತ್ತವೆ. ಅಂತಹ ಚಿತ್ರಗಳನ್ನು

ಬೇಕೆಂತಲೇ ಅಶ್ಲೀಲವಾಗಿಸಲಾಗಿರಲೂ ಬಹುದು; ಜನರನ್ನು ಬ್ಲಾಕ್ ಮೇಲ್ ಮಾಡಲು ಅದನ್ನು ಬಳಸುವ ಉದ್ದೇಶದಿಂದ ಕಳುಹಿಸಲಾಗುವ ಸಂದೇಶಗಳಲ್ಲಿ ಅವುಗಳನ್ನು ಬಳಸಿರಲೂ ಬಹುದು. ಇಂತಹ ಸಂದೇಶಗಳ ಕುರಿತು ಜಾಗೃತರಾಗಿರಬೇಕು. ಅಂತಹುದನ್ನು ಕಾನೂನು ಪಾಲಕರ ಗಮನಕ್ಕೆ ತರಬೇಕಾಗಿದೆ. ಹದಿನೆಂಟು ವರ್ಷಕ್ಕಿಂತ ಕೆಳಗಿನವರಿಗೆ ಇಂತಹ ಸಂದೇಶಗಳನ್ನು ಕಳುಹಿಸುವುದು ಅಪರಾಧವಾಗಿದೆ.

- ಕೆಲವೊಮ್ಮೆ ಸಂಸ್ಕೃತಿ, ಭಾಷೆ ಮತ್ತು ಕುಲ–ಗೋತ್ರಗಳು ಭಿನ್ನವಾಗಿರುವವರ ವಿರುದ್ಧ ದ್ವೇಷಕಾರಕ ಹಾಗೂ ಅವಮಾನಜನಕ ವದಂತಿಗಳನ್ನು ಹರಡಲಾಗುವುದನ್ನು ಕಾಣಲು ಸಿಗುತ್ತದೆ. ಇಂತಹ ಸಂದೇಶಗಳ ಕುರಿತು ಜಾಗ್ರತೆ ಪಾಲಿಸುವ ಅಗತ್ಯವಿದೆ. ಬಹುಶಃ ಮುಸ್ಲಿಮರು ಮತ್ತು ದಲಿತರ ನಡುವೆ ದ್ವೇಷವನ್ನು ಹರಡಲಿಕ್ಕಾಗಿ ಉಚ್ಚ ಜಾತಿಯವರೆನಿಸಿಕೊಂಡವರು ಸಾಮಾಜಿಕ ಜಾಲತಾಣಗಳಲ್ಲಿ ಸತ್ಯಕ್ಕೆ ದೂರವಾದ ಸಂದೇಶ ಮತ್ತು ಚಿತ್ರಗಳನ್ನು ಕಳುಹಿಸುವ ಸಾಧ್ಯತೆಯೂ ಇರುತ್ತದೆ. ಇಂತಹ ಸಂದೇಶಗಳು ಭಾವನಾತ್ಮಕವಾಗಿ ಉದ್ರೇಕಿಸುವಂತಹುದಾಗಿದ್ದು, ಅಂತಹವುಗಳು ಬಂದರೆ ತಕ್ಷಣವೇ ಅಳಿಸಿ ಹಾಕಬೇಕು ಎಂದು ಯುವಪೀಳಿಗೆಗೆ ಸೂಚಿಸಬೇಕು. ಅವುಗಳನ್ನು ಇತರರಿಗೆ ಯಾವ ಕಾರಣಕ್ಕೂ Forward ಮಾಡಬಾರದು. ಕಾನೂನು ವ್ಯವಸ್ಥೆ ಮಾಡುವವರು ಇದರ ಬಗ್ಗೆ ಜಾಗೃತೆ ವಹಿಸಬೇಕು.

- ಒಂದು ಸಾಮಾನ್ಯವಾದ ರಸ್ತೆ ಅಪಘಾತದ ಚಿತ್ರವನ್ನು ಸಂಘಪರಿವಾರದ ಮಂದಿ ಸಾಮಾಜಿಕ ಜಾಲತಾಣದಲ್ಲಿ ಹಾಕಿ, ಅವರನ್ನು ಮುಸ್ಲಿಮರು ಹತ್ಯೆಗೈದಿದ್ದಾರೆ ಎಂದು ಸುಳ್ಳು ವದಂತಿಯನ್ನು ಹರಡಿದ ಘಟನೆಯು ಮುಝುಫ್ಫರ್ ನಗರದಲ್ಲಿ ನಡೆದಿತ್ತು.

- ಅದೇ ರೀತಿ ಮೂರು ವರ್ಷಗಳ ಹಿಂದೆ, ಉತ್ತರ ಭಾರತೀಯ ನಾಗರಿಕರಿಗೆ, ರಮಝಾನಿನ ಬಳಿಕ ನಿಮ್ಮ ಮೇಲೆ ಆಕ್ರಮಣ ನಡೆಸಲಿದ್ದಾರೆ ಎಂಬ ಸಂದೇಶಗಳು ರವಾನೆಯಾಗಿದ್ದುವು. ಅದರಿಂದ ಆ ಬಡಪಾಯಿಗಳಲ್ಲಿ ಭೀತಿಯ ಕರಿಛಾಯೆಯು ಆವರಿಸಿತ್ತು. ಅವರು ತಕ್ಷಣವೇ ರೈಲ್ವೇ ಸ್ಟೇಶನ್‌ಗಳಿಗೆ ಧಾವಿಸತೊಡಗಿದ್ದರು. ಆದರೆ ಬಳಿಕ, ಇಂತಹ ಸಂದೇಶವನ್ನು ಮುಸ್ಲಿಮರ ಮತ್ತು ಉತ್ತರ ಭಾರತೀಯರ ನಡುವೆ ದ್ವೇಷದ ವಾತಾವರಣವನ್ನು ಉಂಟು ಮಾಡಲು ರಚಿಸಲಾಗಿತ್ತು ಎಂದು ತನಿಖೆಯಿಂದ ತಿಳಿದು ಬಂದಿತ್ತು. ಮುಸ್ಲಿಮರು ಈದ್ ಆದ ತಕ್ಷಣವೇ ನಗರದ ದೊಡ್ಡ ಈದ್‌ಗಾದಲ್ಲಿ ಉತ್ತರ ಭಾರತೀಯರೊಡನೆ ಪ್ರೀತಿಯನ್ನು ಪ್ರಕಟಿಸಿದರು ಮತ್ತು ಅವರ ಮನಸ್ಸಮಾಧಾನಕ್ಕಾಗಿ ಈದ್ ಮಿಲನ ಕಾರ್ಯಕ್ರಮಗಳನ್ನು ಆಯೋಜಿಸಿದರು. ಬಳಿಕ ಅವರನ್ನು ಸತ್ಕರಿಸುವ ಮೂಲಕ, ನಾವು ನಿಮ್ಮ ಮೇಲೆ ಯಾವುದೇ ರೀತಿಯ ದ್ವೇಷವನ್ನು ಇರಿಸಿಕೊಂಡಿಲ್ಲ ಎಂಬ ಸಂದೇಶವನ್ನು ನೀಡಿದರು. ಈ ಕಾರ್ಯಕ್ರಮಗಳಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳು ಮತ್ತು ಉಲೆಮಾಗಳೂ ಭಾಗವಹಿಸಿದ್ದರು.

# ಎಚ್ಚರಿಕೆ

• ಇಸ್ಲಾಮ್ ನ್ಯಾಯಸಮ್ಮತ ಕಾರಣವಿಲ್ಲದೆ ಆಕ್ರಮಣ ನಡೆಸುವುದನ್ನು ನಿಷೇಧಿಸುತ್ತದೆ. ಮಾತ್ರವಲ್ಲ, ಮುಗ್ಧ ಜನರ ಹೃದಯ ಮತ್ತು ಮನಸ್ಸುಗಳಲ್ಲಿ ಭೀತಿಯನ್ನುಂಟು ಮಾಡುವ ಕೃತ್ಯಗಳನ್ನು ನಿಷೇಧಿಸುತ್ತದೆ. ಅವರ ಜೀವದ ರಕ್ಷಣೆಯು ನಮ್ಮ ಆದ್ಯತೆಯಾಗಿದೆ. ಈ ರೀತಿಯ ಹಿಂಸಾತ್ಮಕ ಕೃತ್ಯವು ಭಯೋತ್ಪಾದನೆಯ ಸಾಲಿನಲ್ಲಿ ಸೇರುತ್ತದೆ. ಇಸ್ಲಾಮ್ ಮತ್ತು ಭಯೋತ್ಪಾದನೆಯನ್ನು ಸಮೀಕರಿಸುವುದು ಕೂಡಾ ಒಂದು ರೀತಿಯ ವೈಚಾರಿಕ ಭಯೋತ್ಪಾದನೆಯಾಗಿದೆ. ನಿಜಾರ್ಥದಲ್ಲಿ ಇಸ್ಲಾಮ್ ಸಂತುಲಿತ, ಮಿತವಾದಿ ಧರ್ಮವಾಗಿದೆ.

• ಜಿಹಾದನ್ನು ಭಯೋತ್ಪಾದನೆಯೊಂದಿಗೆ ಸಮೀಕರಿಸುವುದರಿಂದ ಮತ್ತು ಭಯೋತ್ಪಾದಕರನ್ನು 'ಜಿಹಾದಿ'ಗಳೆಂದು ಕರೆಯುವ ಮೂಲಕ ಮಾಧ್ಯಮಗಳು, ಕಾನೂನು ಪಾಲಕರು, ಗುಪ್ತಚರ ಸಂಸ್ಥೆಗಳು ಮತ್ತು ರಾಜಕಾರಣಿಗಳು ಗೊಂದಲ ಸೃಷ್ಟಿಸುತ್ತಾರೆ. ತೀವ್ರವಾದಿಗಳ ವ್ಯಾಖ್ಯೆಗಳನ್ನು ಸಮರ್ಥವಾಗಿ ಎದುರಿಸಿ ಯುವ ಜನತೆ ಮತ್ತು ಬ್ರೈನ್‌ವಾಷ್‌ಗೆ ತುತ್ತಾಗುವ ಸಾಧ್ಯತೆಯಿರುವ ಜನರ ಮನದಲ್ಲಿ ಸರಿಯಾದ ಚಿತ್ರಣವನ್ನು ಮೂಡಿಸುವ ನಿಟ್ಟಿನಲ್ಲಿಯೂ ಇದು ಕಂಟಕವಾಗಿ ಪರಿಣಮಿಸುತ್ತದೆ.

• ಜಿಹಾದ್‌ನ ಪರಿಕಲ್ಪನೆಯನ್ನು 'ಭಯೋತ್ಪಾದನೆ'ಯ ಜತೆ ಜೋಡಿಸುವುದು ಮತ್ತು ಭಯೋತ್ಪಾದಕರನ್ನು 'ಜಿಹಾದಿ'ಗಳು ಎಂದು ಕರೆಯುವುದರ ಮೂಲಕ ನಾವು ಉಗ್ರವಾದಿಗಳ ದುಷ್ಟ ಸಂಚುಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಕೈಜೋಡಿಸುತ್ತೇವೆ.

• ಈ ರೀತಿಯ ಭಾಷೆಯ ಬಳಕೆಯು ಭಯೋತ್ಪಾದಕರನ್ನು ಇನ್ನಷ್ಟು ಉತ್ತೇಜಿಸುವುದಲ್ಲದೆ ಅವರಿಗೆ ತಮ್ಮ ಬಗ್ಗೆ ಹೆಮ್ಮೆ

ಪಟ್ಟುಕೊಳ್ಳುವ ಅವಕಾಶವನ್ನು ಒದಗಿಸುತ್ತದೆ.

- ಈ ಹಿಂದೆ ಸ್ಪಷ್ಟಪಡಿಸಿದಂತೆ ಜಿಹಾದ್ ಎಂದರೆ ಭಯೋತ್ಪಾದನೆಯಲ್ಲ ಮತ್ತು ಭಯೋತ್ಪಾದಕರು ಅಪರಾಧಿಗಳೇ ಹೊರತು ಹುತಾತ್ಮರಲ್ಲ.

- ಇಸ್ಲಾಮೀ ಪದಕೋಶವನ್ನು, ಪಾರಿಭಾಷಿಕಗಳನ್ನು, ಪರಿಕಲ್ಪನೆಗಳನ್ನು ಸ್ಪಷ್ಟ ಮತ್ತು ನಿಖರವಾಗಿ ಬಳಸುವುದೇ ಉಗ್ರಗಾಮಿಗಳ ಹಿಂಸಾತ್ಮಕ ವ್ಯಾಖ್ಯೆಯನ್ನು ತೊಡೆದು ಹಾಕಲು ಮತ್ತು ಮತಾಂಧತೆಯೆಡೆಗೆ ಸಾಗುತ್ತಿರುವ ಯುವ ಸಮೂಹವನ್ನು ಪರಿವರ್ತಿಸಲು ಇರುವ ದಾರಿ.

- ಭಯೋತ್ಪಾದನೆಯ ಸುಳ್ಳು ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡು ಹಿಂಸೆ ಅನುಭವಿಸುತ್ತಿರುವವರ ಪರವಾಗಿ ಹೋರಾಡುವ ಮಾನವ ಹಕ್ಕು ಸಂಘಟನೆಗಳು, ಇತರ ನಾಗರಿಕ ಸೇವಾ ಗುಂಪುಗಳು ಮತ್ತು ಸಮುದಾಯ ಸಂಘಟನೆಗಳನ್ನೊಳಗೊಂಡ ಒಂದು ನಾಗರಿಕ ವೇದಿಕೆಯನ್ನು ನಾವು ಸ್ಥಾಪಿಸಬೇಕು. ಎಲ್ಲ 'ಭಯೋತ್ಪಾದನೆ' ಪ್ರಕರಣಗಳು ಈ ಸಂಘದ ಮುಂದೆ ಪ್ರಸ್ತಾಪಿಸಲ್ಪಡಬೇಕು. ಇದು ಕಾವಲುಗಾರನಂತೆ (watchdog) ಕಾರ್ಯನಿರ್ವಹಿಸಬೇಕು. ಇದರಿಂದಾಗಿ ಮಾತ್ರ ಪೊಲೀಸರು ಮತ್ತು ಜನರ ಮಧ್ಯೆ ಪರಸ್ಪರ ಸಂಪರ್ಕ, ಸಾಮರಸ್ಯ ಮತ್ತು ಸಹಕಾರ ಬೆಳೆಯಲು ಸಾಧ್ಯ. ಹಾಗೆಯೇ ಇದರಿಂದ ತಪ್ಪುಕಲ್ಪನೆಗಳ ಹಾದಿಯನ್ನೇ ಮುಚ್ಚಬಹುದಾಗಿದೆ.

# ಧರ್ಮ ನಿಂದನೆ

## ಅಭಿವ್ಯಕ್ತಿ ಸ್ವಾತಂತ್ರ್ಯವೆಂಬ ಅಸ್ತ್ರ

ಪ್ರಸಕ್ತ ಜಗತ್ತಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವು ಏಕಮುಖ ಚಲನೆಯ ಹಾದಿಯಂತೆ ಕೆಲಸ ಮಾಡುತ್ತದೆ. ಪಾಶ್ಚಾತ್ಯ ಬರಹಗಾರರು, ಚಿಂತಕರು, ಬುದ್ಧಿಜೀವಿಗಳು, ಪತ್ರಿಕೋದ್ಯಮಿಗಳು ಕುರ್‌ಆನ್, ಪ್ರವಾದಿ ಮುಹಮ್ಮದ್, ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಜಾಗತಿಕ ಮಟ್ಟದಲ್ಲಿ ಪಸರಿಸಲು ಇದನ್ನು ಬಳಸುತ್ತಿದ್ದಾರೆ. ಒಂದು ವಿಧದ ಅಭಿವ್ಯಕ್ತಿಗೆ ಮಾತ್ರ ಈ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆಯು ಕೆಲವೊಮ್ಮೆ ಇಸ್ಲಾಮ್ ಮತ್ತು ಮುಸ್ಲಿಮರನ್ನು ಹಿಂಸಕರು, ಪಾಪಿಗಳು, ಅಜ್ಞಾನಿಗಳು, ಮೂರ್ಖರು ಮತ್ತು ಕ್ರೂರಿಗಳು ಎಂಬಂತೆ ಬಿಂಬಿಸಲು ಬಳಸುವ ಅಸ್ತ್ರದಂತೆ ತೋರುತ್ತದೆ. ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆಯು ಇಪ್ಪತ್ತೊಂದನೇ ಶತಮಾನದಲ್ಲಿ ಜನರನ್ನು 'ನಾಗರಿಕರನ್ನಾಗಿಸುವ' ಪ್ರಯತ್ನವೆಂಬಂತೆ ನನಗೆ ತೋಚುತ್ತದೆ.

ಪ್ರವಾದಿ ಮುಹಮ್ಮದ್‌ರ ಚಿತ್ರ ಬಿಡಿಸುವುದು ಬಹುದೊಡ್ಡ ಪ್ರತಿಭಟನೆಯನ್ನು ಹುಟ್ಟು ಹಾಕುತ್ತದೆ. ಇತ್ತೀಚಿನ ದಿನಗಳಲ್ಲಿ ಡಚ್ ಪತ್ರಿಕೆ ಜಿಲ್ಲಾಂಡ್ ಪೋಸ್ಟ್‌ನಲ್ಲಿ ಪ್ರಕಟವಾದ ಡಚ್ ವ್ಯಂಗ್ಯ ಚಿತ್ರಕಾರ ಬರೆದ ಪ್ರವಾದಿ ಮುಹಮ್ಮದ್‌ರ ವ್ಯಂಗ್ಯ ಚಿತ್ರವು ಬೃಹತ್ ಪ್ರತಿಭಟನೆಗೆ ಎಡೆ ಮಾಡಿಕೊಟ್ಟಿತು. ಯಾವ ರೀತಿಯಲ್ಲಿ ಏಸು ಕ್ರಿಸ್ತರಿಗೆ ಅಗೌರವ ತೋರುವುದನ್ನು ಪಾಶ್ಚಾತ್ಯ ದೇಶಗಳು ಧರ್ಮ ನಿಂದನೆ ಎಂದು ಬಗೆಯುತ್ತದೋ ಅದೇ ರೀತಿ ಮುಸ್ಲಿಮರು ಇಂತಹ ಕೃತ್ಯಗಳನ್ನು ಜನರ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ಕುಕೃತ್ಯಗಳು ಎಂದು ಬಗೆದು ಅಂತಹವರ ವಿರುದ್ಧ ಧರ್ಮ ನಿಂದನೆಯ ಆರೋಪದ ಮೇಲೆ ಕ್ರಮ ಕೈಗೊಳ್ಳಬೇಕೆಂದು ಬಯಸುತ್ತಾರೆ. ಇಂತಹ ವಿಷಯಗಳಲ್ಲಿ ಪಾಶ್ಚಾತ್ಯರು ಇಬ್ಬಗೆಯ ನಿಲುವು ಹೊಂದಿದ್ದಾರೆ. ಏಸು ಕ್ರಿಸ್ತರ ಅವಹೇಳನ ಮಾಡುವ ಹಲವು ನಾಟಕಗಳನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಿಷೇಧಿಸಲಾಗಿತ್ತು. ಅವರ ಪ್ರಕಾರ ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಲ್ಲ.

ಅಭಿವ್ಯಕ್ತಿ ಸ್ವಾತಂತ್ರ್ಯವು ಧಾರ್ಮಿಕ ವಿಶ್ವಾಸ ಮತ್ತು ವ್ಯಕ್ತಿಗಳ ಅವಹೇಳನಕ್ಕೆ ಸಿಕ್ಕ ಪರವಾನಗಿ ಅಲ್ಲ ಮತ್ತು ಆಗಲೂಬಾರದು. ಅಭಿವ್ಯಕ್ತಿ ಸ್ವಾತಂತ್ರ್ಯವು ಅಶ್ಲೀಲವಾಗಿ ಚಿತ್ರಿಸುವ, ಅನೌಚಿತ್ಯ ಪೂರ್ಣವಾದ, ಕಳಂಕಕಾರಿ ಮತ್ತು ರಾಷ್ಟ್ರದ್ರೋಹದ ಬರಹಗಳನ್ನು ಪ್ರಕಟಿಸುವ ಹಕ್ಕನ್ನು ಖಂಡಿತವಾಗಿಯೂ ನೀಡುವುದಿಲ್ಲ. ವ್ಯಕ್ತಿಗಳ ಘನತೆಯನ್ನು ಕಾಪಾಡುವ ಮತ್ತು ಗೌಪ್ಯತೆಯನ್ನು ಗೌರವಿಸುವ ಕಾನೂನುಗಳನ್ನು ಎಲ್ಲ ರಾಷ್ಟ್ರಗಳೂ ರೂಪಿಸಿವೆ. ಹಾಗಾದರೆ ಪ್ರವಾದಿ ಮುಹಮ್ಮದ್‌ರನ್ನು ಅವಮಾನಿಸುವಂತಹ ವ್ಯಂಗ್ಯ

ಚಿತ್ರವನ್ನು ಡಚ್ ವ್ಯಂಗ್ಯ ಚಿತ್ರಕಾರ ರೂಪಿಸಿದ್ದಾದರೂ ಹೇಗೆ? ಎಲ್ಲ ಧರ್ಮಗಳ ಪವಿತ್ರ ವ್ಯಕ್ತಿಗಳು ಮತ್ತು ಚಿಹ್ನೆಗಳನ್ನು ಗೌರವಿಸಬೇಕಾದುದು ನಮ್ಮ ಕರ್ತವ್ಯ.

ಮುಸ್ಲಿಮ್ ರಾಷ್ಟ್ರಗಳಲ್ಲಿ ಯಾರೊಬ್ಬರೂ ಯಾವುದೇ ಪ್ರವಾದಿಗಳ ಚಿತ್ರವನ್ನು ಬಿಡಿಸುವಂತಿಲ್ಲ. ಅವರನ್ನು ಮೂದಲಿಸುವುದು ದೂರದ ಮಾತು. ಏಸು ಕ್ರಿಸ್ತರು ಪಿತೃ ರಹಿತವಾಗಿ ಜನಿಸಿದ್ದರೂ ಇಸ್ಲಾಮ್‌ನಲ್ಲಿ ಏಸುಕ್ರಿಸ್ತರ ತಾಯಿ ಮೇರಿಗೆ ಅತ್ಯುನ್ನತ ಗೌರವದ ಸ್ಥಾನವಿದೆ. ಪವಿತ್ರ ಕುರ್‌ಆನ್ ತನ್ನ ಅನುಯಾಯಿಗಳಿಗೆ ಇತರರ ಆರಾಧ್ಯರುಗಳನ್ನು, ಧರ್ಮವನ್ನು ದೂಷಿಸುವುದನ್ನು, ಮೂದಲಿಸುವುದನ್ನು ಮತ್ತು ಅಗೌರವ ತೋರಿಸುವುದನ್ನು ನಿಷೇಧಿಸಿದೆ. ಇದರಿಂದ ಇತರ ಧರ್ಮೀಯರೂ ನಮ್ಮ ಧರ್ಮವನ್ನು ಅವಹೇಳನ ಮಾಡುವಂತಹ ಪರಿಸ್ಥಿತಿ ಉಂಟಾಗಿ ಅರಾಜಕತೆಗೆ ಎಡೆ ಮಾಡಿದಂತಾಗುತ್ತದೆ.

ಹಾಸ್ಯಕ್ಕೆಂದೇ ಇರುವ ಪತ್ರಿಕೆ ಚಾರ್ಲಿ ಹೆಬ್ದೋದ ಪ್ರಕಾಶಕರು ಪ್ರವಾದಿ ಮುಹಮ್ಮದ್‌ರ ಬಗ್ಗೆ ಆಕ್ಷೇಪಾರ್ಹ ಅಂಶಗಳ ಪ್ರಕಟಣೆಯ ಹೆಚ್ಚಿನ ಪ್ರತಿಗಳನ್ನು ಮುದ್ರಿಸುವಂತಹ ಕೃತ್ಯಗಳು ಖಂಡಿತವಾಗಿಯೂ ಶಾಂತಿ ಮತ್ತು ಸ್ವಾತಂತ್ರ್ಯದ ಅವಹೇಳನವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಇವರು ಹಿಂಸೆಯನ್ನು ಹೆಚ್ಚೆಚ್ಚು ಪ್ರಚೋದಿಸುತ್ತಿದ್ದಾರೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದ್ದರೆ ಇದನ್ನು ಅನುಸರಿಸುವವರು ತಮ್ಮ ವಿಶ್ವಾಸಾರ್ಹತೆಯನ್ನು ಸವಾಲಿಗೊಡ್ಡುತ್ತಾರೆ. ಮಾತ್ರವಲ್ಲ, ತನ್ನದೇ ಸಮಾಜ ಮತ್ತು ಜನರ ಶಾಂತಿ ಮತ್ತು ಸಮಾಧಾನವನ್ನು ಕದಡುವ ಕೆಲಸ ಮಾಡುತ್ತಾರೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಇದರ ಫಲಾನುಭವಿಗಳು ಯಾರಾದರೂ ಇದ್ದರೆ ಅದು ಭಯೋತ್ಪಾದಕರು ಮಾತ್ರ.

ತಮ್ಮನ್ನು ಕಠೋರವಾಗಿ ನಿಂದಿಸುವವರನ್ನು, ವ್ಯಂಗ್ಯ ಚಿತ್ರಗಳಲ್ಲಿ ಪ್ರವಾದಿಯನ್ನು ಅವಹೇಳನ ಮಾಡುವವರನ್ನು, ಮಾಧ್ಯಮಗಳಲ್ಲಿ ಅವರ ಬಗ್ಗೆ ತಿರಸ್ಕಾರ ಮತ್ತು ರೂಢಮೂಲವಾದ ವಿಚಾರಗಳನ್ನು ಪ್ರಕಟಿಸುವವರ ಅಭಿಪ್ರಾಯಗಳನ್ನು ನಿರ್ಲಕ್ಷಿಸಬೇಕೆಂಬುದು ಕುರ್‌ಆನ್‌ನ ಸಾಮಾನ್ಯ ಬೋಧನೆಯಾಗಿದೆ. ಮಾತ್ರವಲ್ಲ, ತಮ್ಮಲ್ಲಿರುವ ನ್ಯೂನತೆಗಳನ್ನು ಮತ್ತು ತಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹೆಚ್ಚಿನ ಮುತುವರ್ಜಿ ತೋರಿಸಿರಿ ಎಂದು ಅದು ಕಲಿಸಿಕೊಡುತ್ತದೆ.

ಕುರ್‌ಆನ್‌ನ ಈ ವಾಕ್ಯವು ಇದಕ್ಕೆ ಸರಿಯಾದ ಮಾರ್ಗದರ್ಶನ ನೀಡುತ್ತದೆ ಎಂಬುದು ನನ್ನ ಭಾವನೆ.

> “ನೀವು ಭೂವಾಸಿಗಳಲ್ಲಿ ಹೆಚ್ಚಿನವರ ಹೇಳಿಕೆಯಂತೆ ನಡೆದರೆ ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿ ಬಿಡುವರು, ಅವರಂತೂ ಕೇವಲ ಗುಮಾನಿಯನ್ನು ಅನುಸರಿಸಿ ಊಹಾ ಪೋಹಗಳ ಪ್ರಕಾರ ವರ್ತಿಸುತ್ತಾರೆ.” (ಕುರ್‌ಆನ್– 6:116)

# ಮಾಧ್ಯಮಗಳ ದುರ್ಬಳಕೆ

ಭಾರತೀಯ ಮಾಧ್ಯಮಗಳು ಮಾಹಿತಿ, ಶಿಕ್ಷಣ ಮತ್ತು ಮನೋರಂಜನೆಯ ವಿಷಯದಲ್ಲಿ ಗಮನಾರ್ಹ ಸ್ವಾತಂತ್ರ್ಯ ಹೊಂದಿವೆ. ಅಭಿವ್ಯಕ್ತಿ ಸ್ವಾತಂತ್ರ್ಯವು ಮಾಧ್ಯಮಗಳಿಗೆ ಸಮಸ್ಯೆಗಳ ಮತ್ತು ಘಟನೆಗಳ ಬಗ್ಗೆ ತಮ್ಮದೇ ವ್ಯಾಖ್ಯಾನಗಳನ್ನು ಕೊಡುವ ಅಧಿಕಾರವನ್ನು ನೀಡಿದೆ. ಇದರಿಂದ ಜನಸಾಮಾನ್ಯರಿಗೆ ಯಾವುದೇ ವಿಚಾರದ ಬಗ್ಗೆ ತಿಳುವಳಿಕೆ ಸಿಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಸ್ವಾತಂತ್ರ್ಯವನ್ನು ನಿರ್ದಿಷ್ಟ ಸಮುದಾಯಕ್ಕೆ ಮಸಿ ಬಳಿಯುವ, ಕೆಲವು ನಂಬಿಕೆಗಳನ್ನು ನಿಂದಿಸುವ, ವಿಷಯ ಪಲ್ಲಟಗೊಳಿಸುವ ಮತ್ತು ಮುಗ್ಧ ಜನರನ್ನು ದಾರಿತಪ್ಪಿಸುವ ನಿಟ್ಟಿನಲ್ಲಿ ದುರ್ಬಳಕೆ ಮಾಡುತ್ತಿರುವುದು ಹೆಚ್ಚಾಗಿ ಕಂಡು ಬರುತ್ತಿದೆ. ರಾಜಕೀಯ ಪಕ್ಷಗಳ ಏಕ ಸ್ವಾಮ್ಯದಲ್ಲಿರುವ ಹಾಗೆಯೇ ಲಾಭಕೋರ ವ್ಯಕ್ತಿ ಮತ್ತು ಸಂಸ್ಥೆಗಳ ಅಧೀನದಲ್ಲಿರುವ ಪ್ರಾದೇಶಿಕ ಪತ್ರಿಕೆಗಳು ಅವರ ಹಿತಾಸಕ್ತಿಗೆ ತಕ್ಕಂತೆ ಇಂತಹ ಘಟನೆಗಳನ್ನು ವರದಿ ಮಾಡುತ್ತಿರುವುದು ಸಾಮಾನ್ಯವಾಗಿ ಕಾಣಸಿಗುತ್ತದೆ. ಪ್ರಚಾರಗಿಟ್ಟಿಸಲು ಮತ್ತು ತಮ್ಮ ಟಿಆರ್‌ಪಿ ಗಳಿಕೆಯನ್ನು ಹೆಚ್ಚಿಸಲು ಟಿವಿ ಚಾನೆಲ್‌ಗಳು ಜಾಗತಿಕ ಮಾಧ್ಯಮ ಲೋಕಕ್ಕೆ ಅನುರೂಪವಾಗಿ ನಿರ್ದಿಷ್ಟ ಸಮುದಾಯವನ್ನು ಗುರಿ ಮಾಡಿ ಸೈದ್ಧಾಂತಿಕ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ.

ಶೀತಲ ಸಮರದ ಸಂದರ್ಭದಲ್ಲಿ ಮಾಧ್ಯಮಗಳ ನೆಚ್ಚಿನ ಗುರಿ ಸೋವಿಯತ್ ಯೂನಿಯನ್ ಆಗಿತ್ತು. ಕಮ್ಯುನಿಸ್ಟ್ ಸಿದ್ಧಾಂತಗಳು ಮತ್ತು ಅವರ ಯುದ್ಧ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ವಿಮರ್ಶೆಗಳು ಕಂಡುಬರುತ್ತಿದ್ದವು. ಸೋವಿಯತ್ ಯೂನಿಯನ್‌ನ ಪತನದ ನಂತರ ಪಾಶ್ಚಾತ್ಯ ವಿಮರ್ಶಕರು ಇಸ್ಲಾಮನ್ನು ತಮ್ಮ ಹೊಸ ನೆಚ್ಚಿನ ವೈರಿಯನ್ನಾಗಿಸಿದರು. ಪಾಶ್ಚಾತ್ಯ ಯುದ್ಧ ಸಾಮಾಗ್ರಿಗಳ ತಯಾರಕರಿಗೆ ಹೊಸ ಮಾರುಕಟ್ಟೆಯನ್ನು ಉಂಟುಮಾಡಲು ಇದು ಅಗತ್ಯವಾಗಿತ್ತು. ಪಾಶ್ಚಾತ್ಯರ ಪ್ರಾಯೋಜಕತ್ವದಿಂದ ಅವರ ದಾಳದಂತೆ ಮೊದಲಿದ್ದ ಮುಜಾಹಿದೀನ್ ಮತ್ತು ತಾಲಿಬಾನ್‌ಗಳು ಕ್ರಮೇಣ ಅವರಿಗೆ ಮುಳ್ಳಾಗಿ ಪರಿಣಮಿಸಿ, ಪಾಶ್ಚಾತ್ಯರ ಆಕ್ರಮಣದ ವಸ್ತುವಾಗಿ ಪರಿವರ್ತನೆಗೊಂಡರು. ಇಸ್ಲಾಮೀ ಸೈನಿಕರ ಬಗ್ಗೆ ಭೀತಿಯನ್ನು ಹುಟ್ಟಿಸಿ,

ಕಲ್ಪಿತ ವೈರಿಗಳ ವಿರುದ್ಧ ರಕ್ಷಣೆಗಾಗಿ ಯುದ್ಧಾಸ್ತ್ರಗಳನ್ನು ಮಾರುವುದು ಈ ಸಂಚಿನ ಹಿಂದಿರುವ ಗುರಿ. 9/11ರ ನ್ಯೂಯಾರ್ಕ್ ನಗರದಲ್ಲಿನ ವಿಶ್ವ ವಾಣಿಜ್ಯ ಕೇಂದ್ರದ ಮೇಲಿನ ದಾಳಿಯಿಂದ ಅಮೇರಿಕದ ಎಲ್ಲ ಕಂಪೆನಿಗಳ ಷೇರು ಮೌಲ್ಯಗಳು ಕುಸಿದಿದ್ದವು. ಆದರೆ ನಾಸ್ಡಾಕ್‌ನಲ್ಲಿ ರೇತಿಯೂನ್, ಬೋಯಿಂಗ್ ಮತ್ತು ಲಾಕ್‌ಹೀಡ್ ಮಾರ್ಟಿನಂತಹ ಮುಖ್ಯ ಶಸ್ತ್ರಾಸ್ತ್ರ ಕಂಪೆನಿಗಳ ಷೇರು ಮೌಲ್ಯಗಳು ಅತ್ಯಂತ ಎತ್ತರಕ್ಕೆ ಜಿಗಿದಿದ್ದವು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷವಾಗಿ ಅಮೇರಿಕದಲ್ಲಿ ಸೈನ್ಯ, ಮಾಧ್ಯಮ, ಆಡಳಿತ ವರ್ಗ ಮತ್ತು ರಾಜಕೀಯ ಪಕ್ಷಗಳ ನಡುವೆ ಒಂದು ಹೊಸ ಬೆಸುಗೆ ಏರ್ಪಟ್ಟಿದೆ. ಈ ಸಂಬಂಧವು ಮಾಧ್ಯಮಗಳನ್ನು ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಭಯ ಉಂಟು ಮಾಡುವಂತೆ ಪ್ರೇರೇಪಿಸಿದೆ. ಇಸ್ಲಾಮೀ ರಾಷ್ಟ್ರಗಳಿಗೆ ಇತರ ದೇಶಗಳ ಮೇಲೆ ಆಕ್ರಮಣ ನಡೆಸುವ ಸಾಮರ್ಥ್ಯವಿಲ್ಲದಿದ್ದರೂ ಅವು ಪಾಶ್ಚಾತ್ಯ ಜಗತ್ತಿನ ವಿರುದ್ಧ ಯುದ್ಧ ಹೂಡುತ್ತಿರುವಂತೆ ಚಿತ್ರಿಸಲಾಗಿದೆ.

‘ದಿ ಟೆರ್ರರ್ ಫ್ಯಾಕ್ಟರಿ’ ಎಂಬ ಟ್ರೆವರ್ ಆರೋನ್‌ಸನ್‌ರ ಪುಸ್ತಕವು FBI (ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಶನ್) ಎಂಬ ಅಮೇರಿಕಾದ ಅಪರಾಧ ನಿಗ್ರಹ ದಳವು ಯಾವ ರೀತಿಯಲ್ಲಿ ಮುಸ್ಲಿಮ್ ಯುವಕರನ್ನು (ಅಮೇರಿಕಾದಲ್ಲಿ ಕಾನೂನುಬಾಹಿರವಾಗಿ ವಾಸವಾಗಿರುವವರು) ಬಂಧಿಸಿ ನಂತರ ಅವರನ್ನು ಸೂಕ್ಷ್ಮ ಪ್ರದೇಶಗಳಲ್ಲಿ ಬಾಂಬ್‌ಗಳನ್ನಿಡಲು ಬಳಸುತ್ತಾರೆ. ಮಾತ್ರವಲ್ಲ, ಆ ಕೂಡಲೇ ಅವರನ್ನು ಬಂಧಿಸಿ ಆ ಘಟನೆಯನ್ನು ಪ್ರಚಾರ ಮಾಡಲಾಗುತ್ತದೆ ಎಂಬುದನ್ನು ಬಹಿರಂಗಪಡಿಸಿದೆ. ತಮಗೆ ಫೆಡರಲ್ ಫಂಡ್‌ನಿಂದ ವರ್ಷವೊಂದಕ್ಕೆ ದೊರೆಯುವ 3 ಬಿಲಿಯನ್ ಡಾಲರನ್ನು ಸಮದೂಗಿಸಲು ಈ ಕೃತ್ಯವನ್ನು ಮಾಡಲಾಗುತ್ತದೆ. ಇದರಿಂದ ತಿಳಿದುಬರುವ ಅಂಶವೆಂದರೆ ರಕ್ಷಣಾ ಕಾರ್ಯವೆಂಬುದು ಜಗತ್ತಿನಾದ್ಯಂತ ಒಳ್ಳೆಯ ದುಡ್ಡು ತರುವ ವಹಿವಾಟಾಗಿದ್ದು ಇದರಿಂದ ಶಾಂತಿ ಮತ್ತು ಸಹಬಾಳ್ವೆಯ ತತ್ವಗಳು ಗಂಡಾಂತರಕ್ಕೀಡಾಗುತ್ತವೆ.

## ಮಾಧ್ಯಮ ವಿಚಾರಣೆ

ಭಯೋತ್ಪಾದನೆ ಎಂಬುದು ಮುಸ್ಲಿಮರನ್ನು ಶೋಷಿಸಲು ಮತ್ತು ಬೆದರಿಸಲು ಬಳಸುವ ಅಸ್ತ್ರವಾಗಿದೆ ಎಂಬುದು ಸರ್ವವಿಧಿತ. ಹೆಚ್ಚಿನ ಸಂದರ್ಭಗಳಲ್ಲಿ ಭಯೋತ್ಪಾದನೆಯ ಆರೋಪದಲ್ಲಿ ಬಂಧನಕ್ಕೊಳಗಾದ ಯುವಕರು ಹಲವು ವರ್ಷಗಳ ಕಾರಾಗೃಹವಾಸ, ಹಿಂಸೆ ಎದುರಿಸಿ ತಮ್ಮ ಮನೆಯವರನ್ನು ಕಂಗಾಲಾಗಿಸಿದ ಬಳಿಕ ಅಮಾಯಕರೆಂದು

ಹೊರಬಂದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಈ ಯುವಕರ ಬಂಧನದ ಸುದ್ದಿಗಳು ಮಾಧ್ಯಮಗಳಲ್ಲಿ ಸಂಕೋಲೆಗಳಿಂದ ಬಂಧಿಸಿರುವ ಅವರ ಚಿತ್ರಗಳೊಂದಿಗೆ ಮುಖಪುಟಗಳಲ್ಲಿ ರಾರಾಜಿಸುತ್ತವೆ. ಟಿವಿ ವಾಹಿನಿಗಳು ಈ ಬಗ್ಗೆ ಚರ್ಚೆಗಳನ್ನು ಏರ್ಪಡಿಸಿ ಶಂಕಿತ ವ್ಯಕ್ತಿಗಳನ್ನು ಗಡಿಯಾಚೆಗಿನ ಭಯೋತ್ಪಾದಕ ಸಂಘಟನೆಗಳ ಸದಸ್ಯರೆಂದು ಬಿಂಬಿಸಿ ಟಿಆರ್‌ಪಿ ಹೆಚ್ಚಿಸಿಕೊಳ್ಳುತ್ತವೆ. ಕೆಲವೊಮ್ಮೆ ಹಿಂದುತ್ವವಾದಿ ಸಂಘಟನೆಗಳೊಂದಿಗೆ ಸಂಬಂಧವಿರುವ ವಕೀಲರ ಗುಂಪುಗಳು ಇಂತಹ ಯುವಕರ ವಕಾಲತ್ತಿಗೆ ನಿಲ್ಲಬಾರದೆಂಬ ಎಚ್ಚರಿಕೆಯನ್ನೂ ಕೊಡುತ್ತವೆ. ಕೆಲವು ಸಂದರ್ಭಗಳಲ್ಲಿ ಅವರ ರಕ್ಷಣೆಗೆ ನಿಂತು ಅವರನ್ನು ನಿರಪರಾಧಿಗಳೆಂದು ಸಾಬೀತು ಪಡಿಸಿ, ಬಂಧ ಮುಕ್ತಗೊಳಿಸಲು ಪ್ರಯತ್ನಿಸಿದ ವಕೀಲರನ್ನು ಅಪರಿಚಿತ ಕೊಲೆಗೆಡುಕರು ಹತ್ಯೆ ಮಾಡಿದ ನಿದರ್ಶನಗಳೂ ಇವೆ. ಉದಾಹರಣೆಗೆ ಮುಂಬಯಿಯ ಸಈದ್ ಅಝ್ಮಿ ಮತ್ತು ಮಂಗಳೂರಿನ ನೌಶಾದ್ ಕಾಶಿಮ್‌ಜಿಯ ಹತ್ಯೆ. ಮಾಧ್ಯಮಗಳ ಈ ರೀತಿಯ ಪ್ರಚಾರ ಕಾರ್ಯಾಚರಣೆಯು ಒಂದು ಪ್ರಯೋಗವಾಗಿದ್ದು ಇದು ಆರೋಪಿ ಸ್ಥಾನದಲ್ಲಿರುವವರ ಮತ್ತು ಅವರ ಕುಟುಂಬಿಕರ ಬಗ್ಗೆ ಅವಹೇಳನಕಾರಿಯಾದ ಮಾತುಗಳನ್ನಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಸಾಮಾಜಿಕ ಬಹಿಷ್ಕಾರವನ್ನೂ ಹಾಕಲಾಗುತ್ತದೆ. ಹಲವು ವರ್ಷಗಳ ಕಾನೂನು ಹೋರಾಟ, ಶೋಷಣೆ ಮತ್ತು ಸೆರೆವಾಸದ ನಂತರ ನ್ಯಾಯಾಲಯವು ಅವರನ್ನು ನಿರಪರಾಧಿ ಎಂದು ಸಾಬೀತು ಪಡಿಸಿದಾಗ ಇದೇ ಮಾಧ್ಯಮಗಳು ಈ ತೀರ್ಪಿನ ವಿಷಯವನ್ನು ಪ್ರಕಟಿಸುವಲ್ಲಿ ಯಾವ ಆಸಕ್ತಿಯನ್ನೂ ತೋರಿಸುವುದಿಲ್ಲ. ಮಾಧ್ಯಮಗಳ ಈ ರೀತಿಯ ವರ್ತನೆಯು ಅಮಾಯಕ ವ್ಯಕ್ತಿಗಳನ್ನೂ ಅವರ ಕುಟುಂಬಗಳನ್ನೂ ತೇಜೋವಧೆಗೆ ಗುರಿಪಡಿಸುತ್ತವೆ. ಇನ್ನಾದರೂ ರಾಷ್ಟ್ರದ ಜನತೆಯ ಆತ್ಮಸಾಕ್ಷಿಯು ಜಾಗೃತಗೊಂಡು ಇಂತಹ ಮುಗ್ಧ ಜನರನ್ನು ಶೋಷಿಸುವ ಅಭಿಯಾನದ ವಿರುದ್ಧ ಸಿಡಿದೇಳುವ ಕಾಲ ಸನ್ನಿಹಿತವಾಗಿದೆ..

ಇಂತಹ ಹಲವು ಘಟನೆಗಳನ್ನು ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾದ ಪ್ರಾಧ್ಯಾಪಕಿ ಮನೀಶಾ ಸೇಠಿಯವರು ಜಾಮಿಯಾ ಟೀಚರ್ಸ್ ಸಾಲಿಡಾರಿಟಿ ಅಸೋಸಿಯೇಶನ್‌ನ ವರದಿಯ ಮುಖ್ಯಾಂಶಗಳಲ್ಲಿ ತಿಳಿಸಿದ್ದಾರೆ. ಗುಜರಾತ್‌ನ ರಾಜಧಾನಿಯಲ್ಲಿರುವ ಅಕ್ಷರಧಾಮ ಮಂದಿರದ ಮೇಲಿನ ದಾಳಿಯ ಸಂಬಂಧ ಬಂಧಿಸಲಾದ ಅಹ್ಮದಾಬಾದಿನ ಆರು ಜನ ಯುವಕರ ಕುರಿತ ದಾಖಲೆಗಳನ್ನು 'ಅಪರೇಶನ್ ಅಕ್ಷರಧಾಮ' ಎಂಬ ಪುಸ್ತಕದಲ್ಲಿ ಬಹಿರಂಗಪಡಿಸಲಾಗಿದೆ. ಇದರ ಲೇಖಕರು ರಾಜೀವ್ ಯಾದವ್ ಮತ್ತು ಶಹನವಾಝ್ ಆಲಮ್. ಈ ಪುಸ್ತಕವನ್ನು 2015ರಲ್ಲಿ ಫರೋಸ್ ಮೀಡಿಯಾವು ಪ್ರಕಾಶಿಸಿತ್ತು. ಬಂಧಿತರನ್ನು ಸರ್ವೋಚ್ಚ ನ್ಯಾಯಾಲಯವು 2014ರ ಮೇ 26ರಂದು ನಿರಪರಾಧಿಗಳೆಂದು ತೀರ್ಪು ನೀಡಿತ್ತು.ಅದೇ

ದಿನ ನರೇಂದ್ರ ಮೋದಿಯವರು ಭಾರತದ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರನ್ನು ದೇವಸ್ಥಾನದ ಮೇಲಿನ ದಾಳಿಗಾಗಿ 2002ರ ಸೆಪ್ಟೆಂಬರ್‌ನಲ್ಲಿ ಬಂಧಿಸಲಾಗಿತ್ತು. ದೇವಸ್ಥಾನದ ಮೇಲೆ ದಾಳಿ ನಡೆಸಿದ ಇಬ್ಬರು ಆರೋಪಿಗಳಿಗೂ ಇವರಿಗೂ ಯಾವುದೇ ಸಂಬಂಧವಿರಲಿಲ್ಲ. ಅಷ್ಟೇ ಅಲ್ಲ ಇಬ್ಬರು ಶಂಕಿತ ದಾಳಿಕೋರರ ಗುರುತನ್ನು ಈ ವರೆಗೂ ಹೊರಗೆಡಹಲಾಗಿಲ್ಲ. 230 ಪುಟಗಳ ಈ ಪುಸ್ತಕವು ತಪ್ಪೊಪ್ಪಿಗೆಗಾಗಿ ನಡೆಸಿದ ದಬ್ಬಾಳಿಕೆ, ತಪ್ಪು ಸಾಕ್ಷ್ಯಗಳು ಮತ್ತು ಇಡೀ ಘಟನೆಯನ್ನು ಒಂದು ಪ್ರಹಸನದಂತೆ ಮಾಡಿದ ಪೊಲೀಸರ ಕೃತ್ಯಗಳ ವಿವರಣೆಗಳನ್ನೊಳಗೊಂಡಿದೆ. 'ಆಂತರಿಕ ಸುರಕ್ಷತೆಯ' ಹೆಸರಿನಲ್ಲಿ ಯಾವ ರೀತಿಯ ಘಟನೆಗಳು ನಡೆಯುತ್ತವೆ ಎಂಬುದನ್ನು ಈ ಪುಸ್ತಕ ಬಯಲಿಗೆಳೆದಿದೆ ಎನ್ನುತ್ತಾರೆ ಇದಕ್ಕೆ ಮುನ್ನುಡಿ ಬರೆದ ಗೌತಮ್ ನೌಲಾಕಾ. ಇಂತಹ ಮಾಧ್ಯಮ ವಿಚಾರಣೆಗಳು ಮತ್ತು ಕಿರುಕುಳಗಳ ಬಗ್ಗೆ ಜನತೆ ಎಚ್ಚೆತ್ತುಕೊಳ್ಳಬೇಕು. ಅಮಾಯಕ ಜನರನ್ನೂ ಅವರ ಪರಿವಾರದವರನ್ನೂ ಯಾವುದೇ ಅಂಕುಶವಿಲ್ಲದೆ ಸಂಕಷ್ಟಕ್ಕೀಡು ಮಾಡುವ ಸಮವಸ್ತ್ರಧಾರಿಗಳ ಕಡಿವಾಣರಹಿತ ದೌರ್ಜನ್ಯಗಳ ಬಗ್ಗೆಯೂ ಸಮುದಾಯಗಳ ಚಾರಿತ್ರ್ಯಹನನದ ಬಗ್ಗೆಯೂ ದೇಶ ಗಮನಹರಿಸಬೇಕು. ಆರೋಪಿಗಳ ಬಗ್ಗೆ ಮಾಧ್ಯಮಗಳು ತೀರ್ಪು ನೀಡುವ ಬದಲಾಗಿ ಕಾನೂನು ತನ್ನಷ್ಟಕ್ಕೆ ಕ್ರಮ ಕೈಗೊಳ್ಳುವಂತಾಗಬೇಕು. ಅಕ್ಷರಧಾಮ ದಾಳಿ ಪ್ರಕರಣದದಲ್ಲಿ ನಿರ್ದೋಷಿಗಳೆಂದು ಘೋಷಿತರಾದ ಇಬ್ಬರಿಗೆ ಕೆಳ ನ್ಯಾಯಾಲಯಗಳು ಮರಣದಂಡನೆಯನ್ನೂ ಉಳಿದ ನಾಲ್ವರಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಿತ್ತು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಈ ಪ್ರಕರಣವು ನ್ಯಾಯಾಂಗದ ಕಾರ್ಯಕ್ಷಮತೆಯ ಬಗ್ಗೆ ಪ್ರಶ್ನೆ ಏಳುವಂತೆ ಮಾಡಿದೆ.

## ಮಾಧ್ಯಮಗಳಲ್ಲಿ ಇಸ್ಲಾಮಿನ ಬಗ್ಗೆ ಭೀತಿ ಹುಟ್ಟಿಸುವ ವಿಚಾರಗಳು ಪ್ರಸಾರವಾಗುವಾಗ ನಾನೇನು ಮಾಡಬೇಕು?

ಇಸ್ಲಾಮೋಫೋಬಿಯಾ ಎಂಬುದು ಇಸ್ಲಾಮಿನ ಬಗ್ಗೆ ದ್ವೇಷ ಅಥವಾ ಭಯವನ್ನು ಹುಟ್ಟಿಸುತ್ತದೆ ಮತ್ತು ಇದಕ್ಕೆ ಮೂಲ ಕಾರಣ ಜನರ ಅಜ್ಞಾನವಾಗಿದೆ. ಇಸ್ಲಾಮ್ ಮತ್ತು ಮುಸ್ಲಿಮರ ಬಗೆಗಿನ ಎಲ್ಲ ರೀತಿಯ ನಕಾರಾತ್ಮಕ ಮತ್ತು ತಪ್ಪಾದ ಚಿತ್ರಣವನ್ನು ಸರಿಪಡಿಸುತ್ತಾ ಸಾಗುವುದು ಕಷ್ಟ ಸಾಧ್ಯ.

ಆದರೆ ಮಾಧ್ಯಮಗಳ ಮುಖ್ಯವಾಹಿನಿಗಳಲ್ಲಿ ಇಸ್ಲಾಮಿನ ಬಗೆಗಿನ ಚರ್ಚೆಗಳ ಒಟ್ಟಾರೆ ಸ್ವರೂಪವನ್ನು ಬದಲಿಸಬಹುದು. ಈ ಕೆಳಗೆ ಇದಕ್ಕೆ ಕೆಲವು ಸರಳ ಸಲಹೆಗಳಿವೆ.

**1. ಸಂಪಾದಕರಿಗೆ ಪತ್ರ ಬರೆಯಿರಿ:**

ಯಾವುದೇ ಲೇಖನ ಅಥವಾ ಅಭಿಪ್ರಾಯ ಸರಿಯಾಗಿಲ್ಲದಿದ್ದರೆ ಸಂಪಾದಕರಿಗೆ ಪತ್ರ ಬರೆದು ತಿಳಿಸಿರಿ. ಅದೇರೀತಿ ಉತ್ತಮ ಹಾಗೂ ಯೋಚನೆಗೆ ಗ್ರಾಸ ನೀಡುವಂತಹ ಬರಹಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಬರೆಯಿರಿ.

ಸಂಪಾದಕರಿಗೆ ಪತ್ರ ಹೆಚ್ಚು ಸಮಯ ತೆಗೆದುಕೊಳ್ಳುವ ಬರಹವಲ್ಲ. ಈ ಪತ್ರವು 200 ಪದಗಳಿಗೆ ಮೀರಬಾರದು ಮತ್ತು ಮುಖ್ಯ ಸಂದೇಶ ಅಥವಾ ವಾದವನ್ನು ಎದ್ದುಕಾಣುವಂತೆ ಮಾಡಬೇಕು. ಸಂಪಾದಕರಿಗೆ ನಿರಂತರವಾಗಿ ಪತ್ರ ಬರೆಯುತ್ತಿರಬೇಕು. ಏಕೆಂದರೆ ಹಲವು ಸಂಪಾದಕರಿಗೆ ಪ್ರತಿ ದಿನ ನೂರಾರು ಪತ್ರಗಳು ಬರುತ್ತಿರುವುದರಿಂದ ನಿಮ್ಮ ಪತ್ರ ಪತ್ರಿಕೆಯಲ್ಲಿ ಪ್ರಕಟವಾಗಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು.

**2. ಟಿ.ವಿ. ಮತ್ತು ರೇಡಿಯೋ ಕಾರ್ಯಕ್ರಮ ನಿರ್ಮಾಪಕರನ್ನು ಸಂಪರ್ಕಿಸಿ:**

ಮುಸ್ಲಿಮರ ಬಗ್ಗೆ ತಪ್ಪಾದ ಅಥವಾ ಪಕ್ಷಪಾತೀ ನಿಲುವನ್ನು ಹೊಂದಿರುವ ಕಾರ್ಯಕ್ರಮಗಳು ಪ್ರಕಟವಾದರೆ ಆ ಬಗ್ಗೆ ನಿರ್ಮಾಪಕರಿಗೆ ಫೋನ್ ಮುಖಾಂತರ ತಿಳಿಸಿರಿ ಅಥವಾ ಪತ್ರ ಬರೆಯಿರಿ. ನೀವು ಈ ಬಗ್ಗೆ ಶಿಷ್ಟಾಚಾರವನ್ನು ಪಾಲಿಸಬೇಕು. ವಿಶೇಷವಾಗಿ ನೀವು ಪ್ರಶ್ನಿಸಲು ಹೊರಟಿರುವ ಕಾರ್ಯಕ್ರಮದ ಹೆಸರು, ಪ್ರಕಟವಾದ ದಿನಾಂಕ ಮತ್ತು ಸಮಯದ ಬಗ್ಗೆ ತಿಳಿಸಬೇಕು. ಆ ಮಾಹಿತಿ ಅಥವಾ ಸಂದೇಶವು ಯಾವ ಕಾರಣದಿಂದ ಅಸಮರ್ಪಕ ಮತ್ತು ತಪ್ಪಾದುದು ಎಂಬುದನ್ನು ಸಮರ್ಥವಾಗಿ ತಿಳಿಸಿರಿ. ಇದಕ್ಕೆ ಬದಲಿಯಾಗಿ ಏನು ಮಾಡಬಹುದು ಎಂಬುದನ್ನು ತಿಳಿಸಿರಿ ಮತ್ತು ನಿರ್ಮಾಪಕರೊಂದಿಗೆ ನಿಮ್ಮ ಕಾಳಜಿಯ ಬಗ್ಗೆ, ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸಲು ಹೇಳಿರಿ. ಉತ್ತಮವಾದ, ಸಕಾರಾತ್ಮಕ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆಯ ಪ್ರತಿಕ್ರಿಯೆಯನ್ನು ನೀಡಲು ಮರೆಯದಿರಿ.

**3. ಮೂಲವನ್ನು ಕಂಡುಹಿಡಿಯಿರಿ:**

ಆಕ್ಷೇಪಾರ್ಹ ಸುದ್ದಿಗಳು, ಸುದ್ದಿ ಸಂಸ್ಥೆಯಿಂದ ಬಂದಿದ್ದರೆ ಆ ಬಗ್ಗೆ ಕೇವಲ ಪತ್ರಿಕಾ ಸಂಪಾದಕರೊಂದಿಗೆ ಮಾತನಾಡಿದರೆ ಪ್ರಯೋಜನವಿಲ್ಲ. ಪಿ.ಟಿ.ಐ., ಯು.ಎನ್.ಐ., ಎ.ಎನ್.ಐ. ಅಥವಾ ರಾಯಿಟರ್ಸ್‌ನಂತಹ ಸುದ್ದಿ ಸಂಸ್ಥೆಗಳನ್ನು ಸಂಪರ್ಕಿಸಲು ಪ್ರಯತ್ನಿಸಿ. ಈ ಸುದ್ದಿಯ ಲೇಖಕರು ಮತ್ತು ಸುದ್ದಿಸಂಸ್ಥೆಯನ್ನು ಸಂಪರ್ಕಿಸಿ ಅವರಿಗೆ ಈ ಬಗ್ಗೆ ಸರಿಯಾದ ತಿಳುವಳಿಕೆಯನ್ನು ನೀಡಲು ಪ್ರಯತ್ನಿಸಿ.

**4. ಸಕಾರಾತ್ಮಕ ಸಾಮಗ್ರಿಗಳನ್ನು ನೀಡಿರಿ:**

ಇಸ್ಲಾಮ್, ಮುಸ್ಲಿಮರು, ಪ್ರವಾದಿ ಮತ್ತು ಮುಸ್ಲಿಮ್ ವೈಯಕ್ತಿಕ ಕಾನೂನು ಅಥವಾ ಸಮುದಾಯಕ್ಕೆ ಸಂಬಂಧಿಸಿದ ಇನ್ನಿತರ ಅಂಶಗಳ ಬಗ್ಗೆ ಸರಿಯಾದ ಸಕಾರಾತ್ಮಕ ಅಂಶಗಳನ್ನು ಪರಾಮರ್ಶೆಗಾಗಿ ಪತ್ರಿಕಾ ಕಛೇರಿಗೆ ನೀಡಿರಿ. ಇಸ್ಲಾಮಿನ ವಿಶ್ವಕೋಶ, ಮುಸ್ಲಿಮ್ ಸಂಘಟನೆಗಳ ಕೈಪಿಡಿ ಇದ್ದರೆ ಅದರ ಪ್ರತಿಯನ್ನು ನಿಮ್ಮ ನಗರದಲ್ಲಿರುವ ಪತ್ರಿಕೆ ಮತ್ತು ಮಾಧ್ಯಮಗಳಿಗೆ ನೀಡಲು ಮರೆಯದಿರಿ. ಮುಸ್ಲಿಮರ ಹಬ್ಬಗಳು ಅಥವಾ ಇಸ್ಲಾಮೀ ಘಟನೆಗಳ ಬಗ್ಗೆ ಬರೆಯಲು ಕೆಲವು ಜನರಿಗೆ ತರಬೇತಿ ನೀಡಿ. ಈದುಲ್ ಫಿತರ್, ರಮಝಾನ್ ಮತ್ತು ಮಿಲಾದುನ್ನಬಿಯ ಸಂದರ್ಭಗಳಲ್ಲಿ ವಿಶೇಷ ಪುರವಣಿಯನ್ನು ಹೊರತರುವ ವ್ಯವಸ್ಥೆಯನ್ನು ಮಾಡಿರಿ.

**5. ಇಸ್ಲಾಮೀ ದಾಖಲೆಗಳ, ಸಂಶೋಧನೆಗಳ ಮಾಹಿತಿಯನ್ನು ಹೊಂದಿರುವ ಗ್ರಂಥಾಲಯಗಳ ಸ್ಥಾಪನೆ:**

ಮುಸ್ಲಿಮರ ಬಳಿ ತಮ್ಮದೇ ಆದ ದಾಖಲೀಕರಣ ವ್ಯವಸ್ಥೆ ಮತ್ತು ಗ್ರಂಥಾಲಯ ಇಲ್ಲ. ಹಾಗಾಗಿ ಹೆಚ್ಚಿನ ಸಂದರ್ಭಗಳಲ್ಲಿ ಅಲ್ಲಿಂದ ಇಲ್ಲಿಂದ ಕೇಳಿದ್ದನ್ನೇ ನಿಜವೆಂದು ನಂಬುವ ಸಾಧ್ಯತೆ ಹೆಚ್ಚು. ಆದ್ದರಿಂದ ಅವರಿಗೆ ತಮ್ಮದೇ ಆದ ಗ್ರಂಥಾಲಯವೊಂದಿದ್ದು ಅದರಲ್ಲಿ ಅಂಕಿ ಅಂಶಗಳು ಮತ್ತು ದಾಖಲೆಗಳ ಸಂಗ್ರಹವಿರಬೇಕು. ಈ ಮಹತ್ವದ ಕೆಲಸಕ್ಕಾಗಿ ವೇತನ ನೀಡಿ ವ್ಯಕ್ತಿಗಳನ್ನು ನೇಮಿಸಬೇಕು.

ರಾಷ್ಟ್ರೀಯ ಮತ್ತು ರಾಜ್ಯ ಬಜೆಟ್‌ಗಳ ಬಗ್ಗೆ ಅಧ್ಯಯನ ನಡೆಸುವುದು, ಸಾಚಾರ್ ಸಮಿತಿಯ ವರದಿ ರಂಗನಾಥ ಮಿಶ್ರ ಆಯೋಗ, ಮಂಡಲ್ ಆಯೋಗದ ವರದಿ ಇತ್ಯಾದಿಗಳ ಆಳ ಜ್ಞಾನ ಅವರಿಗೆ ಇರಬೇಕು. ಮುಸಲ್ಮಾನರ ಮೀಸಲಾತಿಗೆ ಸಂಬಂಧಪಟ್ಟ ಸರಕಾರಿ ಆದೇಶಗಳ ಬಗ್ಗೆ ತಿಳಿದಿರಬೇಕು. ಭಾರತೀಯ ನೋಂದಣಾಧಿಕಾರಿಯವರಿಂದ ಜನಗಣತಿಯ ವರದಿಯ ಮಾಹಿತಿಗಳನ್ನು ಪಡೆದಿರಬೇಕು. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ವರದಿಗಳನ್ನು ಸಂಗ್ರಹಿಸಿಡಬೇಕು. ಚುನಾವಣಾ ಪ್ರಣಾಳಿಕೆಗಳ ದಾಖಲೆಗಳು, ಪ್ರಮುಖ ನಾಯಕರ ಭಾಷಣಗಳು, ಚುನಾವಣಾ ಅಂಕಿ ಅಂಶಗಳು, ಕ್ಷೇತ್ರದ ಜನಸಂಖ್ಯಾ ದಾಖಲೆ ಇತ್ಯಾದಿಗಳನ್ನು ಈ ಲೈಬ್ರರಿಯಲ್ಲಿ ದೊರೆಯುವಂತಿರಬೇಕು. ಭಾಷಾಧಾರಿತ ಸಮುದಾಯಗಳ ಅಂಕಿ ಅಂಶಗಳು, ಭಯೋತ್ಪಾದನೆ ಅಥವಾ ಗಲಭೆಗಳ ಆಧಾರದಲ್ಲಿ ಬಂಧಿಸಲಾದ ವ್ಯಕ್ತಿಗಳ ಕುರಿತ ವರದಿಯ ದಾಖಲೆಗಳನ್ನು ಹೊಂದಿರಬೇಕು. ಸ್ಥಳೀಯ ಇತಿಹಾಸದ ಅಧ್ಯಯನ ನಡೆಸಿರಬೇಕು. ಸ್ಥಳೀಯ ಭಾಷೆ ಮತ್ತು ಆಡಳಿತದ ಬಗ್ಗೆಯೂ

ತಿಳಿದಿರಬೇಕು. ಇಸ್ಲಾಮ್ ಮತ್ತು ಮುಸ್ಲಿಮರಿಗೆ ಸಂಬಂಧಿಸಿದ ವಿಷಯಗಳ ಕುರಿತ ಪ್ರಮುಖ ಪುಸ್ತಕಗಳ ಅಧ್ಯಯನ ಇತ್ಯಾದಿಗಳನ್ನು ಮಾಡುತ್ತಿರಬೇಕು. ಪತ್ರಿಕೆಗಳು ನೀವು ನಿರ್ದಿಷ್ಟ ಲೇಖನಕ್ಕೆ ಪ್ರತಿಯಾಗಿ ಕಳುಹಿಸುವ ಉತ್ತರವನ್ನು ಅಥವಾ ಲೇಖನವನ್ನು ಪ್ರಕಟಣೆಗೆ ಸ್ವೀಕರಿಸಬೇಕಾದರೆ ಅವು ಅಂಕಿ-ಅಂಶಗಳ ಮತ್ತು ವಾಸ್ತವಾಂಶಗಳ ಆಧಾರದಲ್ಲಿರಬೇಕು ಮತ್ತು ನೀವು ಮಂಡಿಸುವ ವಿಷಯ ತರ್ಕಬದ್ಧವಾಗಿರಬೇಕು.

**6. ಹಬ್ಬದ ಸಂದರ್ಭಗಳಲ್ಲಿ ಶುಭಾಶಯ ಪತ್ರಗಳನ್ನು ಕಳುಹಿಸಿ:**

ಪತ್ರಿಕಾರಂಗದಲ್ಲಿರುವ ವರದಿಗಾರರು, ಬರಹಗಾರರು ಮತ್ತು ಸಂಪಾದಕರೊಂದಿಗೆ ಸಂಪರ್ಕವಿರಿಸಿಕೊಳ್ಳಿ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಶುಭಾಶಯ ಪತ್ರ ಕಳುಹಿಸಿ. ಅದು ಹೋಲಿ, ದೀಪಾವಳಿ, ಕ್ರಿಸ್‌ಮಸ್, ಮಕರ ಸಂಕ್ರಾಂತಿಗಳ ಸಂದರ್ಭವೇ ಆಗಿರಲಿ. ಅವರೊಂದಿಗೆ ಮಾನವೀಯ ನೆಲೆಯಲ್ಲಿ ಸಂಪರ್ಕವಿರಿಸಿಕೊಳ್ಳಲು ಇದು ಸೂಕ್ತ ವಿಧಾನ.

**7. ಹಬ್ಬ ಮತ್ತಿತರ ಸಮಾರಂಭಗಳಿಗೆ ಅವರನ್ನು ಆಹ್ವಾನಿಸಿರಿ:**

ಮಾಧ್ಯಮ ರಂಗದಲ್ಲಿರುವ ವರದಿಗಾರರು, ಬರಹಗಾರರು ಅಥವಾ ಸಂಪಾದಕರೊಂದಿಗೆ ಸಂಪರ್ಕವನ್ನು ಬೆಳೆಸಿರಿ. ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ನಿಮ್ಮ ಮನೆಯ ಅಥವಾ ಸಮುದಾಯ ಕೇಂದ್ರಗಳ ಔತಣಕೂಟಗಳಿಗೆ ಅವರನ್ನೂ ಆಹ್ವಾನಿಸಿ. ಸಸ್ಯಹಾರಿ ಆಹಾರ ಪದ್ಧತಿಯನ್ನು ಅನುಸರಿಸುವವರಿಗೆ ಅದರ ವ್ಯವಸ್ಥೆಯನ್ನು ಮಾಡಿರಿ. ಅವರ ಆದ್ಯತೆಗಳ ಬಗ್ಗೆ ಮುಂಚಿತವಾಗಿ ಅರಿಯಿರಿ. ಅವರಿಗೆ ಉಡುಗೊರೆಗಳನ್ನು ನೀಡುವುದು ಅಥವಾ ಅವರ ಕುಟುಂಬಿಕರಿಗೆ ಸಿಹಿತಿಂಡಿಯ ಪೊಟ್ಟಣಗಳನ್ನು ನೀಡುವುದು ಇನ್ನೂ ಒಳ್ಳೆಯದು.

# ಪೊಲೀಸ್ ಮೇಲ್ವಿಚಾರಣೆ

ಪೊಲೀಸರು ಮೇಲ್ವಿಚಾರಣೆಯನ್ನು ಯಾಕಾಗಿ ನಡೆಸುತ್ತಾರೆ. (ಉದಾಹರಣೆಗೆ: ದೂರವಾಣಿ, ಅಂತರ್ಜಾಲ ಇತ್ಯಾದಿ)

ಗುಪ್ತಚರ ವಿಭಾಗವು ತನ್ನ ಬಳಿ ಸೂಕ್ತ ಸಾಕ್ಷ್ಯಾಧಾರಗಳಿದ್ದರೆ ಅಥವಾ ಅಪರಾಧ ಸಂಭವಿಸುವ ಬಗ್ಗೆ ಸೂಕ್ತ ಅನುಮಾನಗಳಿದ್ದರೆ ನಮ್ಮ ಮೇಲೆ ಬೇಹುಗಾರಿಕೆ ನಡೆಸಬಹುದು.

## ಪೊಲೀಸರು ಗಮನಿಸಬೇಕಾದ ಪ್ರಚೋದನಕಾರಿ ಅಂಶಗಳು ಜಾಲತಾಣಗಳಲ್ಲಿರುತ್ತವೆಯೇ?

ರಾಷ್ಟ್ರೀಯ ಸುರಕ್ಷತೆಯ ಅಡಿಯಲ್ಲಿ ಅನುಮಾನಾಸ್ಪದ ಕೃತ್ಯಗಳ ಬಗ್ಗೆ ಅಂತರ್ಜಾಲದಲ್ಲಿ ಸಲಹೆಯನ್ನು ಕೇವಲ ಸಾರ್ವಜನಿಕರೇ ನೀಡುತ್ತಾರೆ.

## ಓರ್ವ ವ್ಯಕ್ತಿಯನ್ನು ಭಯೋತ್ಪಾದಕನಾಗಲು ಬ್ರೈನ್‌ವಾಷ್ ಮಾಡಲಾಗಿದೆ ಎಂದು ಪೊಲೀಸರಿಗೆ ಹೇಗೆ ತಿಳಿಯುತ್ತದೆ?

ಗುಪ್ತಚರ ಇಲಾಖೆಗಳು ಯಾವುದೇ ವ್ಯಕ್ತಿ ಅಥವಾ ಗುಂಪುಗಳನ್ನು ಗುರಿಯಾಗಿರಿಸಿ ಕಾರ್ಯಾಚರಿಸುವುದಿಲ್ಲ. ಅಪರಾಧ ಕೃತ್ಯಗಳನ್ನು ಬೆನ್ನಟ್ಟುವುದೇ ಅವರ ಮುಖ್ಯ ಗುರಿ. ಆದ್ದರಿಂದ ಸಮುದಾಯದ ಸದಸ್ಯರು (ಕುಟುಂಬಿಕರು, ಸ್ನೇಹಿತರು, ನೆರೆಹೊರೆಯವರು ಇತ್ಯಾದಿ) ಯಾವುದೇ ರೀತಿಯ ಅನುಮಾನಾಸ್ಪದ ವರ್ತನೆಗಳು ಕಂಡು ಬಂದರೆ ಆ ಕೂಡಲೇ ಸ್ಥಳೀಯ ವ್ಯಾಪ್ತಿಗೆ ಬರುವ ಪೊಲೀಸರಿಗೆ ತಿಳಿಸಬೇಕು.

ಹಿಂಸೆಯನ್ನೆಸಗುವಂತೆ ಮೂಲಭೂತ ಪರಿವರ್ತನೆ ಮಾಡುವುದು ಅತ್ಯಂತ ಸಂಕೀರ್ಣ ಸಮಸ್ಯೆಯಾಗಿದೆ. ಇದು ತುಂಬಾ ಸೂಕ್ಷ್ಮ ವಿಚಾರವಾಗಿದ್ದು ವ್ಯಕ್ತಿಯೋರ್ವನ ವರ್ತನೆಯಲ್ಲಿ ಅಥವಾ ಮನಃಸ್ಥಿತಿಯಲ್ಲಿ ಈ ರೀತಿಯ ಬದಲಾವಣೆಗಳನ್ನು ಗುರುತಿಸಲು

ಅವರ ಕುಟುಂಬಿಕರಿಗೆ, ಸ್ನೇಹಿತರಿಗೆ ಅಥವಾ ಸಮುದಾಯದ ಇತರ ಸದಸ್ಯರಿಗೆ ಮಾತ್ರ ಸಾಧ್ಯವಾಗುತ್ತದೆ. ಪೊಲೀಸರಿಗೆ ಈ ರೀತಿಯ ಅನುಮಾನಾಸ್ಪದ ವರ್ತನೆಗಳ ಬಗ್ಗೆ ಆರಂಭದಲ್ಲೇ ತಿಳಿಸಿದರೆ ಅತ್ಯುತ್ತಮ.

## ಕಾನೂನು ಜಾರಿಗೊಳಿಸುವ ಅಧಿಕಾರಿಗಳು ಮುಸಲ್ಮಾನರನ್ನು ಭಿನ್ನ ರೀತಿಯಲ್ಲಿ ನಡೆಸಿಕೊಳ್ಳಬಹುದೇ.

ಭಾರತದಲ್ಲಿ ಎಲ್ಲರಿಗೂ ಒಂದೇ ರೀತಿಯ ಹಕ್ಕು ಮತ್ತು ಕರ್ತವ್ಯಗಳಿವೆ. ಇದಕ್ಕೆ ಧರ್ಮ, ಜನಾಂಗ, ವಂಶ ಮತ್ತು ಲಿಂಗ ತಾರತಮ್ಯವಿಲ್ಲ. ಧಾರ್ಮಿಕ ಸ್ವಾತಂತ್ರ್ಯ ಮತ್ತು ಧರ್ಮದ ಆಧಾರದಲ್ಲಿ ತಾರತಮ್ಯ ನಡೆಯದಂತೆ ರಾಷ್ಟ್ರದ ಅತ್ಯುತ್ಕೃಷ್ಟ ಕಾನೂನಾದ ಸಂವಿಧಾನದ ಮೂಲಭೂತ ಹಕ್ಕುಗಳಲ್ಲೇ ಖಾತರಿ ನೀಡಲಾಗಿದೆ. ಇದು ಸರಕಾರವು ತೆಗೆದುಕೊಳ್ಳುವ ಎಲ್ಲ ಕ್ರಮಗಳಿಗೂ ಅನ್ವಯಿಸುತ್ತದೆ.

ಕಾನೂನು ಪರಿಪಾಲಕ ಅಧಿಕಾರಿಗಳ ಮುಖ್ಯ ಕರ್ತವ್ಯವು ನಿಮ್ಮನ್ನೊಳಗೊಂಡಂತೆ ಭಾರತದ ಎಲ್ಲ ಜನರ ರಕ್ಷಣೆಯಾಗಿದೆ. ಇದಕ್ಕೆ ತಾವೂ ಅವರಿಗೆ ಗೌರವ ಮತ್ತು ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಈ ಕಾನೂನು ಪರಿಪಾಲಕ ಅಧಿಕಾರಿಗಳೂ ಮನುಷ್ಯರಾಗಿದ್ದು ಅವರಲ್ಲಿಯೂ ಮಾನವ ಸಹಜ ಪೂರ್ವಗ್ರಹಗಳಿರುವ ಸಾಧ್ಯತೆಗಳಿವೆ. ಈ ಪಕ್ಷಪಾತವನ್ನು ಬಾಹ್ಯವಾಗಿ ಅವರು ತಮ್ಮ ಕೃತ್ಯಗಳಲ್ಲಿ ಅಥವಾ ಹೇಳಿಕೆಗಳಲ್ಲಿ ತೋರ್ಪಡಿಸದೆ ಇದ್ದರೆ ನಾವು ಅವರು ತಮ್ಮ ಕರ್ತವ್ಯವನ್ನು ವಸ್ತುನಿಷ್ಠವಾಗಿ ಮಾಡುತ್ತಿದ್ದಾರೆಂದೇ ಭಾವಿಸಬೇಕು. ನಿಮಗೆ ಕಾನೂನು ಪರಿಪಾಲಕ ಅಧಿಕಾರಿಗಳು ನಿಮ್ಮೊಂದಿಗೆ ಪೂರ್ವಗ್ರಹಪೀಡಿತರಾಗಿ ವರ್ತಿಸುತ್ತಾರೆಂದು ಕಂಡು ಬಂದರೆ ಅವರ ವಿರುದ್ಧ ಮೊಕದ್ದಮೆ ಹೂಡುವ ಹಕ್ಕು ನಿಮಗಿದೆ. ನೀವು ಎಲ್ಲ ಸಂದರ್ಭಗಳಲ್ಲೂ ಅವರೊಂದಿಗೆ ಗೌರವದಿಂದ ವರ್ತಿಸಬೇಕು. ಪೊಲೀಸ್ ಪೇದೆಯೊಂದಿಗೆ ಅನುಚಿತವಾಗಿ ವರ್ತಿಸುವುದೂ ಅಪರಾಧವಾಗಿದೆ ಎಂಬುದನ್ನು ನೀವು ತಿಳಿದಿರಬೇಕು.

## ಪೊಲೀಸರನ್ನು ಸಂವೇದನಶೀಲರನ್ನಾಗಿಸುವುದು:

ಕಾನೂನು ಪಾಲಕರಲ್ಲಿ ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದು ಅಗತ್ಯವಾಗಿದೆ. ಇಸ್ಲಾಮೀ ನಂಬಿಕೆ, ಸಂಕೇತಗಳು, ವಿಶ್ವಾಸ ಮತ್ತು ಆಚರಣೆಗಳ ಬಗ್ಗೆ ಪೊಲೀಸರಿಗೆ ತಿಳುವಳಿಕೆಯಿಲ್ಲದಿದ್ದರೆ ಅದು ಅವರ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಉಂಟು ಮಾಡಬಹುದು. ವಿಶೇಷವಾಗಿ

ಗುಪ್ತಚರ ಮಾಹಿತಿಗಳನ್ನು ಕಲೆಹಾಕುವ ಅಧಿಕಾರಿಗಳಿಗೆ ಈ ಬಗ್ಗೆ ಜ್ಞಾನವಿರಬೇಕಾದುದು ಅಗತ್ಯ. ಪೊಲೀಸ್ ಪಡೆಗೆ ಈ ನಿಟ್ಟಿನಲ್ಲಿ ಸಹಾಯ ಮಾಡಲು ಸಲಾಮ್ ಸೆಂಟರನ್ನೊಳಗೊಂಡ ಇನ್ನಿತರ ಹಲವು ಸಂಘ ಸಂಸ್ಥೆಗಳು ಸದಾ ಸಿದ್ಧ.

### ಭಯೋತ್ಪಾದನೆಗೆ ಇಳಿಯಬಹುದಾದ ಯುವಕರನ್ನು ರಕ್ಷಿಸಿ:

ಭಯೋತ್ಪಾದಕರ ಜಾಲದ ಕುಟಿಲ ತಂತ್ರದ ಬಲೆಗೆ ಬಿದ್ದ ಯುವಕರಿಗೆ ಆ ಕೂಡಲೇ ಆಪ್ತ ಸಮಾಲೋಚನೆ ನಡೆಸಬೇಕಾದುದು ಅಗತ್ಯ. ಪೊಲೀಸರು, ಸಮುದಾಯದ ಹಿರಿಯರ ಮತ್ತು ಕುಟುಂಬದ ಸದಸ್ಯರ ಸಹಕಾರದೊಂದಿಗೆ ಇದನ್ನು ಮಾಡಬಹುದು. ಯಾವುದೇ ಯುವಕರನ್ನು ಪೊಲೀಸರು ಬಂಧಿಸಿದ ನಂತರ "ಆತ ಐದು ವರ್ಷಗಳಿಗಿಂತಲೂ ಪೊಲೀಸ್ ಕಣ್ಗಾವಲಿನಲ್ಲಿದ್ದ" ಎಂಬ ಹೇಳಿಕೆಗಳನ್ನು ನೀಡುತ್ತಾರೆ. ಐದು ವರ್ಷಗಳ ವರೆಗೂ ಯಾಕಾಗಿ ಕಾಯುವುದು. ಆತ ಯಾವುದೇ ಸಮಯದಲ್ಲೂ ಅಪರಾಧವೆಸಗುವ ಸಾಧ್ಯತೆಗಳಿವೆ. ಐದು ವರ್ಷಗಳ ನಂತರ ಬಂಧಿಸಿ ನಮ್ಮ ಮಾನವ ಸಂಪನ್ಮೂಲವನ್ನು ಯಾಕೆ ದುರ್ಬಳಕೆ ಮಾಡಬೇಕು? ಪೊಲೀಸರು ಕೈಗೊಳ್ಳುವ ಯಾವುದೇ ಮಾನವೀಯ ಉಪಕ್ರಮವು ಖಂಡಿತವಾಗಿಯೂ ಸಮುದಾಯದ ಭರವಸೆಯನ್ನು ಹೆಚ್ಚಿಸುತ್ತದೆ.

## ಮುಸ್ಲಿಮರು ಮತ್ತು ಕಾನೂನು ಪಾಲಕರ ನಡುವೆ ಅಂತರವನ್ನು ಹೇಗೆ ಕಡಿಮೆಗೊಳಿಸಬಹುದು.

ಪರಸ್ಪರ ಅಂತರವನ್ನು ಕಡಿಮೆಗೊಳಿಸಲು ಈ ಕೆಳಗಿನ ವಿಧಾನವನ್ನು ಅನುಸರಿಸಬಹುದು.

- ಸಮುದಾಯ ಮತ್ತು ಕಾನೂನು ಪಾಲಕರೊಂದಿಗೆ ಹೆಚ್ಚೆಚ್ಚು ಸಂವಹನ ನಡೆಯುವಂತೆ ಪ್ರೇರೇಪಿಸುವುದು.
- ಸಮುದಾಯ ಮತ್ತು ಕಾನೂನು ಪಾಲಕರಿಗೆ ಪರಸ್ಪರರ ಬಗ್ಗೆ ಅರಿವು ಮೂಡಿಸಲು ಮಾಹಿತಿ ಕಾರ್ಯಾಗಾರಗಳನ್ನು ನಡೆಸುವುದು.
- ಸಮುದಾಯ ಮತ್ತು ಕಾನೂನು ಪಾಲಕರ ಮಧ್ಯೆ ಸಂಬಂಧವನ್ನು ಸುದೃಢಗೊಳಿಸುವುದು.
- ಯುವಕರನ್ನು ಪೊಲೀಸ್ ಮತ್ತಿತರ ಕಾನೂನು

ಅನುಷ್ಠಾನಗೊಳಿಸುವ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಸೇರುವಂತೆ ಪ್ರೇರೇಪಿಸುವುದು ಮತ್ತು ಈಗಾಗಲೇ ಇರುವ ಮುಸ್ಲಿಮ್ ಯುವಕರನ್ನು ಇತರರಿಗೆ ಮಾದರಿಯಾಗಿ ಪ್ರಸ್ತುತಪಡಿಸುವುದು.

- ಮಸೀದಿಗಳಿಗೆ ಪೊಲೀಸರನ್ನು ಆಹ್ವಾನಿಸಿ: ಕೆಲವು ಪೊಲೀಸ್ ಅಧಿಕಾರಿಗಳು ಪ್ರತಿಯೊಂದುಮಸೀದಿಯಲ್ಲಿಯೂ ನೆಲಮಾಳಿಗೆ ಇದ್ದು ಅದನ್ನು ರಹಸ್ಯ ಗೋದಾಮಿನ ರೀತಿಯಲ್ಲಿ ಬಳಸಲಾಗುತ್ತದೆ ಎಂಬ ಭಾವನೆಯನ್ನು ಹೊಂದಿದ್ದಾರೆ. ಅವರ ಈ ಶಂಕೆಯನ್ನು ನೀಗಿಸಲಿಕ್ಕಾಗಿ ಹಬ್ಬಗಳ ಸಂದರ್ಭದಲ್ಲಿ ಅವರನ್ನು ಮಸೀದಿಗಳಿಗೆ ಆಹ್ವಾನಿಸಬೇಕು. ಹೊಸ ಪೊಲೀಸ್ ಆಯುಕ್ತರ ನೇಮಕವಾದಾಗ ಅವರನ್ನು ಶುಕ್ರವಾರದ ಪ್ರಾರ್ಥನೆಯ ನಂತರ ಮುಸ್ಲಿಮ್ ಸಮುದಾಯವನ್ನುದ್ದೇಶಿಸಿ ಹತ್ತು ನಿಮಿಷಗಳ ಕಾಲ ಮಾತನಾಡುವಂತೆ ಆಹ್ವಾನಿಸಬೇಕು. ಅವರ ನಿಯುಕ್ತಿಗಾಗಿ ಅವರನ್ನು ಅಭಿನಂದಿಸಿ ಹೂಮಾಲೆ ಹಾಕಿ, ಕುರ್‌ಆನ್‌ನ ಅನುವಾದ ಗ್ರಂಥವನ್ನು, ಇಸ್ಲಾಮಿನ ಬಗೆಗಿನ ಪುಸ್ತಕಗಳನ್ನು ನೀಡಿದರೆ ಅವರಿಗೆ ಇಸ್ಲಾಮ್ ಮತ್ತು ಮುಸ್ಲಿಮರ ಬಗೆಗಿನ ತಪ್ಪುಕಲ್ಪನೆಗಳನ್ನು ನಿವಾರಿಸಬಹುದು. ಅದೇರೀತಿ ಅವರ ಸಲಹೆಗಾರರಿಗೆ, ಸಹಾಯಕರಿಗೆ ಮತ್ತು ಅವರ ಅಧಿಕೃತ ವಾಹನ ಚಾಲಕರಿಗೂ ಇಂತಹ ಪುಸ್ತಕಗಳನ್ನು ನೀಡಿ.

- ಹಿಂದೂಗಳಿಗೆ ದೀಪಾವಳಿಯ ಶುಭಾಶಯಗಳನ್ನು, ಕ್ರೈಸ್ತರಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳನ್ನು ತಿಳಿಸಲು ಶುಭಾಶಯ ಪತ್ರಗಳನ್ನು ಕಳುಹಿಸಿ. ರಮಝಾನ್ ಮತ್ತು ಬಕ್ರೀದ್ ಹಬ್ಬದ ಸಂದರ್ಭಗಳಲ್ಲಿ ಅವರನ್ನು ಮಸೀದಿಗಳಿಗೆ ಅಥವಾ ಸಮುದಾಯ ಕೇಂದ್ರಗಳಿಗೆ ಆಹ್ವಾನಿಸಿ. ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟದ ವ್ಯವಸ್ಥೆಯನ್ನು ಮಾಡಿ. ಇಸ್ಲಾಮಿನ ಬಗ್ಗೆ ಪುಸ್ತಕಗಳನ್ನು ಅವರಿಗೆ ಕಾಣಿಕೆಯಾಗಿ ನೀಡಿ ಮತ್ತು ಅವರ ಕುಟುಂಬಿಕರಿಗೆ ಕೊಡಲು ಸಿಹಿತಿಂಡಿಗಳನ್ನು ನೀಡಿ.

# ಗುಪ್ತಚರ ಮತ್ತು ಕಾನೂನು ಪಾಲಕ ಅಧಿಕಾರಿಗಳಿಗೆ ಕೆಲವು ಶಿಫಾರಸುಗಳು:

ಭಾರತೀಯ ಮುಸ್ಲಿಮರು ನಮ್ಮ ಸಮಾಜದ ಎಲ್ಲ ರಂಗಗಳಲ್ಲಿ ಮಹತ್ವದ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾರೆ. ಎಲ್ಲ ಭಾರತೀಯರಂತೆ ಮುಸ್ಲಿಮರೂ ತಮ್ಮ ರಾಷ್ಟ್ರದ ಮತ್ತು ದೇಶವಾಸಿಗಳ ಸುರಕ್ಷತೆಗೆ ಬದ್ಧರಾಗಿದ್ದಾರೆ. ಭಾರತೀಯ ಮುಸ್ಲಿಮ್ ಸಮುದಾಯ ಮತ್ತು ಗುಪ್ತಚರ ಇಲಾಖೆ ಹಾಗೂ ಕಾನೂನು ಪಾಲಕ ಅಧಿಕಾರಿಗಳ ಮಧ್ಯೆ ನಂಬಿಕೆ ಮತ್ತು ಸಹಕಾರವನ್ನು ಖಾತ್ರಿಗೊಳಿಸಲಿಕ್ಕಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

1. ಧಾರ್ಮಿಕತೆಯನ್ನು ಮೂಲಭೂತವಾದದೊಂದಿಗೆ ಜೋಡಿಸಬೇಡಿ ಅಥವಾ ಹೆಚ್ಚು ಧರ್ಮಿಷ್ಠನಾದ ವ್ಯಕ್ತಿ ಹಿಂಸಾಚಾರಕ್ಕಿಳಿಯುವ ಸಾಧ್ಯತೆ ಅಧಿಕ ಎಂದು ತಿಳಿಯಬೇಡಿ.

2. ಇಸ್ಲಾಮ್ ಮತ್ತು ಭಯೋತ್ಪಾದನೆಯ ಮಧ್ಯೆ ಸಂಬಂಧ ಕಲ್ಪಿಸುವ ತಪ್ಪು ಪಾರಿಭಾಷಿಕಗಳನ್ನು ತೊರೆಯಿರಿ. ಹೆಚ್ಚು ವೃತ್ತಿಪರವಾದ ಪಾರಿಭಾಷಿಕಗಳನ್ನೇ ಬಳಸಿ. 'ಇಸ್ಲಾಮೀ ಭಯೋತ್ಪಾದನೆ', 'ಇಸ್ಲಾಮೀಕರಣ'. 'ಇಸ್ಲಾಮೀ ಉಗ್ರಗಾಮಿಗಳು' ಎಂಬ ಪದ ಪ್ರಯೋಗಗಳ ಬದಲಿಗೆ'ಅಲ್ ಕಾಯಿದಾದ ಉಗ್ರವಾದಿಗಳು' ಅಥವಾ 'ಐಸಿಸ್‌ನ ಭಯೋತ್ಪಾದಕರು' ಎಂದು ನಿಖರವಾಗಿ ಹೇಳಿ.

3. ಅನುಚಿತವಾದ ರೀತಿಯಲ್ಲಿ ಮಾಹಿತಿ ಕಲೆ ಹಾಕುವ ಕ್ರಮವನ್ನು ನಿಲ್ಲಿಸಿ. ಉದಾಹರಣೆಗೆ ಉದ್ಯೋಗದ ಸ್ಥಳಕ್ಕೆ ಭೇಟಿ ನೀಡುವುದು, ಹೊಸಬರನ್ನು ಬೆದರಿಸುವುದು, ವ್ಯಕ್ತಿಗಳ ಧಾರ್ಮಿಕತೆಯನ್ನು ಪ್ರಶ್ನಿಸುವುದು ಮತ್ತು ನ್ಯಾಯದ ಪ್ರಾತಿನಿಧ್ಯವನ್ನು ನಿರಾಕರಿಸುವುದು.

4. ಮಾಹಿತಿಯನ್ನು ಸಂಗ್ರಹಿಸುವ, ಅಪರಾಧಿಗಳ ಮೇಲೆ ಕಣ್ಗಾವಲಿಡುವಂತಹ ಎಲ್ಲ ಕಾರ್ಯಾಚರಣೆಗಳೂ ಕಾನೂನಿನ ಚೌಕಟ್ಟಿನೊಳಗಿರುವಂತೆ ನೋಡಿಕೊಳ್ಳಬೇಕು.

5. ತನಿಖೆಯ ವಸ್ತುನಿಷ್ಠತೆಯನ್ನು ದೃಢಪಡಿಸಲಿಕ್ಕಾಗಿ ತಪಾಸಣೆ ಅಥವಾ ತನಿಖೆಗೆ ಒಳಪಡಿಸಿದ ವ್ಯಕ್ತಿಯ ಜನಾಂಗ, ವರ್ಗ ಮತ್ತು ಧಾರ್ಮಿಕ ಹಿನ್ನೆಲೆಯ ಬಗೆಗಿನ ಅಂಕಿ ಅಂಶಗಳನ್ನು ಸಂಗ್ರಹಿಸಿ ಅದನ್ನು ಬಹಿರಂಗಪಡಿಸಬೇಕು. ಇದರಿಂದ ನಿರ್ದಿಷ್ಟ ಸಮುದಾಯವನ್ನೇ ಗುರಿಯಾಗಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಅನುಮಾನ ನೀಗಬಹುದು.

6. ಸಂಶಯ ಮತ್ತು ಪಿತೂರಿಗಳ ನಡುವೆ ಬಹಳ ವ್ಯತ್ಯಾಸವಿದೆ. ವ್ಯಕ್ತಿಯೋರ್ವನನ್ನು ಅನುಮಾನದ ಮೇಲೆ ಬಂಧಿಸಿದರೆ ಆತನಿಗೆ ಭಯೋತ್ಪಾದಕ ಎಂಬ ಹಣೆಪಟ್ಟಿಯನ್ನು ಕಟ್ಟಲು ಆತುರ ಬೇಡ. ಇಂತಹ ಪ್ರಕರಣಗಳಲ್ಲಿ ನ್ಯಾಯಪೂರ್ಣವಾಗಿ ಕಾರ್ಯನಿರ್ವಹಿಸಿ. ಯಾವುದೇ ಪೂರ್ವಗ್ರಹ ಮತ್ತು ತಾರತಮ್ಯಕ್ಕೆ ಅವಕಾಶ ಬೇಡ.

7. ಭಯೋತ್ಪಾದಕರಿಗೆ'ಜಿಹಾದಿ'ಗಳೆಂಬ ಹಣೆಪಟ್ಟಿ ಬೇಡ.ಈ ರೀತಿಯ ಹಣೆಪಟ್ಟಿಯಿಂದ ಅವರಿಗೆ ಮತ್ತಷ್ಟು ಉತ್ತೇಜನ ಸಿಗುತ್ತದೆ. ಮಾತ್ರವಲ್ಲ, ಅವರ ಕೃತ್ಯಗಳಿಗೆ ಸಮರ್ಥನೆಯೂ ಸಿಕ್ಕಂತಾಗುತ್ತದೆ. ಭಯೋತ್ಪಾದನೆ ಜಿಹಾದ್ ಅಲ್ಲ. ಜಿಹಾದ್‌ಗೆ ಇಸ್ಲಾಮಿನಲ್ಲಿ ಬೇರೆಯೇ ವ್ಯಾಖ್ಯೆಯಿದೆ.

8. ಮುಸ್ಲಿಮರು ವೈವಿಧ್ಯಮಯ ಸಂಸ್ಕೃತಿ, ಧಾರ್ಮಿಕಾಚರಣೆ ಮತ್ತು ಜನಾಂಗೀಯತೆಯನ್ನು ಹೊಂದಿದ್ದಾರೆ. ಆಪಾದನೆಯ ನೆಲೆಯಲ್ಲಿ ಇಡೀ ವರ್ಗವನ್ನು ತಪ್ಪಿತಸ್ಥರನ್ನಾಗಿಸಬಾರದು.

9. ಪರಸ್ಪರ ಗೌರವದ ಆಧಾರದಲ್ಲಿ ಮುಸ್ಲಿಮ್ ಸಮುದಾಯದೊಂದಿಗೆ ಸಂಬಂಧ ಸ್ಥಾಪಿಸಿ..

10. ಮುಸ್ಲಿಮ್ ಸಮುದಾಯದ ಯುವಕರು ಕಾನೂನು ಜಾರಿಗೊಳಿಸುವ ರಂಗದಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಿ ಮತ್ತು ಅದಕ್ಕಾಗಿ ಹೆಚ್ಚಿನ ಪ್ರಯತ್ನ ನಡೆಸಲು ಮುಂದಾಗಿ.

11. ಇಸ್ಲಾಮ್ ಮತ್ತು ಮುಸ್ಲಿಮರ ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸಿ.

12. ಸಮುದಾಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತು ಮಸೀದಿಗಳಿಗೆ ಭೇಟಿ ನೀಡಿ.

13. ಭಯೋತ್ಪಾದನೆಯ ಆರೋಪದಲ್ಲಿ ಜನರನ್ನು ಬಂಧಿಸುವ ಇಡೀ ಕಾರ್ಯಾಚರಣೆಯ ಕಾರ್ಯ ವೈಖರಿಯ ಮರುಪರಿಶೀಲನೆ ನಡೆಯಲಿ. ಸಾರ್ವಜನಿಕ ವಲಯದಲ್ಲಿ ಮತ್ತು ಮಾಧ್ಯಮಗಳ ಮುಖಾಂತರ ಶಂಕಿತ ಆರೋಪಿಗಳ ಮತ್ತು ಅವರ ಪರಿವಾರದ ತೇಜೋವಧೆಗೆ ಅವಕಾಶ ಬೇಡ. ಅದೇ ರೀತಿ ಸಮವಸ್ತ್ರಧಾರಿಗಳು ತಾವು ಎಸಗುವ ಅಕ್ರಮಗಳಿಗೆ (ಸೆರೆಯಲ್ಲಿರುವಾಗ ಹಿಂಸೆ, ದಬ್ಬಾಳಿಕೆ ದೌರ್ಜನ್ಯ ಇತ್ಯಾದಿ) ಜವಾಬ್ದಾರಿ ವಹಿಸುವಂತಾಗಬೇಕು. ಇದರಿಂದ ಅತಿರೇಕ ಮತ್ತು ದೌರ್ಜನ್ಯಗಳಿಗೆ ಕಡಿವಾಣ ಹಾಕಬಹುದು.

# ದೇಶಬಾಂಧವರೊಂದಿಗೆ ಮನದ ಮಾತು

ಇಸ್ಲಾಮ್ ಧರ್ಮವು ನ್ಯಾಯ ಮತ್ತು ಸಮಾನತೆಯನ್ನು ಪ್ರತಿಪಾದಿಸುತ್ತದೆ. ಮುಸ್ಲಿಮರಿರಲಿ, ಹಿಂದೂಗಳಿರಲಿ, ಕ್ರೈಸ್ತರಿರಲಿ, ಇನ್ನಿತರ ಯಾವುದೇ ಧರ್ಮವನ್ನು ಅನುಸರಿಸುವವರಿರಲಿ, ಅಥವಾ ಯಾವುದೇ ಧರ್ಮವನ್ನು ಅನುಸರಿಸದವರಿರಲಿ, ಭಾರತೀಯರೆಂಬ ನೆಲೆಯಲ್ಲಿ ನಾವೆಲ್ಲರೂ ನಮ್ಮ ನೆಲ, ಇತಿಹಾಸ ಮತ್ತು ಸಂಸ್ಕೃತಿಯನ್ನು ಪರಸ್ಪರ ಹಂಚಿಕೊಂಡು ಬದುಕುತ್ತಿದ್ದೇವೆ. ನಮ್ಮ ಧಾರ್ಮಿಕ ಆಚರಣೆಗಳಲ್ಲಿ ಇರುವ ವ್ಯತ್ಯಾಸವು ನಮ್ಮ ನಡುವೆ ಸಂಶಯ, ಅಂತರ, ಶತ್ರುತ್ವ ಮತ್ತು ದ್ವೇಷಕ್ಕೆ ಕಾರಣವಾಗಬಾರದು. ಮುಸ್ಲಿಮರು ನಿಜವಾಗಿಯೂ ಮತಾಂತರವನ್ನೇ ತಮ್ಮ ಕಾಯಕವನ್ನಾಗಿ ಮಾಡಿಕೊಂಡಿದ್ದರೆ ಅವರು ಇಂದು ಭಾರತದಲ್ಲಿ ಅಲ್ಪಸಂಖ್ಯಾತರಾಗಿ ಉಳಿಯುತ್ತಿರಲಿಲ್ಲ. ಅಂತೆಯೇ ಮುಸ್ಲಿಮರು ಮತ್ತು ಹಿಂದೂಗಳು ನೂರಾರು ವರ್ಷಗಳಿಂದ ಈ ದೇಶದಲ್ಲಿ ಸಹಿಷ್ಣುತೆಯಿಂದ ಬಾಳುತ್ತಿದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಸಾಮರಸ್ಯದಿಂದ ಬದುಕದಿರುತ್ತಿದ್ದರೆ ಭಾರತದಲ್ಲಿ ಮುಸ್ಲಿಮರು 600 ವರ್ಷಗಳ ಸುದೀರ್ಘ ಕಾಲ ಆಳ್ವಿಕೆ ನಡೆಸುವುದು ಸಾಧ್ಯವಿರುತ್ತಿರಲಿಲ್ಲ. ಆದ್ದರಿಂದಲೇ ಇತಿಹಾಸದ ಸರಿಯಾದ ಅರಿವು ಬೆಳೆಸಿಕೊಳ್ಳುವುದು ಮತ್ತು ನಮ್ಮ ನಡುವಿನ ಮೈತ್ರಿಯ ನೆಲೆಗಳನ್ನು ಶೋಧಿಸುವುದು ಹಾಗೂ ಭದ್ರಪಡಿಸುವುದು ಬಹಳ ಮುಖ್ಯ.

ಭಾರತದ ಸಂದರ್ಭದಲ್ಲಿ ಜಾತ್ಯತೀತತೆ ಎಂದರೆ ಧರ್ಮವನ್ನು ವಿರೋಧಿಸುವುದು ಎಂದರ್ಥವಲ್ಲ. ಇಲ್ಲಿ ಎಲ್ಲ ಮತ ಧರ್ಮಗಳ ಜನರಿಗೂ ತಮ್ಮ ವಿಶ್ವಾಸ, ಆಚರಣೆಗಳನ್ನು ಅನುಸರಿಸಿಕೊಂಡು ಬದುಕುವ ಸ್ವಾತಂತ್ರ್ಯವಿದೆ. ಆದರೆ ಸರಕಾರವು ಯಾವುದೇ ನಿರ್ದಿಷ್ಟ ಧರ್ಮವನ್ನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಬೆಂಬಲಿಸುವುದಿಲ್ಲ. ನ್ಯಾಯ ಮತ್ತು ಕಾನೂನಿನ ಮುಂದೆ ಎಲ್ಲರೂ ಸಮಾನರು ಹಾಗೂ ಎಲ್ಲರಿಗೂ ಈ ದೇಶದಲ್ಲಿ ಸಮಾನ ಅಧಿಕಾರವಿದೆ ಎಂದು ಪ್ರತಿಪಾದಿಸುವ ಸಂವಿಧಾನವನ್ನು ನಾವೆಲ್ಲರೂ ಒಪ್ಪಿಕೊಂಡು ಬದುಕುತ್ತಿದ್ದೇವೆ. ಆದ್ದರಿಂದಲೇ ಸಂವಿಧಾನವನ್ನು ಹತ್ತಿಕ್ಕುವ ಯಾವುದೇ ಪ್ರಯತ್ನವು ರಾಷ್ಟ್ರವನ್ನು ದುರ್ಬಲಗೊಳಿಸುತ್ತದೆ. ನಾವೆಲ್ಲರೂ ನಮ್ಮ ನಮ್ಮ ಧರ್ಮಗಳನ್ನು ಸರಿಯಾಗಿ ಗ್ರಹಿಸಿಕೊಂಡು ಅನುಮಾನದ ಗೋಡೆಗಳನ್ನು ಕೆಡವಿ ಹಾಕೋಣ. ಸಹಬಾಳ್ವೆಯ ಹಾದಿಯಲ್ಲಿ ಮುನ್ನಡೆಯೋಣ. ಮತಾಂಧತೆಯ ಕೊಚ್ಚೆಯಿಂದ ಹೊರಬಂದು ಪ್ರೀತಿ ಮತ್ತು ಔದಾರ್ಯದ ಭಾವದೊಂದಿಗೆ ಪರಸ್ಪರ ಹತ್ತಿರವಾಗೋಣ. ಪೂರ್ವಗ್ರಹ ಮತ್ತು ಪಕ್ಷಪಾತದ ಕಾರ್ಮೋಡ ಕರಗಲಿ. ದೇಶಬಾಂಧವರ ಮನದಲ್ಲಿ ಭಯ ಮೂಡಿಸುವಂತಹ ನಮ್ಮ ಧರ್ಮವೇ ಶ್ರೇಷ್ಠ ಎಂಬ ಮೇಲರಿಮೆಯನ್ನು ಕಿತ್ತುಹಾಕೋಣ.

ಕ್ಷಮೆ ಮತ್ತು ಔದಾರ್ಯವೇ ನಮ್ಮನ್ನು ಮುನ್ನಡೆಸುವ ದೀವಟಿಕೆಯಾಗಲಿ. ದ್ವೇಷ ಮತ್ತು ಪ್ರತೀಕಾರದ ಭಾವನೆಗಳು ನಮ್ಮ ಪ್ರಗತಿಗೆ ಮಾರಕ. ಆಯ್ಕೆ ಖಂಡಿತವಾಗಿಯೂ ನಮ್ಮ ಕೈಯಲ್ಲಿದೆ.